ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೩೯

**ಪಟ್ಟಿ – ೦೭**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತಾರನೆಯ ಅಧಿವೇಶನ**

**ಬುಧವಾರ, ದಿನಾಂಕ : ೨೦ನೇ ಆಗಸ್ಟ್, ೨೦೨೫**

---

## ಸಮೂಹ – III

೧. ಸಾರಿಗೆ ಮತ್ತು ಮುಜರಾಯಿ ಸಚಿವರು

೨. ಲೋಕೋಪಯೋಗಿ ಸಚಿವರು

೩. ಕಂದಾಯ ಸಚಿವರು

೪. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

೫. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

೬. ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

---

## ಕರ್ನಾಟಕ ಭವನಗಳ ನಿರ್ವಹಣೆಯ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೪೨ (೧೦೬೮) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮುಜರಾಯಿ ಇಲಾಖೆ ಅಧೀನದಲ್ಲಿ ಬರುವ ಒಟ್ಟು ಕರ್ನಾಟಕ ಭವನಗಳ ಸಂಖ್ಯೆ ಎಷ್ಟು ; ಸದರಿ ಭವನಗಳು ಯಾವುವು ; (ರಾಜ್ಯವಾರು ಮಾಹಿತಿ ಒದಗಿಸುವುದು)

(ಆ) ಸದರಿ ಕರ್ನಾಟಕ ಭವನದಲ್ಲಿ ಯಾರು ಯಾರಿಗೆ ಕೊಠಡಿಗಳನ್ನು ನೀಡಲಾಗುತ್ತಿದೆ ; ಕೊಠಡಿಗಳನ್ನು ನೀಡಲು ಇರುವ ಮಾನದಂಡಗಳು ಯಾವುವು ;

(ಇ) ಈ ಕರ್ನಾಟಕ ಭವನಗಳನ್ನು ನಿರ್ವಹಣೆ ಮಾಡುತ್ತಿರುವವರು ಯಾರು ; ಸದರಿ ಕರ್ನಾಟಕ ಭವನಗಳ ಸಮರ್ಪಕ ನಿರ್ವಹಣೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ರೀತಿಯ ಅಸಮರ್ಪಕ ನಿರ್ವಹಣೆಯಿಂದಾಗಿ ಗಣ್ಯರು ಹಾಗೂ ಅಧಿಕಾರಿಗಳು ಸದರಿ ಕರ್ನಾಟಕ ಭವನಗಳಿಗೆ ತೆರಳದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಸದರಿ ಕರ್ನಾಟಕ ಭವನಗಳ ಸಮರ್ಪಕ ನಿರ್ವಹಣೆ ಮಾಡಿ, ಗುಣಮಟ್ಟದ ಸೌಕರ್ಯ ನೀಡಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ ? (ಸಂಪೂರ್ಣ ಮಾಹಿತಿ ಒದಗಿಸುವುದು)

## ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಹಾಸ್ಟೆಲ್‌ಗಳ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೪೩ (೧೦೬೯) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು ;

(ಆ) ಅವುಗಳಲ್ಲಿ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ಅಲ್ಪಸಂಖ್ಯಾತ ಸಂಸ್ಥೆಗಳು ನಡೆಸುವ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು ; ಅವು ಯಾವುವು ; (ಜಿಲ್ಲಾವಾರು/ತಾಲ್ಲೂಕುವಾರು ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಸದರಿ ಹಾಸ್ಟೆಲ್‌ಗಳಲ್ಲಿ ನೀಡುತ್ತಿರುವ ವಸತಿ. ಊಟ, ಗ್ರಂಥಾಲಯ, ನೀರು ಹಾಗೂ ಇತರೆ ಗುಣಮಟ್ಟದ ಸೌಲಭ್ಯಗಳನ್ನು ಸರಿಯಾಗಿ ನಿರ್ವಹಣೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಮಕ್ಕಳ ವಿದ್ಯಾಭ್ಯಾಸ ಹಾಗೂ ಆರೋಗ್ಯದ ದೃಷ್ಟಿಯಿಂದ ಮಕ್ಕಳಿಗೆ ಗುಣಮಟ್ಟದ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ ? (ಸಂಪೂರ್ಣ ಮಾಹಿತಿ ಒದಗಿಸುವುದು)

## ತುಮಕೂರು ನೆಲಮಂಗಲ ಟೋಲ್ ಅವಧಿ ಮುಗಿದಿರುವ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೪೪ (೧೦೫೪) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿಂದ ತುಮಕೂರಿಗೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ಯಾವುದು ; ಅದು ಎಷ್ಟು ಕಿಲೋಮೀಟರ್ ಇದೆ ; ರಸ್ತೆಯನ್ನು (ಹೆದ್ದಾರಿ) ಅಗಲೀಕರಣಮಾಡುವ ಸಾಧ್ಯತೆ ಇದೆಯೇ ;

(ಆ) ಈ ಹೆದ್ದಾರಿಯನ್ನು ನಿರ್ಮಾಣ ಮಾಡಿ ನಿರ್ವಹಣೆ ಮಾಡುತ್ತಿರುವ ಸಂಸ್ಥೆ ಯಾವುದು ; ಇದು ಮಾಡಿಕೊಂಡಿರುವ ಒಡಂಬಡಿಕೆ ಅನ್ವಯ ಇವರ ಅವಧಿ ಯಾವಾಗ ಮುಗಿದಿದೆ ; (ವಿವರವಾದ ಮಾಹಿತಿ ನೀಡುವುದು)

(ಇ) ಸದರಿ ರಸ್ತೆಯ ನಿರ್ವಹಣೆ ಸಂಸ್ಥೆಯ ಒಡಂಬಡಿಕೆ ಅವಧಿಯು ಮುಗಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ರಸ್ತೆಯನ್ನು ಟೋಲ್ ಮುಕ್ತ ರಸ್ತೆಯನ್ನಾಗಿ ಮಾಡದೆ ಸಂಸ್ಥೆಯೇ ಟೋಲ್ ಶುಲ್ಕವನ್ನು ಸಂಗ್ರಹಿಸುತ್ತಿರುವುದು ನ್ಯಾಯ ಸಮ್ಮತವೇ ;

(ಈ) ಹಾಗಿದ್ದಲ್ಲಿ, ಸರ್ಕಾರವು ಇದರ ಸಂಬಂಧ ಇಲ್ಲಿಯವರೆಗೂ ನಡೆಸಿರುವ ಪತ್ರ ವ್ಯವಹಾರಗಳ ಯಥಾ ಪ್ರತಿಗಳನ್ನು ನೀಡುವುದು ;

(ಉ) ಒಂದು ದಿನಕ್ಕೆ ಸರಾಸರಿ ನೆಲಮಂಗಲ ಟೋಲ್ ಮತ್ತು ಕ್ಯಾತ್ಸಂದ್ರ ಟೋಲ್‌ನಲ್ಲಿ ಎಷ್ಟು ಶುಲ್ಕ ಸಂಗ್ರಹವಾಗುತ್ತಿದೆ ; ಈ ಹಣವನ್ನು ಯಾವ ಖಾತೆಯಲ್ಲಿ ಇಡಲಾಗಿದೆ ; ಇದಕ್ಕೆ ಜವಾಬ್ದಾರರಾರು ? (ವಿವರವಾದ ಮಾಹಿತಿಯನ್ನು ನೀಡುವುದು)

## ಧಾರ್ಮಿಕ ಕೇಂದ್ರಗಳಿಗೆ ಸರ್ಕಾರ ನೀಡುವ ಹಣಕಾಸು ಹಂಚಿಕೆ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೪೫ (೧೦೫೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ದೇವಸ್ಥಾನ, ಮಸೀದಿ, ಚರ್ಚ್ ಮತ್ತು ಗುರುದ್ವಾರಗಳಿವೆ ; ಇವುಗಳನ್ನು ಯಾವ ರೀತಿ ವಿಂಗಡಿಸಲಾಗಿದೆ ; (ಜಿಲ್ಲಾವಾರು ವಿವರ ಒದಗಿಸುವುದು)

(ಆ) ಸದರಿ ದೇವಸ್ಥಾನ, ಮಸೀದಿ, ಚರ್ಚ್ ಮತ್ತು ಗುರುದ್ವಾರಗಳಿಗೆ ಸರ್ಕಾರ ಯಾವ ಯಾವ ಬಾಬ್ತುಗಳಡಿಯಲ್ಲಿ ಹಣಕಾಸು ಹಂಚಿಕೆ ಮಾಡಲಾಗುತ್ತಿದೆ ; (ಜಿಲ್ಲಾವಾರು ವಿವರ ಒದಗಿಸುವುದು)

(ಇ) ಸದರಿ ದೇವಸ್ಥಾನ, ಮಸೀದಿ, ಚರ್ಚ್ ಮತ್ತು ಗುರುದ್ವಾರಗಳಿಂದ ಸರ್ಕಾರಕ್ಕೆ ಸಂದಾಯವಾಗುತ್ತಿರುವ ಮೊತ್ತವೆಷ್ಟು ? (ಜಿಲ್ಲಾವಾರು ಮಾಹಿತಿ ಒದಗಿಸುವುದು)

## ರಾಜ್ಯದ ಮುಜರಾಯಿ ದೇವಸ್ಥಾನಗಳ ದುರಸ್ತಿಯ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೪೬ (೧೦೫೨) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯಾದ್ಯಂತ ಇರುವ ಮುಜರಾಯಿ ದೇವಸ್ಥಾನಗಳು ಯಾವುವು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಇತ್ತೀಚೆಗೆ ಸುರಿದ ಮಳೆಯಿಂದಾಗಿ ಹಾನಿಗೊಳಗಾದ ದೇವಸ್ಥಾನಗಳು ಯಾವುವು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಹಾನಿಗೊಳಗಾದ ದೇವಸ್ಥಾನಗಳ ದುರಸ್ತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

## PRAMC ಯೋಜನೆಯ BLACK SPOT ಕುರಿತು

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೪೭ (೧೦೫೩) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ದಿನನಿತ್ಯ ಅಪಘಾತ ಮತ್ತು ಅಪಘಾತದಿಂದ ಸಾವುಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಆ) ಕಳೆದ ೦೩ ವರ್ಷಗಳಲ್ಲಿ ರಸ್ತೆ ಅಪಘಾತದಿಂದ ಮರಣ ಹೊಂದಿದವರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ರಸ್ತೆ ಅಪಘಾತಕ್ಕೆ ಒಳಗಾದ ಸಂತ್ರಸ್ತರಿಗೆ ಮತ್ತು ಮೃತಪಟ್ಟ ಕುಟುಂಬದವರಿಗೆ ಆರ್ಥಿಕ ನೆರವು ನೀಡುವ ಯೋಜನೆ ರಾಜ್ಯ ಸರ್ಕಾರದಲ್ಲಿದೆಯೇ ;

(ಈ) ಇಲ್ಲದಿದ್ದಲ್ಲಿ, ರಸ್ತೆ ಅಪಘಾತಕ್ಕೆ ಒಳಗಾದ ಸಂತ್ರಸ್ತರಿಗೆ ಆರ್ಥಿಕ ನೆರವು ನೀಡಲು ಸರ್ಕಾರ ಕಾನೂನು ರೂಪಿಸಲು ಉದ್ದೇಶಿಸಿದೆಯೇ ; (ವಿವರ ನೀಡುವುದು)

(ಉ) ರಾಜ್ಯದಲ್ಲಿ ಪದೇ ಪದೇ ಅಪಘಾತಕ್ಕೆ ಒಳಗಾಗುವ ಸ್ಥಳಗಳು ಯಾವುವು ; ಈ ಬ್ಲ್ಯಾಕ್ ಸ್ಪಾಟ್‌ಗಳ ಅಭಿವೃದ್ಧಿಗೆ ವಿವಿಧ ಇಲಾಖೆಗಳ ಅಡಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಜಿಲ್ಲಾವಾರು ಪೂರ್ಣ ವಿವರ ನೀಡುವುದು)

## ಪಶು ವೈದ್ಯಕೀಯ ವಿಶ್ವವಿದ್ಯಾಲಯದ ಬೋಧಕ–ಬೋಧಕೇತರ ಹುದ್ದೆಗಳ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೮೪೮ (೯೪೫) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿವಮೊಗ್ಗ ಪಶು ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಬೋಧಕ, ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಸದರಿ ಮಂಜೂರಾದ ಹುದ್ದೆಗಳಲ್ಲಿ ಪ್ರಸಕ್ತ ಕಾರ್ಯನಿರ್ವಹಿಸುತ್ತಿರುವ ಖಾಯಂ, ಗುತ್ತಿಗೆ ಮತ್ತು ದಿನಗೂಲಿ ನೌಕರರ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಇ) ಈ ಪೈಕಿ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು ; (ಹುದ್ದೆವಾರು ವಿವರ ನೀಡುವುದು)

(ಈ) ಸದರಿ ಖಾಲಿ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು ?

## ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿರುವ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೮೪೯ (೯೪೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮಂಜೂರಾತಿ ನೀಡಿದ ಭೂಮಿಗಿಂತ ಹೆಚ್ಚು ಸಾಗುವಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹೆಚ್ಚುವರಿ ಭೂಮಿಯನ್ನು ಉಳಿಮೆಯಿಂದ ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು ; (ವಿವರ ನೀಡುವುದು)

(ಇ) ರಾಜ್ಯಾದ್ಯಂತ ಸರ್ಕಾರಿ ಭೂಮಿ ಒತ್ತುವರಿ ಪ್ರಕರಣಗಳೆಷ್ಟು ; ಇದರಲ್ಲಿ ತೆರವುಗೊಳಿಸಿ, ಮರು ವಶಪಡಿಸಿಕೊಂಡಿರುವ ಭೂಮಿ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಸರ್ಕಾರಿ ಜಮೀನು ಒತ್ತುವರಿ ಮಾಡಲು ಅನುವು ಮಾಡಿಕೊಟ್ಟ ಅಧಿಕಾರಿಗಳ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮವೇನು ; (ವಿವರ ನೀಡುವುದು)

(ಉ) ಒತ್ತುವರಿಯಿಂದ ತೆರವುಗೊಂಡಿರುವ ಭೂಮಿಯನ್ನು ರಕ್ಷಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ವಸತಿ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೮೫೦ (೯೪೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕಳೆದ ಮೂರು ವರ್ಷಗಳಿಂದ ಕೊಳಗೇರಿ ನಿವಾಸಿಗಳಿಗೆ ಎಷ್ಟು ಹಕ್ಕು ಪತ್ರ ನೀಡಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಕೊಳಗೇರಿ ಪ್ರದೇಶಗಳ ಅಭಿವೃದ್ಧಿಗಾಗಿ ಇರುವಂತಹ ಸರ್ಕಾರದ ಯೋಜನೆಗಳಾವುವು ; (ವಿವರ ನೀಡುವುದು)

(ಈ) ಕಳೆದ ೩ ವರ್ಷದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಕೊಳಗೇರಿ ಪ್ರದೇಶ ಅಭಿವೃದ್ಧಿಪಡಿಸಲು ಮೀಸಲಿಟ್ಟಿರುವ ಅನುದಾನ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಅಲ್ಪಸಂಖ್ಯಾತರ ವೃತ್ತಿಪರ ಕೋರ್ಸ್‌ಗಳ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೮೫೧ (೯೪೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಅಲ್ಪಸಂಖ್ಯಾತರ ಯುವಕ/ಯುವತಿಯರಿಗೆ ವೃತ್ತಿ ತರಬೇತಿ ನೀಡಲಾಗುತ್ತಿದೆಯೇ ; ಇದ್ದಲ್ಲಿ, ತರಬೇತಿ ನೀಡುವ ಏಜೆನ್ಸಿಗಳಾವುವು ; (ಜಿಲ್ಲಾವಾರು ವಿವರ ನೀಡುವುದು)

(ಆ) ತರಬೇತಿ ಪಡೆದ ಯುವಕ/ಯುವತಿಯರಿಗೆ ಉದ್ಯೋಗ ನೀಡಲಾಗಿದೆಯೇ ; ಇಲ್ಲವಾದಲ್ಲಿ ಸದರಿಯುವರಿಗೆ ಸ್ವಂತ ಉದ್ಯೋಗಕ್ಕಾಗಿ ಸಹಾಯಧನ ನೀಡಲಾಗುತ್ತಿದೆಯೇ ? (ವಿವರ ನೀಡುವುದು)

## ಕೃಷಿ ಭೂಮಿಯಲ್ಲಿ ಮನೆ ನಿರ್ಮಾಣ ಮಾಡಿಕೊಂಡಿರುವ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೮೫೨ (೯೪೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಂದಾಯ ಕೃಷಿ ಭೂಮಿಯಲ್ಲಿ ಮನೆ ನಿರ್ಮಾಣ ಮಾಡಿಕೊಂಡಿರುವವರಿಗೆ ಮೂಲಭೂತ ಸೌಕರ್ಯ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಆ) ಕಂದಾಯ ಭೂಮಿಯಲ್ಲಿರುವ ನಿವೇಶನದ ಅಥವಾ ಮನೆಗಳಿಗೆ ಇ–ಸ್ವತ್ತು/ಇ–ಆಸ್ತಿಗಳನ್ನು ಅನಧೀಕೃತವಾಗಿ ನೀಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಗ್ರಾಮ ಪಂಚಾಯಿತಿ/ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕೃಷಿ ಭೂಮಿಯನ್ನು ಜಿಪಿಎ ಕರಾರು ಪತ್ರದ ಮೂಲಕ ಅನಧೀಕೃತವಾಗಿ ನಿವೇಶನ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇಂತಹ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಸಿಂಧನೂರು ತಾಲ್ಲೂಕಿಗೆ ಹೆಚ್ಚುವರಿಯಾಗಿ ನಿವೇಶನ ನೀಡುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೫೩ (೧೦೧೬) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿಗೆ ವಸತಿ ಇಲಾಖೆಯಿಂದ ಕಳೆದ ಮೂರು ವರ್ಷಗಳಿಂದ ಎಷ್ಟು ಫಲಾನುಭವಿಗಳಿಗೆ ಮನೆಗಳನ್ನು ವಿತರಿಸಲಾಗಿದೆ ;

(ಆ) ೨೦೨೫–೨೬ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನಿವೇಶನಗಳನ್ನು ನೀಡಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ; ಈ ಬಗ್ಗೆ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ ; ಸಲ್ಲಿಸಿದ್ದಲ್ಲಿ, ಎಷ್ಟು ನಿವೇಶನಗಳ ಮಂಜೂರಾತಿ ಕೋರಲಾಗಿದೆ ; ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಇ) ಸಿಂಧನೂರು ತಾಲ್ಲೂಕಿಗೆ ವಸತಿ ಇಲಾಖೆಯಿಂದ ಕಳೆದ ಮೂರು ವರ್ಷಗಳಿಂದ ಎಷ್ಟು ಅನುದಾನ ಬಿಡುಗಡೆಯಾಗಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಸಿಂಧನೂರು ತಾಲ್ಲೂಕಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಸತಿ ನಿಲಯಗಳನ್ನು ನೀಡುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೫೪ (೧೦೧೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ವಸತಿ ನಿಲಯಗಳನ್ನು ಹೆಚ್ಚಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ; ಇದ್ದಲ್ಲಿ ಎಷ್ಟು ವಸತಿ ನಿಲಯಗಳನ್ನು ಹೆಚ್ಚಿಸುವ ಪ್ರಸ್ತಾವನೆ ಇದೆ ;

(ಆ) ಸಿಂಧನೂರು ತಾಲ್ಲೂಕಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಬಿಡುಗಡೆಯಾದ ಅನುದಾನವೆಷ್ಟು ; ಯಾವ ಯಾವ ಯೋಜನೆಗಳಿಗೆ ಅನುದಾನ ಬಳಕೆಯಾಗಿದೆ ; ಉಳಿದ ಅನುದಾನ ಎಷ್ಟು ? (ಸಂಪೂರ್ಣ ಮಾಹಿತಿ ನೀಡುವುದು)

## ಸಿಂಧನೂರು ತಾಲ್ಲೂಕಿನ ಪಶು ಆಸ್ಪತ್ರೆ ಮತ್ತು ವೈದ್ಯಾಧಿಕಾರಿಗಳ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೫೫ (೧೦೧೮) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿನಲ್ಲಿ ಎಷ್ಟು ಪಶು ಆಸ್ಪತ್ರೆಗಳಿವೆ ;

(ಆ) ಈ ತಾಲ್ಲೂಕಿನ ಪಶು ಆಸ್ಪತ್ರೆಗಳಲ್ಲಿ ಎಷ್ಟು ಪಶು ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ; ಎಷ್ಟು ಹುದ್ದೆಗಳು ಖಾಲಿ ಇವೆ ;

(ಇ) ಈ ಹುದ್ದೆಗಳು ಖಾಲಿ ಇದ್ದಲ್ಲಿ ಪಶು ವೈದ್ಯರನ್ನು ನೇಮಕ ಮಾಡಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ; ಇದ್ದಲ್ಲಿ ಯಾವಾಗ ಭರ್ತಿ ಮಾಡಿಕೊಳ್ಳಲು ಕ್ರಮವಹಿಸಲಾಗುವುದು ;

(ಈ) ಸದರಿ ಜಿಲ್ಲೆಯಲ್ಲಿ ಪಶುಸಂಗೋಪನೆ ಇಲಾಖೆಗೆ ಸರ್ಕಾರದಿಂದ ಕಳೆದ ಮೂರು ವರ್ಷಗಳಿಂದ ಎಷ್ಟು ಅನುದಾನ ಬಿಡುಗಡೆಯಾಗಿದೆ ;

(ಉ) ಬಿಡುಗಡೆ ಅನುದಾನವು ಯಾವ ಯಾವ ಉದ್ದೇಶಗಳಿಗೆ ಬಳಕೆಯಾಗಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ ನಮೂನೆ ೫೦, ನಮೂನೆ ೫೩ ಮಂಜೂರಾತಿಯಾಗಿದ್ದರೂ ಖಾತೆ ಮಾಡದೆ ಬಾಕಿ ಇರುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು):–**

೮೫೬ (೧೦೧೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಪ್ರಕರಣಗಳಲ್ಲಿ ನಮೂನೆ ೫೦, ನಮೂನೆ ೫೩ ಮಂಜೂರಾತಿಯಾಗಿದ್ದರೂ ಖಾತೆ ಮಾಡಲು ಬಾಕಿ ಇವೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ದಶಕಗಳು ಕಳೆದರೂ ಪ್ರಕರಣಗಳು ಬಾಕಿ ಇರುವುದರಿಂದ ರೈತರಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಬಾಕಿ ಪ್ರಕರಣಗಳನ್ನು ಯಾವ ಕಾಲಮಿತಿಯಲ್ಲಿ ಇತ್ಯರ್ಥಪಡಿಸಲಾಗುವುದು ;

(ಇ) ರಾಜ್ಯದಲ್ಲಿ ಒಟ್ಟು ಎಷ್ಟು ದರಖಾಸ್ತು ಪೋಡಿ ಪ್ರಕರಣಗಳನ್ನು ಗುರುತಿಸಲಾಗಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಗುರುತಿಸಿರುವ ಪ್ರಕರಣಗಳ ಪೈಕಿ ಎಷ್ಟು ಪ್ರಕರಣಗಳಲ್ಲಿ ಕನಿಷ್ಠ ದಾಖಲಾತಿಗಳು ಲಭ್ಯವಿಲ್ಲದ ಪ್ರಕರಣಗಳನ್ನು ಗೈರು ವಿಲೇ ಕಡತಗಳ ಪುನರ್ ರಚನೆ ಸಮಿತಿಗೆ ವರ್ಗಾಯಿಸಲಾಗಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಉ) ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಗೈರು ವಿಲೇ ಕಡತಗಳ ಪುನರ್ ರಚನೆ ಸಮಿತಿ ಇರುವುದರಿಂದ, ಇದು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲದ ಕಾರಣ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಗೈರು ವಿಲೇ ಕಡತಗಳ ಪುನರ್ ರಚನೆ ಸಮಿತಿ ಸುತ್ತೋಲೆ ತಿದ್ದುಪಡಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ?

## ಸಾರಿಗೆ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು):–**

೮೫೭ (೧೦೨೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿನ ಸಾರಿಗೆ ಘಟಕ (ಡಿಪೋ)ದಲ್ಲಿ ಒಟ್ಟು ಎಷ್ಟು ಬಸ್ಸುಗಳಿವೆ ; ಅವುಗಳಲ್ಲಿ ಸುಸಜ್ಜಿತವಾದ ಬಸ್ಸುಗಳು ಎಷ್ಟಿವೆ ; ಕೆಟ್ಟು ನಿಂತಿರುವ ಹಳೆಯದಾದ ಬಸ್‌ಗಳು ಎಷ್ಟು ;

(ಆ) ಈ ತಾಲ್ಲೂಕಿನ ದಡೆಸೂಗೂರು, ಜವಳಗೆರೆ ಮತ್ತು ಗಾಂಧಿನಗರದಲ್ಲಿ ಹೊಸ ಬಸ್ ನಿಲ್ದಾಣಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಇ) ಸಿಂಧನೂರು ಘಟಕಕ್ಕೆ ಹೆಚ್ಚುರಿಯಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಹೊಸ ಬಸ್‌ಗಳನ್ನು ಸಂಚರಿಸುವ ಕುರಿತು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ; ಇದ್ದಲ್ಲಿ, ಯಾವ ಕಾಲಮಿತಿಯೊಳಗೆ ಸಂಚರಿಸಲು ಕ್ರಮ ಕೈಗೊಳ್ಳಲಾಗುವುದು ?

## ಸಾಗರ ತಾಲ್ಲೂಕು ಹಸಿರುಮಕ್ಕಿಯ ಬಳಿ ನಿರ್ಮಿಸಿರುವ ಸೇತುವೆ ಕುರಿತು

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) :–**

೮೫೮ (೯೫೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾಗರ ತಾಲ್ಲೂಕು ಹಸಿರುಮಕ್ಕಿ ಬಳಿ ಶರಾವತಿ ಹಿನ್ನೀರಿಗೆ ಕೆ.ಆರ್.ಡಿ.ಸಿ.ಎಲ್. ವತಿಯಿಂದ ಹಸಿರುಮಕ್ಕಿ ಸೇತುವೆ ನಿರ್ಮಾಣ ಮಾಡಲು ಮಂಜೂರಾದ ದಿನಾಂಕ ಯಾವುದು ; ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ; (ಮಂಜೂರಾತಿ ಆದೇಶದ ಪೂರ್ಣ ವಿವರ ಒದಗಿಸುವುದು)

(ಆ) ಸೇತುವೆ ನಿರ್ಮಾಣಕ್ಕೆ ಮಂಜೂರಾದ ಅನುದಾನವೆಷ್ಟು ; (ವಿವರ ಒದಗಿಸುವುದು)

(ಇ) ಅನುದಾನವನ್ನು ಹೆಚ್ಚಿಸಿದ ಮೊತ್ತವೆಷ್ಟು ; (ಅನುದಾನ ಹೆಚ್ಚಿಸಿದ ದಿನಾಂಕ, ಹೆಚ್ಚುವರಿ ಮೊತ್ತಗಳನ್ನು ನೀಡಿದ ಪೂರ್ಣ ವಿವರ ಒದಗಿಸುವುದು)

(ಈ) ಸದರಿ ಸೇತುವೆಗೆ ಸರ್ಕಾರದಿಂದ ಈವರೆಗೆ ಬಿಡುಗಡೆಯಾದ ಮತ್ತು ಬಿಡುಗಡೆ ಮಾಡಬೇಕಾದ ಮೊತ್ತವೆಷ್ಟು ;

(ಉ) ಯಾವ ಯಾವ ದಿನಾಂಕದಂದು ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ ; (ಸರ್ಕಾರದಿಂದ ಬಿಡುಗಡೆ ಮಾಡಿದ ಮೊತ್ತವಾರು ದಿನಾಂಕವಾರು ಪೂರ್ಣ ವಿವರ ಒದಗಿಸುವುದು)

(ಊ) ಈ ಸೇತುವೆಯನ್ನು ಪೂರ್ಣಗೊಳಿಸಲು ತಗಲುವ ವೆಚ್ಚ ಎಷ್ಟು ; (ವಿವರ ಒದಗಿಸುವುದು)

(ಋ) ಕಾಮಗಾರಿ ವಿಳಂಬಕ್ಕೆ ಕಾರಣಗಳೇನು ? (ಪೂರ್ಣ ವಿವರ ಒದಗಿಸುವುದು)

## ವಸತಿ ಇಲಾಖೆಯ ಯೋಜನೆಯ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) :–**

೮೫೫ (೧೧೯೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಸತಿ ರಹಿತರಿಗಾಗಿ/ನಿವೇಶನ ರಹಿತರಿಗಾಗಿ ಯಾವ ಯಾವ ಯೋಜನೆಗಳನ್ನು ಕೈಗೊಳ್ಳಲಾಗಿದೆ ;

(ಆ) ರಾಜ್ಯದಲ್ಲಿ ಪ್ರಸ್ತುತ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ವಿವಿಧ ಗೃಹ ಯೋಜನೆಯಡಿಯಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಎಷ್ಟು ಮನೆಗಳನ್ನು/ನಿವೇಶನಗಳನ್ನು ಮಂಜೂರು ಮಾಡಲಾಗಿದೆ ಮತ್ತು ಅವುಗಳ ನಿರ್ಮಾಣ ಕಾಮಗಾರಿ ಯಾವ ಹಂತದಲ್ಲಿದೆ ; (ಯೋಜನೆವಾರು/ತಾಲ್ಲೂಕುವಾರು ಹಾಗೂ ಅನುದಾನವಾರು ಸಂಪೂರ್ಣವಾದ ಮಾಹಿತಿ ನೀಡುವುದು)

(ಇ) ವಿವಿಧ ಗೃಹ ಯೋಜನೆಯಡಿಯಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ೨೦೧೮ ರಿಂದ ೨೦೨೩ರವರೆಗೆ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ ಮತ್ತು ಅವುಗಳ ನಿರ್ಮಾಣ ಯಾವ ಹಂತದಲ್ಲಿದೆ ; ಬಿಡುಗಡೆಯಾಗಿರುವ ಅನುದಾನವೆಷ್ಟು ; (ವರ್ಷವಾರು/ ತಾಲ್ಲೂಕುವಾರು ಅನುದಾನವಾರು ಸಂಪೂರ್ಣವಾದ ಮಾಹಿತಿ ನೀಡುವುದು)

(ಈ) ೨೦೧೮ ರಿಂದ ೨೦೨೩ರವರೆಗೆ ಚಿಕ್ಕಮಗಳೂರು ಜಿಲ್ಲೆಯ ಗ್ರಾಮ ಪಂಚಾಯಿತಿಗಳಿಗೆ ರಾಜೀವ್ ಗಾಂಧಿ ವಸತಿ ನಿಗಮದಿಂದ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲಾಗಿದೆ ; ಈ ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ಅನುದಾನವೆಷ್ಟು ; ಬಾಕಿ ಇರುವ ಕಾಮಗಾರಿಗಳೆಷ್ಟು ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಉ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ವಿವಿಧ ಯೋಜನೆಯಡಿ ಹಂಚಿಕೆ ; ವಿಲೇವಾರಿ ಮಾಡಲಾದ ನಿವೇಶನಗಳು, ಮನೆಗಳು ಮತ್ತು ಫ್ಲಾಟ್‌ಗಳೆಷ್ಟು ; (ತಾಲ್ಲೂಕುವಾರು ಮತ್ತು ಫಲಾನುಭವಿವಾರು ವಿವರ ನೀಡುವುದು)

(ಊ) ಈ ಯೋಜನೆಗಳ ಅಡಿ ಹಂಚಿಕೆ/ವಿಲೇವಾರಿ ಮಾಡಲಾಗದೇ ಉಳಿದಿರುವ ನಿವೇಶನಗಳು, ಮನೆಗಳು ಮತ್ತು ಫ್ಲಾಟ್‌ಗಳೆಷ್ಟು ; ಇವುಗಳನ್ನು ಯಾವಾಗ ಹಂಚಿಕೆ ಮಾಡಲಾಗುವುದು ? (ಯೋಜನೆವಾರು ವಿವರ ನೀಡುವುದು)

## ಭೂ ಸುರಕ್ಷಾ ಯೋಜನೆಯ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :–**

೮೬೦ (೧೦೭೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭೂ ಸುರಕ್ಷಾ ಯೋಜನೆಯಲ್ಲಿ ಯಾವ ಕಾರ್ಯಾಲಯಗಳ, ಯಾವ ಪ್ರಕಾರ ದಾಖಲೆಗಳನ್ನು ಸ್ಕ್ಯಾನ್ ಮಾಡಲಾಗುತ್ತದೆ ;

(ಆ) ಭೂ ಸುರಕ್ಷಾ ವೆಬ್‌ಸೈಟ್‌ನಲ್ಲಿ ದಾಖಲೆಗಳನ್ನು ಅಪ್ ಲೋಡ್ ಮಾಡಿದ ಪುಟಗಳ ಸಂಖ್ಯೆ ಮತ್ತು ಬಾಕಿಯಿರುವ ಪುಟಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಹಲವು ಜಿಲ್ಲೆಗಳಲ್ಲಿ ದಾಖಲೆಗಳ ಸ್ಕ್ಯಾನಿಂಗ್ ಕಾರ್ಯವು ನಿಧಾನಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸದರಿ ದಾಖಲೆಗಳನ್ನು ಶೀಘ್ರವಾಗಿ ಸ್ಕ್ಯಾನಿಂಗ್ ಮಾಡಿ ಅಪ್‌ಲೋಡ್ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ದಾಖಲೆಗಳ ಡಿಜಿಟಲೀಕರಣಕ್ಕಾಗಿ ಸರ್ಕಾರ ಮಾಡುತ್ತಿರುವ ವೆಚ್ಚವೆಷ್ಟು ;

(ಉ) ಎಲ್ಲಾ ದಾಖಲೆಗಳು ಸಾರ್ವಜನಿಕರಿಗೆ ಇನ್ನು ಎಷ್ಟು ದಿನಗಳಲ್ಲಿ ಆನ್‌ಲೈನ್‌ನಲ್ಲಿ ಲಭ್ಯವಾಗಲಿವೆ ;

(ಊ) ಸದರಿ ದಾಖಲೆಗಳನ್ನು ಪಡೆಯಲು ಪ್ರತಿ ಪುಟಕ್ಕೆ ವಿಧಿಸುವ ಶುಲ್ಕವೆಷ್ಟು ?

## ವಸತಿ ಇಲಾಖೆಯಲ್ಲಿ ನೀಡಿರುವ ಮೀಸಲಾತಿಯ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :–**

೮೬೧ (೧೦೭೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರ್ಮಿಕ ಅಲ್ಪಸಂಖ್ಯಾತರು ಎಂದರೆ ಯಾರು ; ಯಾವ ಆಧಾರದ ಮೇಲೆ ಯಾವುದೇ ಧರ್ಮದವರನ್ನು ಧಾರ್ಮಿಕ ಅಲ್ಪಸಂಖ್ಯಾತರು ಎಂದು ಪರಿಗಣಿಸಲಾಗುತ್ತದೆ ;

(ಆ) ನಮ್ಮ ರಾಜ್ಯದಲ್ಲಿರುವ ಧಾರ್ಮಿಕ ಅಲ್ಪಸಂಖ್ಯಾತರು ಯಾರು ; ಸದರಿ ಧರ್ಮದ ಜನಸಂಖ್ಯೆ ಎಷ್ಟು ; (ಧರ್ಮವಾರು, ಜಿಲ್ಲಾವಾರು ವಿವರ ನೀಡುವುದು)

(ಇ) ವಸತಿ ಇಲಾಖೆಯಲ್ಲಿ ಹಿಂದೆ ಅಲ್ಪಸಂಖ್ಯಾತರಿಗೆ ಇದ್ದ ಮೀಸಲಾತಿಯ ಪ್ರಮಾಣವೆಷ್ಟು ; ಪ್ರಸ್ತುತ ಎಷ್ಟು ಪ್ರಮಾಣಕ್ಕೆ ಹೆಚ್ಚಿಸಲಾಗಿದೆ, ಯಾವ ಸಮಿತಿಯ ಶಿಫಾರಸ್ಸು ಅಥವಾ ಆಧಾರದ ಮೇಲೆ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸಲಾಗಿದೆ ;

(ಈ) ರಾಜ್ಯದ ಹಲವು ಭಾಗಗಳಲ್ಲಿ ಅಲ್ಪಸಂಖ್ಯಾತರು ಸಾಮಾನ್ಯವಾಗಿ ಪಟ್ಟಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದು ಗ್ರಾಮೀಣ ಪ್ರದೇಶಗಳಲ್ಲಿ ಅವರು ಕಡಿಮೆ ಪ್ರಮಾಣದಲ್ಲಿ ವಾಸಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ/ ಗ್ರಾಮಗಳಲ್ಲಿ ಅವರು ಕಡಿಮೆ ಪ್ರಮಾಣದಲ್ಲಿದ್ದು, ಅವರಿಗೆ ೧೫% ಮೀಸಲಾತಿ ನೀಡುವಲ್ಲಿ ಫಲಾನುಭವಿಗಳ ಲಭ್ಯತೆಯೇ ಇಲ್ಲದ ಪರಿಸ್ಥಿತಿ ಉಂಟಾಗುವುದಿಲ್ಲವೇ ; ಇಂತಹ ಸನ್ನಿವೇಶದಲ್ಲಿ ಸದರಿ ಮನೆಗಳನ್ನು ಯಾರಿಗೆ ನೀಡಲಾಗುತ್ತದೆ ?

## ಪೋಡಿ ರದ್ಧತಿಯ ಪ್ರಕ್ರಿಯೆಯ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :–**

೮೬೨ (೧೦೮೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪೋಡಿ ರದ್ಧತಿ ಎಂದರೆ ಏನು ; ಯಾವ ಸಂದರ್ಭದಲ್ಲಿ ಪೋಡಿಯನ್ನು ರದ್ದು ಮಾಡುವಂತೆ ಕೋರಬಹುದು ;

(ಆ) ಭೂಮಾಪಕರು ಆಕಸ್ಮಿಕವಾಗಿ ತಪ್ಪಾಗಿ ಪೋಡಿಯನ್ನು ಮಾಡಿದ್ದಲ್ಲಿ, ಪೋಡಿಗೆ ಒಳಪಟ್ಟ ಎಲ್ಲಾ ಭೂ ಮಾಲೀಕರು ಲಿಖಿತವಾಗಿ ಒಪ್ಪಿಗೆ ಸೂಚಿಸಿದ್ದಲ್ಲಿ, ಪೋಡಿ ರದ್ಧತಿಗೆ ಅನುಸರಿಸುವ ಪ್ರಕ್ರಿಯೆಯೇನು ;

(ಇ) ಪೋಡಿ ಮಾಡುವ ಪ್ರಕ್ರಿಯೆಗಿಂತ, ಪೋಡಿ ರದ್ಧತಿಯ ಹೆಚ್ಚಿನ ಸಮಯ, ಪ್ರಕ್ರಿಯೆ ಒಳಗೊಂಡಿರುವ ಕಾರಣ ಸಾರ್ವಜನಿಕರಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದನ್ನು ಸರಳೀಕರಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು ;

(ಈ) ಪೋಡಿಗೆ ಒಳಪಟ್ಟ ಎಲ್ಲಾ ರೈತರೂ ಲಿಖಿತ ಒಪ್ಪಿಗೆ ಸೂಚಿಸಿದ್ದಲ್ಲಿ, ಕೋರ್ಟ್ ಪ್ರಕ್ರಿಯೆ ಇಲ್ಲದೆ ರದ್ದುಗೊಳಿಸಲು ಅವಕಾಶವಿದೆಯೇ ; ಇದ್ದಲ್ಲಿ, ಇದರ ಬಗ್ಗೆ ಇರುವ ಸುತ್ತೋಲೆ ಮತ್ತು ಆದೇಶದ ಪ್ರತಿಯನ್ನು ನೀಡುವುದು ;

(ಉ) ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪೋಡಿ ರದ್ಧತಿಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ; ಅವುಗಳಲ್ಲಿ ವಿಲೇಯಾದ ಪ್ರಕರಣಗಳ ಸಂಖ್ಯೆ ಎಷ್ಟು ; ಬಾಕಿಯಿರುವ ಪ್ರಕರಣಗಳು ಎಷ್ಟು ?

## ಕಂದಾಯ ಇಲಾಖೆಯ ಕಛೇರಿಗೆ ಸ್ವಂತ ಕಟ್ಟಡ ಒದಗಿಸುವ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :–**

೮೬೩ (೧೦೮೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ಗ್ರಾಮ ಅಡಳಿತಾಧಿಕಾರಿಗಳ, ಕಂದಾಯ ನಿರೀಕ್ಷಕರ ಹಾಗೂ ನಾಡ ಕಛೇರಿಗಳ ಸಂಖ್ಯೆ ಎಷ್ಟು ; ಇವುಗಳಲ್ಲಿ ಎಷ್ಟು ಕಾರ್ಯಲಯಗಳು ಸ್ವಂತ ಕಟ್ಟಡದಲ್ಲಿವೆ ಮತ್ತು ಎಷ್ಟು ಕಟ್ಟಡಗಳು ಬಾಡಿಗೆ ಕಟ್ಟಡದಲ್ಲಿವೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಹಲವು ಗ್ರಾಮ ಆಡಳಿತಾಧಿಕಾರಿಗಳು, ಕಂದಾಯ ನಿರೀಕ್ಷಕರ ಕಾರ್ಯಾಲಯಗಳು ಬಾಡಿಗೆ ಮನೆಯಲ್ಲಿ ಕಾರ್ಯನಿರ್ವಹಿಸುವ ಕಾರಣ ಅವುಗಳ ವಿಳಾಸ ಪತ್ತೆ ಮಾಡುವುದೇ ಸಾರ್ವಜನಿಕರಿಗೆ ಸಮಸ್ಯೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಾಡಿಗೆ ಕಟ್ಟಡದಲ್ಲಿರುವ ಕಾರ್ಯಾಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಕಂದಾಯ ಇಲಾಖೆ ಕಾರ್ಯಾಲಯದ ಅಧಿಕಾರಿಗಳು ಹಾಜರಾತಿಗಾಗಿ ಬಯೋಮೆಟ್ರಿಕ್ ಹಾಜರಾತಿ ಪದ್ಧತಿಯನ್ನು ಕಡ್ಡಾಯವಾಗಿ ಅನುಷ್ಠಾನ ಮಾಡುವಂತೆ ಸರ್ಕಾರದಿಂದ ನಿರ್ದೇಶನ ನೀಡಲಾಗಿದೆಯೇ ;

(ಈ) ನೀಡಲಾಗಿದ್ದರೆ, ಎಷ್ಟು ಕಾರ್ಯಾಲಯಗಳಲ್ಲಿ ಅನುಷ್ಠಾನ ಮಾಡಲಾಗಿದೆ ; ಉಳಿದ ಕಾರ್ಯಾಲಯಗಳಲ್ಲಿ ಅನುಷ್ಠಾನ ಮಾಡದಿರಲು ಕಾರಣವೇನು ; ಉಳಿದ ಕಾರ್ಯಾಲಯಗಳಲ್ಲಿ ಯಾವ ಕಾಲಮಿತಿಯಲ್ಲಿ ಅನುಷ್ಠಾನ ಮಾಡಲಾಗುವುದು ?

## ರಾಜ್ಯದ ವಿವಿಧ ಯೋಜನೆಯಡಿ ಮನೆಗಳ ಪ್ರಗತಿ ಕುರಿತು

**ಡಾ. ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) :–**

೮೬೪ (೧೦೪೯) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೩-೨೪, ೨೦೨೪-೨೫ ಮತ್ತು ೨೦೨೫-೨೬ನೇ ಸಾಲಿನಲ್ಲಿ ರಾಜ್ಯದಲ್ಲಿ ಯಾವ ಯಾವ ಯೋಜನೆಯಡಿ ಹೊಸದಾಗಿ ಮನೆಗಳನ್ನು ಮಂಜೂರು ಮಾಡಲಾಗಿದೆ ;

(ಆ) ಕಳೆದ ಸರ್ಕಾರದಲ್ಲಿ ವಿವಿಧ ಯೋಜನೆಯಡಿ ಫಲಾನುಭವಿಗಳಿಗೆ ಹಂಚಿಕೆಯಾಗಿದ್ದ ಎಷ್ಟು ಮನೆಗಳನ್ನು ಪೂರ್ಣಗೊಳಿಸಲಾಗಿದೆ ; (೨೦೨೩ ಜೂನ್ ತಿಂಗಳ ನಂತರ)

(ಇ) ಕಳೆದ ೦೨ ವರ್ಷಗಳಲ್ಲಿ ಈ ಹಿಂದೆ ಮಂಜೂರಾದ ಮನೆಗಳಿಗೆ ನಿರ್ಮಾಣ ಪ್ರಗತಿಗೆ ತಕ್ಕಂತೆ ಬಿಡುಗಡೆ ಮಾಡಲಾದ ಅನುದಾನ ಎಷ್ಟು ;

(ಈ) ಪೂರ್ಣಗೊಳಿಸಿದ ಎಷ್ಟು ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ ; (೨೦೨೩ ಜೂನ್ ತಿಂಗಳ ನಂತರ)

(ಉ) ೨೦೨೩-೨೪, ೨೦೨೪-೨೫ ಮತ್ತು ೨೦೨೫-೨೬ನೇ ಸಾಲಿನಲ್ಲಿ ಕೆ.ಹೆಚ್.ಬಿ.ಯಿಂದ ಎಷ್ಟು ನಿವೇಶನ/ಮನೆಗಳನ್ನು ಹೊಸದಾಗಿ ಮಂಜೂರು ಮಾಡಲಾಗಿದೆ ;

(ಊ) ಕಳೆದ ಆಯವ್ಯಯದಲ್ಲಿ ಎಷ್ಟು ಹೊಸ ಮನೆಗಳ ನಿರ್ಮಾಣದ ಘೋಷಣೆ ಮಾಡಲಾಗಿತ್ತು ; ಎಷ್ಟು ಮನೆಗಳ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ ; ಬಿಡುಗಡೆಯಾದ ಅನುದಾನ ಎಷ್ಟು ? (ಸಂಪೂರ್ಣ ವಿವರ ನೀಡುವುದು)

## ರಾಜ್ಯದಲ್ಲಿ ಸರ್ಕಾರಿ ಭೂಮಿ ಒತ್ತುವರಿ ತೆರವುಗೊಳಿಸುವ ಕುರಿತು

**ಡಾ. ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) :-**

೮೬೫ (೧೦೪೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಹತ್ತು ವರ್ಷಗಳಲ್ಲಿ ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ಸರ್ಕಾರಿ ಭೂಮಿ ಒತ್ತುವರಿ ಬಗ್ಗೆ ಬಂದಿರುವ ದೂರುಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಸದರಿ ಒತ್ತುವರಿ ಭೂಮಿಯ ಅಂದಾಜು ಮೌಲ್ಯವೆಷ್ಟು ; ಒತ್ತುವರಿಯಾದ ಭೂಮಿಯನ್ನು ಹಿಂಪಡೆಯುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಇದುವರೆಗೂ ಮರು ವಶಪಡಿಸಿಕೊಂಡಿರುವ ಭೂಮಿ ಎಷ್ಟು ; ಹೀಗೆ ವಶಪಡಿಸಿಕೊಂಡ ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗಿದೆ ; (ಪ್ರಕರಣವಾರು ವಿವರ ನೀಡುವುದು)

(ಈ) ಸರ್ಕಾರಿ ಭೂಮಿ ಒತ್ತುವರಿ ತಡೆಯಲು ಮತ್ತು ಸಂರಕ್ಷಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಬೆಂಗಳೂರು ಜಿಲ್ಲೆಯ ಪೆರಿಫೆರಲ್ ರಿಂಗ್ ರೋಡ್ ಕಾಮಗಾರಿ ಬಗ್ಗೆ

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೬೬ (೧೮೯೬) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪೆರಿಫೆರಲ್ ೧ ರಿಂಗ್ ರೋಡ್ ಪ್ರಾರಂಭವಾಗಿದ್ದು ಯಾವಾಗ ; ಪ್ರಸ್ತುತ ಕಾಮಗಾರಿ ಯಾವ ಹಂತದಲ್ಲಿದೆ ; (ವಿವರ ನೀಡುವುದು)

(ಆ) ಪೆರಿಫೆರಲ್ ೧ ರಿಂಗ್ ರೋಡ್ ರಸ್ತೆಯ ಉಪಯೋಗಕ್ಕಾಗಿ ರೈತರಿಂದ ಎಷ್ಟು ಎಕರೆ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ ;

(ಇ) ರೈತರ ಜಮೀನನ್ನು ವಶಪಡಿಸಿಕೊಳ್ಳಲು ಇರುವ ಮಾನದಂಡಗಳೇನು ;

(ಈ) ಪೆರಿಫೆರಲ್ ರಿಂಗ್ ರೋಡ್ ಕಾಮಗಾರಿಯು ಯಾವ ಕಾಲಮಿತಿಯೊಳಗೆ ಮುಕ್ತಾಯವಾಗುವುದು ಮತ್ತು ಈ ಕಾರ್ಯವು ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ ? (ವಿವರ ನೀಡುವುದು)

## ಸರ್ಕಾರಿ ನೌಕರರ ವಸತಿ ಗೃಹಗಳ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೮೬೭ (೧೦೫೬) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರಿ ನೌಕರರ ವ್ಯತ್ಯಾಸಕ್ಕೆ ಅನುಕೂಲವಾಗಲು ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಒಳಪಟ್ಟ ವಸತಿ ಗೃಹಗಳ ಸಂಖ್ಯೆ ಎಷ್ಟು ;

(ಆ) ಕಳೆದ ೫ ವರ್ಷದಲ್ಲಿ ಇಲಾಖೆ ವತಿಯಿಂದ ಎಷ್ಟು ವಸತಿ ಗೃಹಗಳನ್ನು ನಿರ್ಮಿಸಲಾಗಿದೆ ಹಾಗೂ ವಾಸಿಸುತ್ತಿರುವ ಸರ್ಕಾರಿ ಅಧಿಕಾರಿಗಳ ಕುಟುಂಬಗಳಿಗೆ ಯಾವ ರೀತಿಯ ಭದ್ರತೆಯನ್ನು ನೀಡಲಾಗಿದೆ ;

(ಇ) ರಾಜ್ಯದಲ್ಲಿರುವ ಬಹುತೇಕ ವಸತಿ ಗೃಹಗಳು ಪಾಳು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಕಳೆದ ೫ ವರ್ಷದಿಂದ ವಸತಿ ಗೃಹಗಳ ನಿರ್ವಹಣೆಗಾಗಿ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಈ) ಕೋಲಾರ ನಗರ ಜಿಲ್ಲಾ ಪಂಚಾಯಿತಿ ಕಛೇರಿಯ ಪಕ್ಕದಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ವಸತಿ ನಿಲಯಗಳು ಪಾಳು ಬಿದ್ದಿದ್ದು, ಅನೈತಿಕ ಚಟುವಟಿಕೆಗಳ ತಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ?

## ನಾಡಕಛೇರಿಗಳ ಕಾರ್ಯನಿರ್ವಹಣೆಯ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೮೬೮ (೧೦೫೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ನಾಡಕಛೇರಿಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ಪ್ರಸ್ತುತ ಎಲ್ಲಾ ಕಛೇರಿಗಳಲ್ಲಿ ತಹಶೀಲ್ದಾರ್‌ಗಳನ್ನು ನೇಮಿಸಲಾಗಿದೆಯೇ ; (ಅಧಿಕಾರಿಗಳ ಹೆಸರು ಮತ್ತು ನೇಮಕಗೊಂಡಿರುವ ದಿನಾಂಕದ ಮಾಹಿತಿ ಒದಗಿಸುವುದು)

(ಆ) ಸಾರ್ವಜನಿಕರಿಗೆ ನಾಡಕಛೇರಿಯಲ್ಲಿ ಯಾವ ಯಾವ ಸೇವೆಗಳು ಲಭ್ಯತೆ ಇದೆ ; (ಪೂರ್ಣ ವಿವರ) ಸಾರ್ವಜನಿಕರು ಪ್ರತಿ ಸೇವೆಗೆ ಸಲ್ಲಿಸಬೇಕಾಗಿರುವ ದಾಖಲೆಗಳು ಯಾವುವು ; (ಪ್ರತ್ಯೇಕವಾದ ಮಾಹಿತಿ ನೀಡುವುದು)

(ಇ) ಬೆಂಗಳೂರು ಉತ್ತರ ತಾಲ್ಲೂಕು ಮತ್ತು ದಕ್ಷಿಣ ತಾಲ್ಲೂಕಿನಲ್ಲಿರುವ ಎಲ್ಲಾ ನಾಡಕಛೇರಿಯಲ್ಲಿ ಒಂದು ವರ್ಷದ ಅವಧಿಯಲ್ಲಿ ವಂಶ ವೃಕ್ಷಕ್ಕಾಗಿ ಎಷ್ಟು ಅರ್ಜಿಗಳು ಬಂದಿದೆ ; ಬಂದಿರುವ ಅರ್ಜಿಗಳಲ್ಲಿ ಎಷ್ಟು ಅರ್ಜಿಗಳಿಗೆ ಅನುಮತಿ ನೀಡಲಾಗಿದೆ ; ಎಷ್ಟು ಅರ್ಜಿಗಳು ತಿರಸ್ಕೃತಗೊಂಡಿವೆ ; (ಅರ್ಜಿಗಳೊಂದಿಗೆ ಸಲ್ಲಿಸಿರುವ ದಾಖಲೆಗಳ ಮಾಹಿತಿ ನೀಡುವುದು)

(ಈ) ತಿರಸ್ಕಾರಗೊಳಿಸಲು ಕಾರಣಗಳೇನು ; ಅರ್ಜಿ ಸಲ್ಲಿಸಿದ ನಂತರ ಎಷ್ಟು ದಿನದವರೆಗೂ ಸಾರ್ವಜನಿಕರು ಕಾಯಬೇಕಾಗುತ್ತದೆ ; ಹಾಗೂ ಎಷ್ಟು ಬಾರಿ ಅರ್ಜಿ ತಿರಸ್ಕೃತಗೊಳಿಸಲು ಸರ್ಕಾರ ಅನುಮತಿಸಿದೆ ;

(ಉ) ಬೆಂಗಳೂರು ಉತ್ತರ ತಾಲ್ಲೂಕು ಮತ್ತು ದಕ್ಷಿಣ ತಾಲ್ಲೂಕಿನಲ್ಲಿರುವ ನಾಡಕಛೇರಿಯ ಕೆಲವು ತಹಶೀಲ್ದಾರರು ಲಂಚಕ್ಕಾಗಿ ಹಲವಾರು ಕಾರಣಗಳನ್ನು ನೀಡಿ ಅರ್ಜಿಗಳನ್ನು ತಿರಸ್ಕಾರ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಎಷ್ಟು ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ ?

## ಮುಜರಾಯಿ ಆಸ್ತಿಯನ್ನು ಖಾಸಗಿಯವರು ಒತ್ತುವರಿ ಮಾಡುತ್ತಿರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೮೬೬ (೧೦೫೮) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ಮುಜರಾಯಿ ದೇವಸ್ಥಾನಗಳ ಸಂಖ್ಯೆ ಎಷ್ಟು; ಸದರಿ ದೇವಸ್ಥಾನಗಳು ಎಷ್ಟು ವಿಸ್ತೀರ್ಣದ ಜಾಗವನ್ನು ಹೊಂದಿವೆ ;

(ಆ) ಮುಜರಾಯಿ ಇಲಾಖೆಯು ಎಷ್ಟು ಆಸ್ತಿಗಳನ್ನು ಬಾಡಿಗೆಗೆ ಮತ್ತು ಗುತ್ತಿಗೆ ನೀಡಿದೆ ; ಇದಕ್ಕೆ ನಿಗದಿಪಡಿಸಿರುವ ಹಣವೆಷ್ಟು ; ಪ್ರತಿ ವರ್ಷ ಇದರಿಂದ ಎಷ್ಟು ಆದಾಯ ಬರುತ್ತಿದೆ ;

(ಇ) ಇಲಾಖೆಯ ಆಸ್ತಿಯನ್ನು ಖಾಸಗಿಯವರು ಒತ್ತುವರಿ ಮಾಡಿಕೊಂಡಿರುವ ಪ್ರಕರಣಗಳ ಸಂಖ್ಯೆ ಎಷ್ಟು ; ಇದರ ಮೌಲ್ಯವೆಷ್ಟು ; (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

(ಈ) ಒತ್ತುವರಿಯಾಗಿರುವ ಜಮೀನುಗಳ ಪೈಕಿ ಇದುವರೆಗೂ ಎಷ್ಟು ಆಸ್ತಿಯನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆ ; ಇನ್ನು ಎಷ್ಟು ಬಾಕಿ ಉಳಿದಿದೆ ;

(ಉ) ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳಿಗೆ ರಾಜ ಮಹಾರಾಜರ ಕಾಲದಿಂದಲೂ ನಾನಾ ಸಂದರ್ಭದಲ್ಲಿ ದಾನದ ರೂಪದಲ್ಲಿ ಹಾಗೂ ಇನಾಮು ರೂಪದಲ್ಲಿ ಬಂದಿರುವ ಆಸ್ತಿಗಳೆಷ್ಟು ; (ವಿವರಗಳನ್ನು ಒದಗಿಸುವುದು) ಇವುಗಳು ಕಂದಾಯ ಇಲಾಖೆಯ ದಾಖಲೆಗಳಲ್ಲಿ ನಮೂದಾಗಿದೆಯೇ ?

## ರಾಜ್ಯದಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಬಗರ್ ಹುಕುಂ ಕಮಿಟಿಗಳ ರಚನೆ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೭೦ (೯೭೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಬಗರ್‌ಹುಕುಂ ಕಮಿಟಿ ರಚನೆಯಾಗಿದೆಯೇ ; ಇರುವ ತಾಲ್ಲೂಕು/ವಿಧಾನಸಭಾ ಕ್ಷೇತ್ರದ ವಿವರಗಳನ್ನು ಒದಗಿಸುವುದು ; ರಚನೆಯಾಗದೇ ಇರಲು ಕಾರಣವೇನು ; (ವಿವರ ಒದಗಿಸುವುದು)

(ಆ) ರಾಜ್ಯದಲ್ಲಿ ನಮೂನೆ ೫೩, ೫೭ ರಡಿ ಸ್ವೀಕೃತವಾಗಿರುವ ಅರ್ಜಿಗಳು ಎಷ್ಟು ; ವಿಲೇಯಾಗಿರುವ ಹಾಗೂ ಬಾಕಿ ಉಳಿದಿರುವ ಅರ್ಜಿಗಳು ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ಬಹುತೇಕ ಜಿಲ್ಲೆಗಳಲ್ಲಿ ಅರ್ಜಿಗಳು ಬಾಕಿ ಇರುವುದರಿಂದ ಸಾರ್ವಜನಿಕರು ಸರ್ಕಾರಿ ಸೌಲಭ್ಯವನ್ನು ಪಡೆಯುವಲ್ಲೂ ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು ; (ವಿವರ ಒದಗಿಸುವುದು)

(ಈ) ಅರ್ಜಿಗಳು ಬಾಕಿ ಉಳಿಯಲು ಕಾರಣವೇನು ; ಅವುಗಳನ್ನು ಶೀಘ್ರವಾಗಿ ವಿಲೇಗೊಳಿಸಲು ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುವುದು ; (ವಿವರ ಒದಗಿಸುವುದು)

(ಉ) ಸದರಿಯ ಅರ್ಜಿಗಳನ್ನು ವಿಲೇಗೊಳಿಸಲು ಅಫಿಡೆವಿಟ್ ಆಧಾರದ ಮೇರೆಗೆ ಭೂ ಪರಿವರ್ತನೆ ಮಾಡುವ ರೀತಿಯಲ್ಲಿ ನಿರ್ದಿಷ್ಟವಾದ ಕಾಲಾವಧಿಯನ್ನು ನಿಗದಿಪಡಿಸಿ ಕಾಯ್ದೆಗೆ ಸೂಕ್ತ ತಿದ್ದುಪಡಿ ತರುವ ಪ್ರಸ್ತಾವನೆ ಸರ್ಕಾರ ಮುಂದೆ ಇದೆಯೇ ? (ಇದ್ದಲ್ಲಿ, ಮಾಹಿತಿಯನ್ನು ಒದಗಿಸುವುದು)

## ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಇರುವ ಯೋಜನೆ ಮತ್ತು ಸೌಲಭ್ಯಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೭೧ (೯೬೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಯಾವ ಯಾವ ಯೋಜನೆ ಅಡಿ ಯಾವ ಯಾವ ರೀತಿಯ ಸೌಲಭ್ಯಗಳನ್ನು ಒದಗಿಸಲಾಗುತ್ತದೆ ; ( ವಿವರ ಒದಗಿಸುವುದು)

(ಆ) ಕೊಪ್ಪಳ ಜಿಲ್ಲೆಯಲ್ಲಿ ೨೦೨೩-೨೪ನೇ ಸಾಲಿನಿಂದ ೨೦೨೫-೨೬ನೇ ಸಾಲಿನವರೆಗೆ ಸರ್ಕಾರ ನೀಡಿರುವ ವರ್ಷವಾರು, ಯೋಜನೆವಾರು, ಗುರಿ ಸಾಧನೆ ಹಾಗೂ ಬಾಕಿ ಇರುವ ಯೋಜನೆಗಳಾವುವು ; (ವಿವರಗಳನ್ನು ಒದಗಿಸುವುದು)

(ಇ) ಕೊಪ್ಪಳ ಜಿಲ್ಲೆಯಲ್ಲಿ ಅರ್ಜಿಗಳು ಬಾಕಿ ಉಳಿಸಿಕೊಳ್ಳಲು ಕಾರಣವೇನು ; ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಯಾವ ರೀತಿಯ ಶಿಸ್ತು ಕ್ರಮ ಜರುಗಿಸಲಾಗಿದೆ ; (ವಿವರ ಒದಗಿಸುವುದು)

(ಈ) ಕೊಪ್ಪಳ ಜಿಲ್ಲೆಗೆ ೨೦೨೩-೨೪ನೇ ಸಾಲಿನ ಗುರಿಗೆ ಅನುಗುಣವಾಗಿ ಇಲ್ಲಿಯವರೆಗೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿದೆಯೇ ; ಹೌದಾದಲ್ಲಿ, ಎಷ್ಟು ಅನುದಾನ ಬಿಡುಗಡೆಯಾಗಿದೆ ; ಸದರಿ ಅನುದಾನದಿಂದ ಎಷ್ಟು ಜನ ಫಲಾನುಭವಿಗಳಿಗೆ ಪ್ರಯೋಜನವಾಗಿದೆ ; (ವಿವರ ಒದಗಿಸುವುದು)

(ಉ) ಇಲ್ಲವಾದಲ್ಲಿ, ಬಿಡುಗಡೆಯಾಗದೆ ಇರಲು ಕಾರಣವೇನು ; ಫಲಾನುಭವಿಗಳ ಆಯ್ಕೆಯಾಗಿ ಅವರಿಗೆ ಯೋಜನೆ ತಲುಪದೇ ಇದ್ದರೆ ಅದು ನಿಷ್ಪ್ರಯೋಜನಕಾರಿ ಅಲ್ಲವೇ ಇದಕ್ಕೆ ಯಾರು ಹೊಣೆಗಾರರು ಹಾಗೂ ಸರ್ಕಾರದ ನಿಲುವೇನು ? (ವಿವರ ಒದಗಿಸುವುದು)

## ಕಳೆದ ೧೦ ವರ್ಷಗಳಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಗೃಹ ಮಂಡಳಿ ವತಿಯಿಂದ ಅಭಿವೃದ್ಧಿ ಪಡಿಸಲಾಗಿರುವ ವಸತಿ ವಿನ್ಯಾಸಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೭೨ (೯೬೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೧೦ ವರ್ಷಗಳಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಅಭಿವೃದ್ಧಿಪಡಿಸಲಾಗಿರುವ ವಸತಿ ವಿನ್ಯಾಸಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು)

(ಆ) ಕೊಪ್ಪಳ ಜಿಲ್ಲೆಯಲ್ಲಿ ಮಂಡಳಿಯಿಂದ ಅಭಿವೃದ್ಧಿ ಮಾಡಿರುವ ವಸತಿ ಲೇಔಟ್‌ಗಳಲ್ಲಿನ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ; ಹಂಚಿಕೆ ಮಾಡಲು ಬಾಕಿ ಇರುವ ನಿವೇಶನಗಳು ಎಷ್ಟು ; ಬಾಕಿ ಉಳಿದಿರಲು ಕಾರಣವೇನು ; (ವಿವರ ಒದಗಿಸುವುದು)

(ಇ) ಈಗಾಗಲೇ ಹಂಚಿಕೆ ಮಾಡಿರುವ ಲೇಔಟ್‌ಗಳಲ್ಲಿನ ಎಲ್ಲಾ ಸಾರ್ವಜನಿಕ ಮೂಲ ಸೌಕರ್ಯಗಳನ್ನು (ರಸ್ತೆ, ಪಾರ್ಕ್, ಸಿ.ಎ ಸೈಟ್ ಹಾಗೂ ಇತ್ಯಾದಿ) ಆಯಾ ನಗರ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿದೆಯೇ ; (ಹಾಗಿದ್ದಲ್ಲಿ, ವಿವರ ಒದಗಿಸುವುದು) ಇಲ್ಲದಿದ್ದಲ್ಲಿ, ಬಾಕಿ ಇರಲು ಕಾರಣವೇನು ;

(ಈ) ಈಗಾಗಲೇ ಹಂಚಿಕೆ ಮಾಡಿರುವ ನಿವೇಶನಗಳ ಭೂ ಮಾಲೀಕರುಗಳಿಗೆ ಆಯಾ ನಗರ ಸ್ಥಳೀಯ ಸಂಸ್ಥೆಗಳಿಂದ ನಮೂನೆ–೩ ನೀಡಲಾಗುತ್ತಿದೆಯೇ ; ಇಲ್ಲವಾದಲ್ಲಿ, ಅದಕ್ಕೆ ಕಾರಣವೇನು ; (ವಿವರ ಒದಗಿಸುವುದು)

(ಉ) ಕೆಎಚ್‌ಬಿಯು ಲೇಔಟ್‌ಗಳಲ್ಲಿನ ಎಲ್ಲಾ ಸಾರ್ವಜನಿಕ ಸೌಕರ್ಯಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲು ಬಾಕಿ ಇರುವ ಪ್ರಕರಣಗಳನ್ನು ಯಾವ ಅವಧಿ ಒಳಗಾಗಿ ಹಸ್ತಾಂತರಿಸಲಾಗುವುದು ? (ವಿವರ ಒದಗಿಸುವುದು)

## ಕೊಪ್ಪಳ ನಗರ ಗಂಗಾವತಿ ರಸ್ತೆಯ ಕಿಮ್ಸ್ ಕಾಲೇಜು ಹತ್ತಿರ ಮಾಡಿರುವ ರೈಲ್ವೆ ಲೆವೆಲ್ ಕ್ರಾಸಿಂಗ್ ಗೇಟ್‌ನಿಂದ ಆಗುತ್ತಿರುವ ತೊಂದರೆಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೭೩ (೯೬೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ನಗರ ಗಂಗಾವತಿ ರಸ್ತೆಯ ಕಿಮ್ಸ್ ಕಾಲೇಜ್ ಹತ್ತಿರ ರೈಲ್ವೆ ಲೆವೆಲ್ ಕ್ರಾಸಿಂಗ್ ಗೇಟ್ ಇರುವುದರಿಂದ ತುರ್ತು ಪರಿಸ್ಥಿತಿಯಲ್ಲಿ ಆಂಬ್ಯುಲೆನ್ಸ್‌ಗಳ ಓಡಾಟಕ್ಕೆ ಗೇಟ್ ಆಚೆ ಇರುವ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳ ಸಾರ್ವಜನಿಕ ಮತ್ತು ಸರ್ಕಾರಿ ವಾಹನಗಳ ಹೋಡಾಟಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದಲ್ಲಿ, ಕೈಗೊಂಡ ಕ್ರಮಗಳೇನು ; (ವಿವರ ಒದಗಿಸುವುದು)

(ಆ) ಕೊಪ್ಪಳ ನಗರದ ಕಿಮ್ಸ್ ಮೆಡಿಕಲ್ ಕಾಲೇಜು ಹತ್ತಿರ ಇರುವ ರೈಲ್ವೆ ಲೆವೆಲ್ ಕ್ರಾಸಿಂಗ್‌ಗೆ ಮೇಲ್ಸೇತುವೆ ಅಥವಾ ಕೆಳ ಸೇತುವೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಹಂತದಲ್ಲಿ ಇದೆಯೇ ; ಇದ್ದಲ್ಲಿ, ಪ್ರಸ್ತುತ ಸದರಿ ಕಾಮಗಾರಿಯು ಯಾವ ಹಂತದಲ್ಲಿದೆ ; (ವಿವರ ಒದಗಿಸುವುದು)

(ಇ) ಇಲ್ಲದೇ ಇದ್ದಲ್ಲಿ, ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಸದರಿ ಲೆವೆಲ್ ಕ್ರಾಸಿಂಗ್ ಗೇಟ್ ಹತ್ತಿರ ರಸ್ತೆ ಮೇಲ್ಸೇತುವೆ ಅಥವಾ ಕೆಳಸೇತುವೆ ನಿರ್ಮಾಣ ಮಾಡಲು ಸರ್ಕಾರವು ಉದ್ದೇಶಿಸಿದೆಯೇ ; (ವಿವರ ಒದಗಿಸುವುದು)

(ಈ) ಉದ್ದೇಶಿಸಿದ್ದಲ್ಲಿ, ಎಷ್ಟು ಕಾಲಾವಧಿ ಒಳಗಾಗಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ? (ಮಾಹಿತಿ ಒದಗಿಸುವುದು)

## ರಾಜ್ಯದಲ್ಲಿ ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ದೇವಸ್ಥಾನಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೭೪ (೯೭೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಒಟ್ಟು ದೇವಸ್ಥಾನಗಳ ಸಂಖ್ಯೆ ಎಷ್ಟು ; ಸದರಿ ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿಗಳೆಷ್ಟು ; (ಜಿಲ್ಲಾವಾರು ವಿವರ ಒದಗಿಸುವುದು)

(ಆ) ಸದರಿ ದೇವಸ್ಥಾನಗಳ ಸ್ಥಿರಾಸ್ತಿಗಳು ದಾಖಲೆಗಳಲ್ಲಿ ಆಯಾ ದೇವಸ್ಥಾನಗಳ ಹೆಸರಿನಲ್ಲಿದೆಯೇ ; (ಇದ್ದಲ್ಲಿ, ಮಾಹಿತಿ ಒದಗಿಸುವುದು) ದೇವಸ್ಥಾನಗಳ ಹೆಸರಿಗೆ ಮಾಡಲು ಬಾಕಿ ಇರುವ ಪ್ರಕರಣಗಳು ಎಷ್ಟು ; ಬಾಕಿ ಇರಲು ಕಾರಣವೇನು ; (ವಿವರ ಒದಗಿಸುವುದು)

(ಇ) ದೇವಸ್ಥಾನಗಳ ಸ್ಥಿರಾಸ್ತಿಗಳು ಆಯಾ ಮುಜರಾಯಿ ಸಂಸ್ಥೆಗಳ ಹೆಸರಿಗೆ ಇಲ್ಲದೆ ಇರುವ ಕಾರಣ ಕೆಲವು ಸಮಾಜಘಾತುಕ ವ್ಯಕ್ತಿಗಳು ಅದನ್ನು ಅಕ್ರಮವಾಗಿ ಬೇರೆಯವರ ಹೆಸರಿಗೆ ಪರಭಾರೆ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ರೀತಿ ಅಕ್ರಮ ಪರಭಾರೆ ಮಾಡಿರುವ ಪ್ರಕರಣಗಳು ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಈ) ಸರ್ಕಾರವು ಮುಜರಾಯಿ ಆಸ್ತಿಗಳ ಅಕ್ರಮ ಪರಭಾರೆ ಹಾಗೂ ದೇವಸ್ಥಾನದ ಸುಪರ್ದಿಯಲ್ಲಿ ಇರುವ ಆಸ್ತಿಗಳನ್ನು ಆಯಾ ದೇವಸ್ಥಾನಗಳ ಹೆಸರಿಗೆ ಮಾಡಲು ಯಾವ ಕ್ರಮ ಕೈಗೊಂಡಿದೆ ಇದಕ್ಕೆ ಯಾವುದಾದರೂ ಗಡುವು ನಿಗದಿಪಡಿಸಲಾಗಿದೆಯೇ ? (ವಿವರ ಒದಗಿಸುವುದು)

## ಕ್ರೈಸ್ತ ಸಮುದಾಯದ ವಿದ್ಯಾರ್ಥಿಗಳು ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೭೫ (೯೭೨) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕದಲ್ಲಿ ಕ್ರೈಸ್ತ ಸಮುದಾಯದ ವಿದ್ಯಾರ್ಥಿಗಳು ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯಲು ಯೂನಿವರ್ಸಿಟಿಗಳ ೫೦೦ ರ್‍ಯಾಂಕ್ ಇದ್ದರೆ ಮಾತ್ರ ಅವರಿಗೆ ವಿದ್ಯಾರ್ಥಿ ವೇತನ ನೀಡಲಾಗುವುದು ಎಂಬ ನಿಯಮದಿಂದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದ್ದು, ಸರ್ಕಾರ ಈ ನಿಯಮವನ್ನು ತೆಗೆದುಹಾಕಲು ಇರುವ ತೊಂದರೆಗಳೇನು ; (ವಿವರ ನೀಡುವುದು)

(ಆ) ಕ್ಯೂ ಆರ್ ರ್‍ಯಾಂಕ್ ೫೦೦ ಯೂನಿವರ್ಸಿಟಿಗಳು ಅಧಿಕ ಶುಲ್ಕವನ್ನು ವಿಧಿಸುತ್ತಿರುವುದರಿಂದ ವಿದ್ಯಾರ್ಥಿಗಳ ಪೋಷಕರಿಗೆ ಹೊರೆಯಾಗುತ್ತಿದ್ದು, ಈ ಬಗ್ಗೆ ಸರ್ಕಾರ ತನಿಖೆ ನಡೆಸಿದೆಯೇ ; ೨೦೨೧-೨೨, ೨೦೨೨-೨೩, ೨೦೨೩-೨೪ ಮತ್ತು ೨೦೨೪-೨೫ರಲ್ಲಿ ಎಷ್ಟು ಮಂದಿ ಕ್ರೈಸ್ತ ಅಭ್ಯರ್ಥಿಗಳಿಗೆ ವಿದೇಶದಲ್ಲಿ ಕಲಿಯಲು ವಿದ್ಯಾರ್ಥಿ ವೇತನ ನೀಡಲಾಗಿದೆ ; ಎಷ್ಟು ಮಂದಿಗೆ ಸಾಲ ನೀಡಲಾಗಿದೆ ; (ವಿವರ ನೀಡುವುದು)

(ಇ) ರಾಜ್ಯ ಸರ್ಕಾರವು ರೂ. ೨೫೦ ಕೋಟಿ ಕ್ರೈಸ್ತ ಸಮುದಾಯದ ಅಭಿವೃದ್ಧಿಗಾಗಿ ಅನುದಾನ ನೀಡಿದ್ದು, ಈ ಅನುದಾನದಿಂದ ವಿದೇಶದಲ್ಲಿ ಶಿಕ್ಷಣ ಪಡೆಯಲು ನೀಡುವ ವಿದ್ಯಾರ್ಥಿ ವೇತನ ನೀಡಲು ಸರ್ಕಾರ ಕ್ರಮ ವಹಿಸುವುದೇ ; (ಈ ಬಗ್ಗೆ ವಿವರ ನೀಡುವುದು)

(ಈ) ಸರ್ಕಾರವು ಕ್ರೈಸ್ತ ಸಮುದಾಯದ ಅಭಿವೃದ್ಧಿ ಮತ್ತು ಬೆಳವಣಿಗೆಗಾಗಿ ಪ್ರತ್ಯೇಕವಾದ ಕ್ರೈಸ್ತ ಕಲ್ಯಾಣ ಇಲಾಖೆಯನ್ನು ಪ್ರಾರಂಭಿಸಲು ಕ್ರಮಕೈಗೊಳ್ಳಲಾಗುವುದೇ ; ಈ ಬಗ್ಗೆ ಸರ್ಕಾರ ಶಿಫಾರಸ್ಸು ಮಾಡುವುದೇ ; (ವಿವರ ನೀಡುವುದು)

(ಉ) ಕ್ರೈಸ್ತ ಸಮುದಾಯದ ಅಭಿವೃದ್ಧಿಗಾಗಿ ೨೦೨೩-೨೦೨೪, ೨೦೨೪-೨೫ ರಲ್ಲಿ ಬಿಡುಗಡೆಯಾದ ಅನುದಾನ ಎಷ್ಟು ?

## ರಾಜ್ಯದಲ್ಲಿ ಎಲೆಕ್ಟ್ರಿಕ್ ಚಾಲಿತ ವಾಹನ ಕೇಂದ್ರ ಮತ್ತು ರಾಜ್ಯ ಸರ್ಕಾರದ ನಿಯಮದ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೭೬ (೯೭೩) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಲೆಕ್ಟ್ರಿಕ್ ಚಾಲಿತ (ಇವಿ) ವಾಹನ ಸಾರ್ವಜನಿಕ ವಲಯದಲ್ಲಿ ಸಂಚರಿಸಲು ರಾಜ್ಯ ಸರ್ಕಾರದಿಂದ ರಹದಾರಿ (ಪರ್ಮಿಟ್) ನೀಡಲಾಗುತ್ತಿದೆಯೇ ; ಈ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ನೀತಿಯೇನು ;

(ಆ) ರಾಜ್ಯದಲ್ಲಿ ಸಾರ್ವಜನಿಕವಾಗಿ ಸಂಚರಿಸುವ ಸರ್ಕಾರಿ ಬಸ್ಸು, ಟ್ಯಾಕ್ಸಿ ಮತ್ತು ಟೆಂಪೋಗಳು ಸಾರ್ವಜನಿಕ ವಲಯದಲ್ಲಿ ವಾಹನಗಳಿಗೆ ರಹಧಾರಿ ಪರವಾನಿಗೆ ತೆಗೆದು ಎಲೆಕ್ಟ್ರಿಕ್ ವಾಹನಗಳನ್ನು ಪರವಾನಿಗೆ ಇಲ್ಲದೆ ಸಂಚರಿಸುತ್ತಿರುವುದರಿಂದ ಸಾರ್ವಜನಿಕ ವಲಯದಲ್ಲಿ ಗೊಂದಲ ಉಂಟಾದ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಯಾವ ಮಾನದಂಡ ಅಳವಡಿಸಲು ಚಿಂತಿಸಲಾಗಿದೆ ; (ವಿವರ ನೀಡುವುದು)

(ಇ) ಕೆ.ಎಸ್.ಆರ್.ಟಿ.ಸಿ ಯಲ್ಲಿ ಪ್ರಸ್ತುತ ಚಾಲನೆಯಲ್ಲಿರುವ ಇವಿ ಬಸ್ಸುಗಳ ಸಂಖ್ಯೆ ಎಷ್ಟು ; ಪ್ರತಿ ಬಸ್‌ಗೆ ತಗಲುವ ವೆಚ್ಚ ಎಷ್ಟು ; ಸಾರಿಗೆ ಇಲಾಖೆಗೆ ಇದು ಲಾಭದಾಯಕವೇ ? (ವಿವರ ನೀಡುವುದು)

## ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅತಿಯಾದ ಮಳೆಯಿಂದ ರಸ್ತೆ ತೀವ್ರ ಹದಗೆಟ್ಟಿರುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೭೭ (೯೭೪) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅತಿಯಾದ ಮಳೆಯಿಂದ ರಸ್ತೆಗಳು ತೀವ್ರ ಹದಗೆಟ್ಟಿದ್ದು, ಗುಂಡಿಗಳಿಂದ ತುಂಬಿಕೊಂಡಿದ್ದು ಈ ಬಗ್ಗೆ ಉಂಟಾದ ನಷ್ಟ ಎಷ್ಟು ; (ವಿವರ ನೀಡುವುದು)

(ಆ) ಲೋಕೋಪಯೋಗಿ ಇಲಾಖೆಯು ಮಳೆಯಿಂದ ಉಂಟಾದ ಹಾನಿಯನ್ನು ಸರಿಪಡಿಸಲು ಉಭಯ ಜಿಲ್ಲೆಗಳಿಗೆ ಬಿಡುಗಡೆ ಮಾಡಿದ ಅನುದಾನ ಎಷ್ಟು ; (ವಿವರ ನೀಡುವುದು)

(ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ ೩ ವರ್ಷಗಳಲ್ಲಿ ಇಲಾಖೆಯಿಂದ ಕೈಗೊಂಡ, ಪೂರ್ಣಗೊಳಿಸಿದ ಯೋಜನೆಗಳಾವುವು ; (ವಿವರ ನೀಡುವುದು)

(ಈ) ಶಿರಾಡಿ ಘಾಟ್‌ನಲ್ಲಿ ಸುರಂಗ ಮಾರ್ಗ ಪ್ರಸ್ತಾವನೆ ಯಾವ ಹಂತದಲ್ಲಿದೆ ಈ ಬಗ್ಗೆ ಸರ್ಕಾರದ ಮುಂದಿರುವ ಯೋಜನೆ ಏನು ; ಕೇಂದ್ರ ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮವೇನು ? (ವಿವರ ನೀಡುವುದು)

## ಮೀನುಗಾರಿಕೆಗೆ ಸಮುದ್ರಕ್ಕೆ ತೆರಳುವವರಿಗೆ ವಿಮೆ ಕಡ್ಡಾಯ ಮಾಡುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೭೮ (೯೭೫) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರಾವಳಿ ಜಿಲ್ಲೆಗಳಲ್ಲಿ ಕಳೆದ ೨ ವರ್ಷಗಳಲ್ಲಿ ಮೀನುಗಾರಿಕೆಗೆ ಸಮುದ್ರಕ್ಕೆ ತೆರಳಿದ ಎಷ್ಟು ಮಂದಿ ಮೃತಪಟ್ಟಿದ್ದಾರೆ ; ಎಷ್ಟು ಮೃತ ದೇಹಗಳು ಪತ್ತೆ ಹಚ್ಚಲಾಗಿದೆ ; ಮೃತಪಟ್ಟ ಕುಟುಂಬಗಳಿಗೆ ನೀಡಿದ ಪರಿಹಾರ ಎಷ್ಟು ; ನೀಡಲು ಬಾಕಿ ಇರುವ ಪ್ರಕರಣಗಳೆಷ್ಟು ; ಯಾವ ಮಾನದಂಡದಲ್ಲಿ ವಿತರಿಸಲಾಗಿದೆ ; (ವಿವರ ನೀಡುವುದು)

(ಆ) ಮೀನುಗಾರಿಕೆಗೆ ಸಮುದ್ರಕ್ಕೆ ತೆರಳುವಾಗ ಕಡ್ಡಾಯವಾಗಿ ವಿಮೆ ಮಾಡಲಾಗಿದೆಯೇ ; ಇದನ್ನು ಉಲ್ಲಂಘಿಸಿದವರ ಮೇಲೆ ತೆಗೆದುಕೊಂಡ ಕ್ರಮಗಳೇನು ; (ವಿವರ ನೀಡುವುದು)

(ಇ) ಮೀನುಗಾರಿಕೆಗೆ ತೆರಳಿದ ಸಮಯದಲ್ಲಿ ನೀರುಪಾಲಾದ ಮೀನುಗಾರಿಕೆ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು ಸರ್ಕಾರ ಯಾವ ಯೋಜನೆ ಅಳವಡಿಸಿಕೊಳ್ಳಲಾಗಿದೆ ; (ವಿವರ ನೀಡುವುದು)

(ಈ) ಮೀನುಗಾರಿಕೆ ಇಲಾಖೆಯಿಂದ ೨೦೨೩-೨೪, ೨೦೨೪-೨೫ರಲ್ಲಿ ಖರ್ಚು ಮಾಡಿದ ಅನುದಾನ ಎಷ್ಟು ; ಯಾವ ಯಾವ ಉದ್ದೇಶಕ್ಕಾಗಿ ಖರ್ಚು ಮಾಡಲಾಗಿದೆ ? (ವಿವರ ನೀಡುವುದು)

## ಮೀನುಗಾರಿಕೆ ಇಲಾಖೆಯಿಂದ ಮೀನುಗಾರಿಕೆ ಜಟ್ಟಿ ಪ್ರಾರಂಭಿಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೭೯ (೯೭೬) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೀನುಗಾರಿಕೆಗಾಗಿ ಸ್ಥಾಪಿಸಿರುವ ಮೀನುಗಾರಿಕೆ ಬಂದರುಗಳ ಸಂಖ್ಯೆ ಎಷ್ಟು ; ಯಾವ ಹಂತದಲ್ಲಿದೆ ;

(ಆ) ಕಳಪೆ ಕಾಮಗಾರಿಯಿಂದ ಮೀನುಗಾರಿಕೆಗೆ ಬಂದರುಗಳಲ್ಲಿ ಕುಸಿತ ಉಂಟಾಗಿದ್ದು, ಪತ್ರಿಕೆಗಳಲ್ಲಿ ಪ್ರಚಾರಗೊಂಡಿದ್ದರ ಬಗ್ಗೆ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಇ) ಮೀನುಗಾರಿಕೆ ಇಲಾಖೆಯಿಂದ ಮೀನುಗಾರಿಕೆಗೆ ಜಟ್ಟಿ ಪ್ರಾರಂಭಿಸಲು ಕೇಂದ್ರ ಸರ್ಕಾರದಿಂದ ದೊರೆತಿರುವ ಅನುದಾನ ಎಷ್ಟು ; ಈ ಅನುದಾನವನ್ನು ಯಾವ ಯಾವ ಕಾಮಗಾರಿಗಳಿಗೆ ಉಪಯೋಗಿಸಲಾಗಿದೆ ; (ವಿವರ ನೀಡುವುದು)

(ಈ) ಸಾಗರಮಾಲಾ ಯೋಜನೆಗಳು ಯಾವ ಭಾಗದಲ್ಲಿ ಪೂರ್ಣಗೊಂಡಿದೆ ; ಪ್ರಸ್ತುತ ಇರುವ ಪ್ರಗತಿಯೇನು ; (ಮಾಹಿತಿ ನೀಡುವುದು)

(ಉ) ೨೦೨೩-೨೪ ಮತ್ತು ೨೦೨೪-೨೫ ರಲ್ಲಿ ಮೀನುಗಾರಿಕಾ ಪ್ರದೇಶಗಳಿಗೆ ಎಷ್ಟು ರಸ್ತೆಗಳನ್ನು ನಿರ್ಮಾಣ ಮಾಡಲಾಗಿದೆ ; ಇದಕ್ಕೆ ತಗಲುವ ವೆಚ್ಚ ಎಷ್ಟು ? (ವಿವರ ನೀಡುವುದು)

## ವಸತಿ ಇಲಾಖೆಯಿಂದ ನೀಡಿರುವ ಮನೆಗಳ ವಿವರ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೮೦ (೯೩೫) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಸತಿ ಇಲಾಖೆಯ ವತಿಯಿಂದ ವಿವಿಧ ಯೋಜನೆಯಡಿಯಲ್ಲಿ ೨೦೨೪–೨೫ ಮತ್ತು ೨೦೨೫–೨೬ನೇ ಸಾಲಿನಲ್ಲಿ ಹಂಚಿಕೆ ಮಾಡಿರುವ ಮನೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಎರಡು ವರ್ಷಗಳಲ್ಲಿ ಯಶವಂತಪುರ ವಿಧಾನಸಭಾ ಕ್ಷೇತ್ರಕ್ಕೆ ವಿವಿಧ ಯೋಜನೆಗಳಡಿಯಲ್ಲಿ ಹಂಚಿಕೆ ಮಾಡಿರುವ ಮನೆಗಳ ಸಂಖ್ಯೆ ಎಷ್ಟು ; (ವಿವರವಾದ ಮಾಹಿತಿ ಒದಗಿಸುವುದು)

(ಇ) ಒಂದು ವಿಧಾನಸಭಾ ಕ್ಷೇತ್ರಕ್ಕೆ ಸರಾಸರಿಯಾಗಿ ಎಷ್ಟು ಮನೆಗಳನ್ನು ವಿವಿಧ ಯೋಜನೆಗಳಲ್ಲಿ ಹಂಚಿಕೆ ಮಾಡಲು ಗುರಿಯನ್ನು ನಿಗದಿಪಡಿಸಲಾಗಿದೆ ; (ವಿವರ ನೀಡುವುದು)

(ಈ) ಈ ಯೋಜನೆಗಳಿಗೆ ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಪಾಲಿನ ಅನುದಾನವೆಷ್ಟು ; (ವಿವರ ನೀಡುವುದು)

(ಉ) ಸಾರ್ವಜನಿಕರಿಂದ ವಸತಿ ನಿವೇಶನಗಳಿಗೆ ಅತಿ ಹೆಚ್ಚು ಬೇಡಿಕೆ ಇರುವುದರಿಂದ ಬೆಂಗಳೂರು ನಗರದಲ್ಲಿ ಗೃಹ ಮಂಡಳಿ ವತಿಯಿಂದ ಯಾವ ಯಾವ ಸ್ಥಳಗಳಲ್ಲಿ ಬಡಾವಣೆಗಳನ್ನು ನಿರ್ಮಿಸಲಾಗಿದೆ ? (ಮಾಹಿತಿ ಒದಗಿಸುವುದು)

## ಹೈನುಗಾರಿಕೆ ಸಹಾಯಧನದ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೮೧ (೧೦೩೯) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪಶುಸಂಗೋಪನಾ ಇಲಾಖೆವತಿಯಿಂದ ಹೈನುಗಾರಿಕೆಗೆ ಏನೇನು ಸಹಾಯಧನ ನೀಡಲಾಗುತ್ತಿದೆ ; (ಸಂಪೂರ್ಣ ವಿವರ ಒದಗಿಸುವುದು)

(ಆ) ಹಸು ಸಾಕಣೆ ಮಾಡಲು ಒಬ್ಬ ರೈತನಿಗೆ ಎಷ್ಟು ಸಹಾಯಧನ ನೀಡಲಾಗುತ್ತಿದೆ ; ಎಷ್ಟು ಸಾಲವನ್ನು ನೀಡಲಾಗುತ್ತಿದೆ ; ಎಷ್ಟು ಸಬ್ಸಿಡಿಯನ್ನು ನೀಡಲಾಗುತ್ತಿದೆ ; (ವಿವರವನ್ನು ಒದಗಿಸುವುದು)

(ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ಹೈನುಗಾರಿಕೆಗೆ ಎಷ್ಟು ಸಹಾಯಧನ ಬಿಡುಗಡೆ ಮಾಡಲಾಗಿದೆ ; (ಹಸು ಸಾಕಣೆ, ಮೇಕೆ/ಕುರಿ ಸಾಕಣೆ, ಕೋಳಿ ಸಾಕಣೆ ತಾಲ್ಲೂಕುವಾರು ಪ್ರತ್ಯೇಕ ವಿವರ ನೀಡುವುದು)

(ಈ) ಕೋಳಿ ಸಾಕಾಣಿಕೆ ಮಾಡುವವರಿಗೆ ಏನೇನು ಸೌಲಭ್ಯ, ಸಹಾಯಧನವನ್ನು ಇಲಾಖೆ ವತಿಯಿಂದ ನೀಡಲಾಗುತ್ತಿದೆ ? (ವಿವರವನ್ನು ಒದಗಿಸುವುದು)

## ಅನಧಿಕೃತ ಬಡಾವಣೆಗಳ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೮೨ (೧೦೪೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆ ನಿರ್ಮಿಸುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ ; ಈಗಾಗಲೇ ಅನಧಿಕೃತ ಬಡಾವಣೆ ನಿರ್ಮಾಣವನ್ನು ಪತ್ತೆಹಚ್ಚಿ ತಡೆಗಟ್ಟಲು ಸರ್ಕಾರ ಕ್ರಮ ಕೈಗೊಂಡಿದೆಯೇ ; ಮತ್ತು ಈ ಬಗ್ಗೆ ಸರ್ಕಾರಿ ಆದೇಶ ಇದ್ದಲ್ಲಿ, ಪ್ರತಿ ನೀಡುವುದು ;

(ಆ) ಕೃಷಿ ಜಮೀನನ್ನು ತುಂಡು ತುಂಡಾಗಿ ವಿಭಜಿಸಿ ಮಾರಾಟ ಮಾಡುವುದನ್ನು ತಡೆಯಲು ಸರ್ಕಾರ ಯಾಕೆ ಈವರೆಗೂ ಕ್ರಮ ಕೈಗೊಂಡಿರುವುದಿಲ್ಲ ;

(ಇ) ಕೃಷಿ ಜಮೀನನ್ನು ಅನ್ಯ ಉದ್ದೇಶಕ್ಕೆ ಭೂ ಪರಿವರ್ತನೆಗೊಳಿಸಬೇಕಾದಾಗ ಪಾಲಿಸಬೇಕಾದ ಮಾರ್ಗಸೂಚಿಗಳು ಯಾವುವು ; ಸದರಿ ಜಮೀನಿಗೆ ಇರಬೇಕಾದ ರಸ್ತೆ ಸಂಪರ್ಕ, ರಸ್ತೆ ಹಾಗೂ ನದಿ ಪರಂಬೋಕುವಿನಿಂದ ಇರಬೇಕಾದ ದೂರುಗಳ ಬಗ್ಗೆ ಮಾಹಿತಿ ನೀಡುವುದು ; ಭೂ ಪರಿವರ್ತನೆಗೆ ಪಾಲಿಸಬೇಕಾದ ಮಾರ್ಗಸೂಚಿಗಳ ಬಗ್ಗೆ ಪ್ರತ್ಯೇಕವಾಗಿ ಪ್ರಮಾಣಿಕ ಕಾರ್ಯನಿರ್ವಹಣೆ ವಿಧಾನಗಳಿದ್ದಲ್ಲಿ ಪ್ರತಿ ನೀಡುವುದು ;

(ಈ) ಜಮೀನು ಭೂ ಸಮತಟ್ಟು ಅಥವಾ ಗುಡ್ಡ ಅಗೆಯಲು ಸಾರ್ವಜನಿಕರು ಯಾವುದೇ ಸ್ಥಳೀಯ ಸಂಸ್ಥೆ ಅಥವಾ ಪ್ರಾಧಿಕಾರದ ಅನುಮತಿ ಪಡೆಯುವುದು ಕಡ್ಡಾಯವೇ ; ಈ ಬಗ್ಗೆ ಸರ್ಕಾರದಿಂದ ಆದೇಶ ಅಥವಾ ಮಾರ್ಗಸೂಚಿ ಜಾರಿಗೊಳಿಸಲಾಗಿದೆಯೇ ; ೨೦೨೩-೨೪ ಮತ್ತು ೨೦೨೪-೨೫ನೇ ಸಾಲಿನಲ್ಲಿ ಸದರಿ ಭೂ ಸಮಮಟ್ಟಗೊಳಿಸಲು ಅನುಮತಿ ನೀಡಲಾಗಿದೆಯೇ ? (ಗ್ರಾಮವಾರು ಮಾಹಿತಿ ನೀಡುವುದು)

## ಮೀನುಗಾರರಿಗೆ ಸೀಮೆ ಎಣ್ಣೆ ಸಬ್ಸಿಡಿ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೮೩ (೧೦೪೧) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೀನುಗಾರರಿಗೆ ಪ್ರಸ್ತುತ ಸೀಮೆ ಎಣ್ಣೆಗೆ ಸಬ್ಸಿಡಿ ನೀಡಲಾಗುತ್ತಿದೆಯೇ ; ಪ್ರತೀ ಲೀಟರ್‌ಗೆ ಎಷ್ಟು ಸಬ್ಸಿಡಿ ನೀಡಲಾಗುತ್ತಿದೆ ;

(ಆ) ಪ್ರಸ್ತುತ ನಾಡದೋಣಿ ಮೀನುಗಾರರಿಗೆ ನೀಡುತ್ತಿರುವ ಸೀಮೆ ಎಣ್ಣೆ ಸಬ್ಸಿಡಿ ತುಂಬಾ ಕಡಿಮೆ ಇದ್ದು, ಇದರಿಂದ ಮೀನುಗಾರರು ನಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ; ಸಬ್ಸಿಡಿ ಹೆಚ್ಚಿಸಲು ಸರ್ಕಾರಕ್ಕೆ ಇರುವ ಸಮಸ್ಯೆಯೇನು ;

(ಇ) ಪ್ರಸ್ತುತ ಮೀನುಗಾರರಿಗೆ ಪ್ರತೀ ಲೀಟರ್ ಸೀಮೆ ಎಣ್ಣೆಗೆ ೫೮ ರೂ ಆಗುತ್ತಿದ್ದು ಇದನ್ನು ಕನಿಷ್ಟ ೩೫ ರೂ. ಗಳಿಗೆ ದೊರಕುವಂತೆ ಮಾಡಿದರೆ ಮೀನುಗಾರರಿಗೆ ಅನುಕೂಲವಾಗುವುದಿಲ್ಲವೇ ; ಈ ಬಗ್ಗೆ ಸರ್ಕಾರ ಯಾಕೆ ಕ್ರಮವಹಿಸಬಾರದು ;

(ಈ) ನಾಡದೋಣಿ ಮೀನುಗಾರರು ಬಳಸುವ ಉತ್ತಮ ಗುಣಮಟ್ಟದ ಮೀನಿನ ಬಲೆ (ರಾಣಿ ಬಲೆ) ಖರೀದಿಸಲು ಸಬ್ಸಿಡಿ ನೀಡುವ ಬಗ್ಗೆ ಸರ್ಕಾರ ಯಾಕೆ ಕ್ರಮ ವಹಿಸಬಾರದು ?

## ಪ್ರಕೃತಿ ವಿಕೋಪ ಪರಿಹಾರ ಮೊತ್ತ ಪಾವತಿಯಲ್ಲಿ ಆರ್ಥಿಕ ದುರುಪಯೋಗ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೮೮೪ (೧೦೦೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ೨೦೨೨ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಮತ್ತು ಭಾರಿ ಮಳೆಯಿಂದಾಗಿ ಮನೆಗಳಿಗೆ ಪರಿಹಾರ ಪಾವತಿಸಿರುವ ಪ್ರಕರಣಗಳ ('ಎ', 'ಬಿ' ಮತ್ತು 'ಸಿ' ವರ್ಗವಾರು) ಸಂಖ್ಯೆ ಹಾಗೂ ವಿತರಿಸಿದ ಪರಿಹಾರ ಮೊತ್ತ ಎಷ್ಟು ; (ಪ್ರಕರಣವಾರು ಮಾಹಿತಿ ನೀಡುವುದು)

(ಆ) ಈ ಪೈಕಿ ಎಷ್ಟು ಪ್ರಕರಣಗಳಲ್ಲಿ ಸೂಕ್ತ ದಾಖಲೆ ಇಲ್ಲದೆ ಪರಿಹಾರ ಮೊತ್ತ ಮಂಜೂರು ಮಾಡಿರುವುದು ದೃಢಪಟ್ಟಿದೆ ; ಇದರ ಒಟ್ಟು ಮೊತ್ತ ಎಷ್ಟು ;

(ಇ) ಸಹಾಯಕ ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳು, ಜಿಲ್ಲಾಧಿಕಾರಿ ಕಛೇರಿ ಮಂಡ್ಯ ಇವರ ನೇತೃತ್ವದ ತನಿಖಾ ತಂಡ ಹಾಗೂ ಮೈಸೂರಿನ ಪ್ರಾದೇಶಿಕ ಆಯುಕ್ತರ ಕಛೇರಿ ವತಿಯಿಂದ ನಡೆದ ತನಿಖೆಯಿಂದಲೂ ಭಾರಿ ಮೊತ್ತದ ಹಣ ದುರುಪಯೋಗವಾಗಿರುವುದು ಸಾಬೀತಾಗಿದ್ದರೂ ಈವರೆವಿಗೂ ಆರೋಪಿತ ನೌಕರರು/ ಅಧಿಕಾರಿಗಳ ವಿರುದ್ಧ ಕ್ರಮವಾಗದಿರಲು ಕಾರಣವೇನು ;

(ಈ) ಶಾಖಾ ಮುಖ್ಯಸ್ಥರು 'ಪ್ರಕರಣವು ಅನುಮಾನದಿಂದ ಇರುತ್ತದೆ' ಎಂದು ತಮ್ಮ ಟಿಪ್ಪಣಿಯಲ್ಲಿ ನಮೂದಿಸಿದ್ದರೂ ಮತ್ತೊಮ್ಮೆ ದಾಖಲೆಗಳನ್ನು ಪರಿಶೀಲಿಸದೆ ಪರಿಹಾರ ಮಂಜೂರು ಮಾಡಿರುವಲ್ಲಿ ವಿಷಯ ನಿರ್ವಾಹಕರಿಂದ ತಹಶೀಲ್ದಾರ್‌ವರೆಗೂ ಕರ್ತವ್ಯ ಲೋಪ ಎಸಗಿ ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ನಷ್ಟವುಂಟು

ಮಾಡಿರುವುದರಿಂದ ಇತರ ನೌಕರರು/ ಅಧಿಕಾರಿಗಳ ವಿರುದ್ಧ ಕ್ರಮವಹಿಸದಿರುವುದು ಏಕೆ ; ಈ ಕುರಿತು ಸರ್ಕಾರದ ನಿಲುವೇನು ;

(ಉ) ಜಿಲ್ಲಾಧಿಕಾರಿ, ಮಂಡ್ಯರವರು (ಅ.ಸ.ಪ. MDC-DEVOCAL/೩೮/೨೦೨೨–JUD SEC-DC MANDYA, ದಿನಾಂಕ:೧೫.೦೭.೨೦೨೩) ಈ ಪ್ರಕರಣ ಕುರಿತು ಸಮಗ್ರ ವರದಿ ನೀಡಲು ನೇಮಿಸಿದ್ದ ಉಪ ವಿಭಾಗಾಧಿಕಾರಿ, ಪಾಂಡವಪುರ ಉಪ ವಿಭಾಗ, ಪಾಂಡವಪುರ ನೇತೃತ್ವದ ತ್ರಿಸದಸ್ಯ ಸಮಿತಿ ವರದಿ ಸಲ್ಲಿಸಿದೆಯೇ ; ಇದ್ದಲ್ಲಿ, ಪೂರ್ಣ ವರದಿ ನೀಡುವುದು ; ಹಾಗಿದ್ದಲ್ಲಿ, ಸೂಕ್ತ ಕಾರಣಗಳನ್ನು ತಿಳಿಸುವುದು ;

(ಊ) ಸದರಿ ಪ್ರಕರಣ ಸಂಬಂಧ ಉಪ ವಿಭಾಗಾಧಿಕಾರಿ, ಮಂಡ್ಯ ಉಪ ವಿಭಾಗ, ಮಂಡ್ಯರವರು ವಿಚಾರಣಾ ವರದಿ ಸಲ್ಲಿಸಿದ್ದಾರೆಯೇ ?

## ಕರ್ನಾಟಕ ಸರ್ಕಾರದ ಹೆಸರು, ಲಾಂಛನ ದುರುಪಯೋಗವಾಗುತ್ತಿರುವ ಬಗ್ಗೆ

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೮೮೫ (೧೦೦೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಮತ್ತು ಅಧೀನ ಕಛೇರಿಗಳಲ್ಲಿ ಉಪಯೋಗಿಸುವ ವಾಹನ (ಗುತ್ತಿಗೆ, ಹೊರಗುತ್ತಿಗೆ ಪಡೆದ ಖಾಸಗಿ

ವಾಹನ)ಗಳಲ್ಲಿ 'ಕರ್ನಾಟಕ ಸರ್ಕಾರ'ದ ಹೆಸರು, 'ಲಾಂಛನ' ಹಾಗೂ ಸಂಸ್ಥೆಯ ಹೆಸರು / ಚಿಹ್ನೆ / ಬರಹ ಇತ್ಯಾದಿ ಹೆಸರುಗಳನ್ನು ಬಳಸಲು ಅವಕಾಶವಿದೆಯೇ ;

(ಆ) ಅವಕಾಶವಿಲ್ಲದಿದ್ದಲ್ಲಿ, ಈ ರೀತಿ ಅನಧಿಕೃತವಾಗಿ ಬರಹ ಮತ್ತು ಫಲಕಗಳನ್ನು ವಾಹನಗಳಲ್ಲಿ ಅವಳಡಿಸಿ ಉಪಯೋಗಿಸುವವರ ವಿರುದ್ಧ ಯಾವ ರೀತಿಯ ದಂಡನೆಗಳನ್ನು ವಿಧಿಸಲಾಗುತ್ತದೆ ; ತೆರವುಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು ;

(ಇ) ಸರ್ಕಾರದ ವಿವಿಧ ಇಲಾಖೆಗಳ ಹಾಗೂ ಅಧೀನ ಕಛೇರಿಗಳಲ್ಲಿ ಮಾಸಿಕ ಬಾಡಿಗೆ ಆಧಾರದ ಮೇಲೆ ಗುತ್ತಿಗೆ / ಹೊರಗುತ್ತಿಗೆಯಲ್ಲಿ ಪಡೆದ ವಾಹನಗಳ ಮೇಲೆ 'ಕರ್ನಾಟಕ ಸರ್ಕಾರದ ಸೇವೆಯಲ್ಲಿ' ಎಂಬ ಹೆಸರು ಮತ್ತು ಸರ್ಕಾರದ ಲಾಂಛನವನ್ನು ಬಳಸಬಹುದೇ ;

(ಈ) ಸರ್ಕಾರ ಸ್ವಾಮ್ಯದ ಸಂಸ್ಥೆಗಳಲ್ಲದೆ ವಾಹನಗಳ ನೋಂದಣಿ ಫಲಕಗಳ ಮೇಲೆ ಅಧಿಕೃತವಾಗಿ ರಾಷ್ಟ್ರೀಯ ಹಕ್ಕುಗಳ ಆಯೋಗ, ರಾಜ್ಯ ಮಾನವ ಹಕ್ಕುಗಳ ಆಯೋಗಗಳ ಹೆಸರುಗಳನ್ನು ಹೋಲುವಂತಹ ರಾಷ್ಟ್ರೀಯ / ರಾಜ್ಯ ಮಾನವ ಹಕ್ಕುಗಳ ಒಕ್ಕೂಟ / ಸಂಸ್ಥೆ ಇತ್ಯಾದಿ ಹೆಸರುಗಳನ್ನು ಚಿಹ್ನೆ / ಲಾಂಛನಗಳನ್ನು ಹಾಗೂ ಸಂಘ–ಸಂಸ್ಥೆಗಳ ಹೆಸರು, ವಾಹನದ ಮೇಲೆ ದೀಪ ಅಳವಡಿಸಿಕೊಂಡಿರುವವರ ವಿರುದ್ಧ ತೆಗೆದುಕೊಂಡಿರುವ ಕ್ರಮಗಳೇನು ;

(ಉ) ಇದುವರೆವಿಗೂ ಈ ಸಂಬಂಧ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಹಾಗೂ ವಿಧಿಸಲಾಗಿರುವ ದಂಡದ ಮೊತ್ತ ಎಷ್ಟು ? (ವಿವರ ನೀಡುವುದು)

## ಗ್ರಾಮ ಸಹಾಯಕರಿಗೆ ಸೇವಾ ಭದ್ರತೆ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೮೮೬ (೧೦೦೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಂದಾಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಸಹಾಯಕರ ಒಟ್ಟು ಸಂಖ್ಯೆ ಎಷ್ಟು; ಇವರಲ್ಲಿ ಪುರುಷರು ಮತ್ತು ಮಹಿಳೆಯರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಗ್ರಾಮ ಸಹಾಯಕರನ್ನು ನೇಮಿಸಿಕೊಳ್ಳಲು ಇರುವ ಮಾನದಂಡಗಳೇನು ; ಪಾವತಿಸುತ್ತಿರುವ ಮಾಸಿಕ ಗೌರವಧನ ಎಷ್ಟು ; (ಆದೇಶ ಪ್ರತಿ ನೀಡುವುದು)

(ಇ) ಗ್ರಾಮ ಸಹಾಯಕರು ನಿವೃತ್ತಿ ಹೊಂದಿದಾಗ ಇಲ್ಲವೇ ಮರಣ ಹೊಂದಿದವರಿಗೆ ಸೇವಾವಧಿಗೆ ಅನುಗುಣವಾಗಿ ಇಡುಗಂಟು ನೀಡುವ ಕುರಿತು ಸರ್ಕಾರದ ನಿಲುವೇನು ;

(ಈ) ಹಲವಾರು ವರ್ಷಗಳಿಂದ ಅಲ್ಪ ವೇತನಕ್ಕಾಗಿ ದುಡಿಯುತ್ತಿರುವ ಗ್ರಾಮ ಸಹಾಯಕರಿಗೆ ಸೇವಾ ನಿಯಮಾವಳಿಯನ್ನು ರೂಪಿಸಿ ಸೇವಾ ಭದ್ರತೆಯನ್ನು ಕಲ್ಪಿಸುವ ('ಡಿ' ದರ್ಜೆ ನೌಕರರೆಂದು) ಕುರಿತು ಸರ್ಕಾರದ ನಿರ್ಧಾರವೇನು ? (ವಿವರ ನೀಡುವುದು)

## ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳ ನಿರ್ಮಾಣ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :-**

೮೮೭ (೧೦೦೬) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಾನವ ಹಸ್ತಕ್ಷೇಪವಿಲ್ಲದೇ ವೈಜ್ಞಾನಿಕವಾಗಿ ಆಧುನಿಕ ತಂತ್ರಜ್ಞಾನ ಮೂಲಕ ಪರೀಕ್ಷಿಸುವ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳನ್ನು ಎಷ್ಟು ಜಿಲ್ಲೆಗಳಲ್ಲಿ ನಿರ್ಮಿಸಲಾಗಿದೆ ; (ಎಲ್ಲೆಲ್ಲಿ ಹಾಗೂ ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬುವುದರ ಕುರಿತು ಸಂಪೂರ್ಣ ವಿವರ ನೀಡುವುದು)

(ಆ) ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳನ್ನು ಉಳಿದ ಎಲ್ಲಾ ಜಿಲ್ಲೆಗಳಲ್ಲೂ ನಿರ್ಮಿಸುವ ಸಂಬಂಧ ತೆಗೆದುಕೊಂಡಿರುವ ಕ್ರಮಗಳೇನು ; ಪ್ರತಿ ಪರೀಕ್ಷಾ ಪಥ ನಿರ್ಮಾಣಕ್ಕೆ ಭರಿಸಲಾಗುತ್ತಿರುವ ವೆಚ್ಚ ಎಷ್ಟು ;

(ಇ) ಸಾರ್ವಜನಿಕ, ಖಾಸಗಿ ಸಹಭಾಗಿತ್ವದಡಿ ಯಾವ ಯಾವ ಜಿಲ್ಲೆಗಳಲ್ಲಿ BOT (Build Operate Transfer) ಹಾಗೂ BOO (Build Own Operate) ಮಾದರಿಯಲ್ಲಿ Automated Testing Station (ATS) ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಮತ್ತು ಎಲ್ಲೆಲ್ಲಿ ; (ಸಂಪೂರ್ಣ ವಿವರ ನೀಡುವುದು)

(ಈ) BOT ಹಾಗೂ BOO ಮಾದರಿಗಳ ನಡುವಿನ ವ್ಯತ್ಯಾಸವೇನು ?

## ಹೊರ ರಾಜ್ಯಗಳಲ್ಲಿರುವ ಛತ್ರಗಳು/ ಪ್ರವಾಸಿ ಭವನಗಳ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೮೮೮ (೧೦೦೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಸರ್ಕಾರದ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆ ವತಿಯಿಂದ ರಾಜ್ಯದ ಭಕ್ತರ ಅನುಕೂಲಕ್ಕಾಗಿ ಹೊರ ರಾಜ್ಯಗಳ ಯಾವ ಯಾವ ಧಾರ್ಮಿಕ

ಸ್ಥಳಗಳಲ್ಲಿ ಕರ್ನಾಟಕ ರಾಜ್ಯ ಛತ್ರಗಳು/ ಪ್ರವಾಸಿ ಭವನಗಳನ್ನು ನಿರ್ಮಿಸಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಆ) ಕರ್ನಾಟಕ ಸರ್ಕಾರವು ಬೇರೆ ಯಾವ ರಾಜ್ಯಗಳ ಧಾರ್ಮಿಕ ಸ್ಥಳಗಳಲ್ಲಿ ಕರ್ನಾಟಕ ರಾಜ್ಯ ಛತ್ರಗಳು/ ಪ್ರವಾಸಿ ಭವನಗಳನ್ನು ನಿರ್ಮಿಸುತ್ತಿದೆ ಅಥವಾ ನಿರ್ಮಿಸಲು ಉದ್ದೇಶಿಸಿದೆ ; ಇದಕ್ಕಾಗಿ ಎಷ್ಟು ಅನುದಾನವನ್ನು ಮೀಸಲಿಡಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಇ) ಹೊರ ರಾಜ್ಯಗಳಲ್ಲಿರುವ ರಾಜ್ಯ ಛತ್ರಗಳ ನಿರ್ವಹಣೆ ಮತ್ತು ಇನ್ನಿತರೆ ಮೂಲಸೌಕರ್ಯ ಕಲ್ಪಿಸುವ ಕೆಲಸಗಳಿಗೆ ಕಳೆದ 03 ವರ್ಷಗಳಲ್ಲಿ ಒದಗಿಸಲಾಗಿರುವ ಅನುದಾನ ಎಷ್ಟು ; (ವರ್ಷವಾರು ಮಾಹಿತಿ ನೀಡುವುದು)

(ಈ) ಇಲ್ಲಿನ ಕರ್ನಾಟಕ ರಾಜ್ಯ ಛತ್ರಗಳು/ ಪ್ರವಾಸಿ ಭವನಗಳಲ್ಲಿ ರಾಜ್ಯದ ಭಕ್ತರು ಉಳಿದುಕೊಳ್ಳಲು ಅಥವಾ ವಾಸ್ತವ್ಯಕ್ಕೆ ಕೊಠಡಿಗಳನ್ನು ಮುಂಚಿತವಾಗಿ ಕಾಯ್ದಿರಿಸಲು ಅನುಸರಿಸಬೇಕಾದ ಕ್ರಮಗಳೇನು ; ಯಾರನ್ನು ಸಂಪರ್ಕಿಸಿಬೇಕು ? (ವಿಳಾಸ, ಸಂಪರ್ಕ ಸಂಖ್ಯೆ, ಇ–ಮೇಲ್ ವಿಳಾಸವನ್ನು ಒಳಗೊಂಡಂತೆ ಸಂಪೂರ್ಣ ಮಾಹಿತಿ ನೀಡುವುದು)

## ಸಾರಿಗೆ ಇಲಾಖೆ ಸಂಬಂಧಿತ ಸೇವೆಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೮೯ (೧೦೪೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸಾರಿಗೆ ಇಲಾಖೆಯಲ್ಲಿ ವಾಹನಗಳ ನೋಂದಣಿಗಾಗಿ ಇರುವ ನಿಯಮಗಳು ಯಾವುವು ; ಹೊಸ ವಾಹನಗಳನ್ನು ನೋಂದಾಯಿಸುವಾಗ ಮತ್ತು ವರ್ಗಾಯಿಸುವಾಗ ಸದರಿ ವಾಹನದ ಮೂಲ ಮೌಲ್ಯವನ್ನು ಮರೆ ಮಾಚಿ ಕಡಿಮೆ ಬೆಲೆ ಪರಿಗಣಿಸಿ ನೋಂದಾವಣೆ ಶುಲ್ಕವನ್ನು ಕಡಿಮೆ ಮಾಡಿ ಇಲಾಖೆಗೆ ವಂಚಿಸಿದ ಬಗ್ಗೆ ಇಲಾಖೆಯ ಗಮನಕ್ಕೆ ಬಂದಿದೆಯೇ ; ಈ ಕುರಿತಂತೆ ಇಲಾಖೆ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಆ) ಸಾರಿಗೆ ಇಲಾಖೆಯಲ್ಲಿ ವಿವಿಧ ವಾಹನ ಸಂಬಂಧಿತ ಹಾಗೂ ಚಾಲನಾ ಪರವಾನಿಗೆ ಸಂಬಂಧಿತ ಸೇವೆಗಳಿಗೆ ನಿಗದಿಪಡಿಸಿದ ಶುಲ್ಕ ಎಷ್ಟು ; ಎಲ್ಲಾ ಸೇವೆಗಳನ್ನು FCFS (ಪ್ರಥಮ ಅರ್ಜಿ ಪ್ರಥಮ ಸೇವೆ) ಪದ್ಧತಿಯಂತೆ ನಿರ್ವಹಿಸಲು ಕ್ರಮವಹಿಸಿದೆಯೇ ; (ವಿವರ ನೀಡುವುದು)

(ಇ) ಸಾರಿಗೆ ಸಂಬಂಧಿತ ಸೇವೆಗಳಲ್ಲಿ ಯಾವ್ಯಾವ ಸೇವೆಗಳನ್ನು ಹೊರಗುತ್ತಿಗೆ ಸಂಸ್ಥೆಗಳಿಗೆ ನೀಡಲಾಗಿದೆ ; ವಾಹನ ನೋಂದಣಿ, ವರ್ಗಾವಣೆ, ಚಾಲನಾ ಪರವಾನಿಗೆ, ನವೀಕರಣ, ಇತ್ಯಾದಿಗಳ ಕಾರ್ಡುಗಳ ವಿತರಣೆಗೆ ನಿಗದಿಪಡಿಸಿದ ಅವಧಿಯೆಷ್ಟು: ಅದನ್ನು ಪಾಲಿಸಲಾಗುತ್ತಿದೆಯೇ ;

(ಈ) ಸಾರಿಗೆ ಸಂಬಂಧಿತ ಸೇವೆಗಳನ್ನು ಆನ್‌ಲೈನ್ ಮೂಲಕ ನೀಡಲು ಮತ್ತು ಪಾವತಿಗಳನ್ನು ಸಹ ಆನ್‌ಲೈನ್ ಮೂಲಕ ಮತ್ತು ಸರಳ ಪಾವತಿ ವಿಧಾನಗಳ ಮೂಲಕ ಮಾಡಲು ಏನು ಕ್ರಮ ವಹಿಸಲಾಗಿದೆ ?

# ಕರ್ನಾಟಕ ರಾಜ್ಯದಲ್ಲಿ ಕಂದಾಯ ಹಾಗೂ ಸರ್ಕಾರಿ ಭೂಮಿಯ ದಾಖಲೆ ಮತ್ತು ನಿರ್ವಹಣೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೯೦ (೧೦೪೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸರ್ಕಾರಿ ಭೂಮಿಯ ರಕ್ಷಣೆ ಮತ್ತು ನಿರ್ವಹಣೆ ಜವಾಬ್ದಾರಿ ಯಾವ ಇಲಾಖೆಯದ್ದು ; ಕಂದಾಯ ಹೊರತುಪಡಿಸಿ ಇತರ ಇಲಾಖೆಗಳಿಗೆ ಈ ಕುರಿತು ಅವಕಾಶವಿದೆಯೇ ;

(ಆ) ಇಲ್ಲಿಯವರೆಗೆ ಎಷ್ಟು ಪ್ರಮಾಣದ ಸರ್ಕಾರಿ ಭೂಮಿಯಲ್ಲಿನ ಒತ್ತುವರಿ, ಅತಿಕ್ರಮಣಗಳನ್ನು ತೆರವುಗೊಳಿಸಿ ಕಂದಾಯ ಇಲಾಖೆಯ ಸುಪರ್ದಿಗೆ ತೆಗೆದುಕೊಳ್ಳಲಾಗಿದೆಯೇ ;

(ಇ) ಸರ್ಕಾರಿ ಭೂಮಿಯಲ್ಲಿನ ಕಾನೂನು ಬಾಹಿರ ಅತಿಕ್ರಮಣಗಳನ್ನು ತೆರವುಗೊಳಿಸುವ, ಸಾರ್ವಜನಿಕ ರಸ್ತೆ, ದಾರಿ, ಪರಂಬೋಕು ತೋಡು ಹಾಗೂ ಇತರ ತೆರೆದ ಪ್ರದೇಶಗಳನ್ನು ಮುಕ್ತವಾಗಿರಿಸುವುದನ್ನು ಕಂದಾಯ ಇಲಾಖೆ ಹೇಗೆ ಖಾತರಿಪಡಿಸುತ್ತಿದೆ ; (ವಿವರ ನೀಡುವುದು)

(ಈ) ರಾಜ್ಯದಲ್ಲಿ ಸುಮಾರು ೧೪ ಲಕ್ಷ ಸರ್ಕಾರಿ ಭೂಮಿಯಲ್ಲಿ ಒತ್ತುವರಿ ಸಕ್ರಮಕ್ಕಾಗಿ ಅರ್ಜಿಗಳು ಸಲ್ಲಿಕೆಯಾಗಿದ್ದು ವಿವಿಧ ಹಂತಗಳಲ್ಲಿ ವಿಲೇವಾರಿಗೆ ಬಾಕಿಯಿರುವ ಕಾರಣ ಸರಕಾರಿ ಸಂಸ್ಥೆಗಳಿಗೆ ಸಾರ್ವಜನಿಕ ಉದ್ದೇಶಗಳಿಗೆ ಭೂಮಿ ಲಭಿಸದಿರುವುದು ನಿಜವೇ ; ಈ ಕುರಿತು ಇಲಾಖೆ ಕೈಗೊಂಡ ಕ್ರಮಗಳೇನು ;

(ಉ) ಕಂದಾಯ ಮತ್ತು ಸರ್ಕಾರಿ ಭೂಮಿಯಲ್ಲಿರುವ ನಿಯಮಬಾಹಿರ ಕಟ್ಟಡ ಹಾಗೂ ಇತರ ನಿರ್ಮಾಣಗಳನ್ನು ಮತ್ತು ಭೂಮಿ ಮಂಜೂರಾಗಿರುವ ಉದ್ದೇಶಕ್ಕೆ ಬಳಸದಿರುವ ಪ್ರಕರಣಗಳಲ್ಲಿ ನಿಯಮಾನುಸಾರ ಕ್ರಮ ಜರುಗಿಸುವ/ತೆರವುಗೊಳಿಸಲು ಅವಕಾಶ ಕಂದಾಯ ಹೊರತುಪಡಿಸಿ ಇತರ ಇಲಾಖೆಗಳಿಗಿದೆಯೇ ; ಇಲ್ಲದಿದ್ದಲ್ಲಿ, ಇತರ ಸ್ಥಳೀಯ ಸಂಸ್ಥೆಗಳಿಗೆ ತೆರವುಗೊಳಿಸಲು ಸೂಚಿಸಿರುವ ಬಗ್ಗೆ ಕಂದಾಯ ಇಲಾಖೆಯ ಅಭಿಪ್ರಾಯವೇನು ?

## ರಾಜ್ಯದಲ್ಲಿ ಜಮೀನು ಹದ್ದು ಬಸ್ತು ಸರ್ವೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೯೧ (೧೦೪೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸಾರ್ವಜನಿಕರು ತಮ್ಮ ಜಮೀನು ಹದ್ದು ಬಸ್ತು ಸರ್ವೆಗಾಗಿ ಅರ್ಜಿ ಸಲ್ಲಿಸಬೇಕಾದಲ್ಲಿ ಒದಗಿಸಬೇಕಾದ ದಾಖಲಾತಿಗಳು ಯಾವುವು ಮತ್ತು ವಿಧಾನ ಯಾವುದು ; ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಮೊತ್ತವೆಷ್ಟು ; ಈ ಮೊತ್ತವನ್ನು ಹೇಗೆ ಭರಿಸಬೇಕು ;

(ಆ) ಸರ್ವೆಗಾಗಿ ನಿಗದಿಪಡಿಸಿರುವ ಭೂಮಾಪಕರ ಸರ್ವೆ ದಿನದ ಜವಾಬ್ದಾರಿ ಮತ್ತು ಕರ್ತವ್ಯವೇನು ; ಅರ್ಜಿದಾರರಿಗೆ ನೀಡಬೇಕಾದ ದಾಖಲೆಗಳಾವುವು ;

(ಇ) ಹದ್ದುಬಸ್ತು ಸರ್ವೆಗಾಗಿ ಸಂಬಂಧಿಸಿದ ಜಾಗದ ಚತುರ್ದಿಕ್ಕಿಗಿರುವ ಜಾಗದ ಮಾಲೀಕರಿಗೆ ನೋಟಿಸ್ ನೀಡುವ ಜವಾಬ್ದಾರಿ ಯಾರದು ; ಇದರಲ್ಲಿ ಉಂಟಾಗುವ ಲೋಪ ದೋಷಗಳಿಗೆ ಹೊಣೆ ಯಾರು ;

(ಈ) ಮಾಹಿತಿಯ ಕೊರತೆಯಿಂದ ಹಾಗೂ ನೋಟಿಸ್ ನೀಡುವಲ್ಲಿ ಆದ ಪ್ರಕ್ರಿಯ ದೋಷಕ್ಕೆ ಸರ್ವೆ ಕಾರ್ಯ ಮೊಟಕುಗೊಳಿಸಿ ಅರ್ಜಿದಾರರಿಂದ ಸಹಿ ಪಡೆದು ಸರ್ವೆ ಅರ್ಜಿಯನ್ನು ವಿಲೇ ಮಾಡಿದಾಗ ಉಂಟಾಗುವ ನಷ್ಟಕ್ಕೆ ಯಾರು ಜವಾಬ್ದಾರರು ; ಅರ್ಜಿದಾರರ ಹಿತಾಸಕ್ತಿಯನ್ನು ಹೇಗೆ ಕಾಪಾಡಲಾಗುವುದು ; ಇಂತಹ ಪ್ರಕರಣಗಳು ಮರುಕಳಿಸದಂತೆ ಇಲಾಖೆ ಏನು ಕ್ರಮವಹಿಸಿದೆ ?

## ಕರ್ನಾಟಕ ರಾಜ್ಯದಲ್ಲಿ ಜಿಲ್ಲಾ ಮಟ್ಟದ ಸಮಿತಿಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೯೨ (೧೦೪೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಜಿಲ್ಲಾಮಟ್ಟದಲ್ಲಿ ಎಷ್ಟು ಸಮಿತಿಗಳಿವೆ ಮತ್ತು ಆ ಸಮಿತಿಗಳಿಗೆ ಅಧ್ಯಕ್ಷರುಗಳು ಮತ್ತು ಸದಸ್ಯರುಗಳು ಯಾರು ;

(ಆ) ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವ ಒಟ್ಟು ಎಷ್ಟು ಸಮಿತಿಗಳಿವೆ ; ಹಾಗೂ ಇತರ ಜಿಲ್ಲಾ ಮಟ್ಟದ ಅಧಿಕಾರಿಗಳು ಅಧ್ಯಕ್ಷರಾಗಿರುವ ಎಷ್ಟು ಸಮಿತಿಗಳಿವೆ ; ಈ ಸಮಿತಿಗಳು ಎಷ್ಟು ದಿನಗಳಿಗೊಮ್ಮೆ ಸಭೆ ನಡೆಸುತ್ತವೆ ;

(ಇ) ಜಿಲ್ಲಾಧಿಕಾರಿಗಳ ಕೆಲಸದ ಒತ್ತಡದಲ್ಲಿ ಎಷ್ಟು ಸಮಿತಿಗಳ ಸಭೆ ಬಾಕಿಯಿದೆ ; (ವಿವರ ನೀಡುವುದು) ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಗಳ ಸಂಖ್ಯೆಯನ್ನು ಕಡಿಮೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಪ್ರಸ್ತಾವನೆ ಇದ್ದಲ್ಲಿ, ಯಾವ ಯಾವ ಸಮಿತಿಗಳನ್ನು ಜಿಲ್ಲಾಧಿಕಾರಿಯ ಬದಲಾಗಿ ಇತರ ಸಂಬಂಧಪಟ್ಟ ಅಧಿಕಾರಿಗಳ ನೇತೃತ್ವದಲ್ಲಿ ನಡೆಸಲು ಸರ್ಕಾರ ಏನು ಕ್ರಮಕೈಗೊಂಡಿದೆ ;

(ಈ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಜಿಲ್ಲಾಮಟ್ಟದಲ್ಲಿ ಎಷ್ಟು ಸಮಿತಿಗಳಿವೆ ಮತ್ತು ಆ ಸಮಿತಿಗಳಿಗೆ ಅಧ್ಯಕ್ಷರುಗಳು ಮತ್ತು ಸದಸ್ಯರುಗಳು ಯಾರು ; ಯಾವ್ಯಾವ ಸಮಿತಿಗಳು ನಿಯಮಿತವಾಗಿ ಸಭೆಗಳನ್ನು ನಡೆಸುತ್ತಿವೆ ? (೩ ವರ್ಷಗಳ ವಿವರ ನೀಡುವುದು)

## ಡೈರಿ ಅಭಿವೃದ್ಧಿಗೆ ರೈತರಿಗೆ ಸೌಲಭ್ಯಗಳ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೯೩ (೯೮೬) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಡೈರಿ ಉತ್ಪನ್ನಗಳನ್ನು ನಡೆಸಲು ಮತ್ತು ಅಭಿವೃದ್ಧಿಪಡಿಸಲು ಸರ್ಕಾರವು ರೈತರಿಗೆ ನೀಡುತ್ತಿರುವ ಸೌಲಭ್ಯಗಳಾವುವು ;

(ಆ) ಕಳೆದ ಐದು ವರ್ಷಗಳಲ್ಲಿ ಸೌಲಭ್ಯ ಪಡೆದ ರೈತರ ಸಂಖ್ಯೆ ಮತ್ತು ಅವರಿಗೆ ಬಿಡುಗಡೆ ಮಾಡಲಾದ ಸಹಾಯಧನವೆಷ್ಟು ;

(ಇ) ಈ ಯೋಜನೆಯಡಿಯಲ್ಲಿ ಮಂಜೂರಾದ ಸಾಲಗಳ ಮೇಲಿನ ಬಡ್ಡಿಯುನ್ನು ರೈತರಿಂದ ವಿಧಿಸಲಾಗುತ್ತಿದೆಯೇ ; (ವಿವರ ನೀಡುವುದು)

(ಈ) ಹೆಚ್ಚಿನ ಪ್ರಮಾಣದಲ್ಲಿ ಹಾಲು ಉತ್ಪಾದಿಸುವ ಗ್ರಾಮೀಣ ಪ್ರದೇಶಗಳಲ್ಲಿ ಹಾಲು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಗಿದೆಯೇ ?

## ರಾಜ್ಯದಲ್ಲಿ ಪ್ರಧಾನ ಮಂತ್ರಿ ಇ–ಡ್ರೈವ್ ಯೋಜನೆ ಅಡಿ ಈ ಬಸ್‌ಗಳ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೯೪ (೯೮೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಇ–ಡ್ರೈವ್ ಯೋಜನೆಯಡಿ ರಾಜ್ಯಕ್ಕೆ ಇದುವರೆಗೆ ಎಷ್ಟು ವಿದ್ಯುತ್ ಚಾಲಿತ ಬಸ್ಸುಗಳು ಮಂಜೂರಾಗಿವೆ ;

(ಆ) ಈ ಬಸ್ಸುಗಳನ್ನು ರಾಜ್ಯದ ಯಾವ ಯಾವ ನಗರ ಪ್ರದೇಶಗಳಲ್ಲಿ ಕಾರ್ಯಾಚರಣೆಗೊಳಿಸಲಾಗಿದೆ ;

(ಇ) ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವೆ ವಿದ್ಯುತ್ ಚಾಲಿತ ಬಸ್ಸುಗಳ ನಿರ್ವಹಣೆಗೆ ಸಂಬಂಧಿಸಿದಂತೆ ಆಗಿರುವ ಒಪ್ಪಂದಗಳೇನು ?

## ಸ್ಥಳೀಯ ಸಂಸ್ಥೆಗಳ ಆನ್‌ಲೈನ್ ಸೇವೆಗೆ ಸರ್ವರ್ ತೊಡಕು ಬಗ್ಗೆ

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೯೫ (೯೮೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸ್ಥಳೀಯ ಸಂಸ್ಥೆಗಳಲ್ಲಿ ಕಾಗದ ರಹಿತ ಕೆಲಸಗಳಿಗೆ ಉತ್ತೇಜನ ನೀಡುವ ಸಲುವಾಗಿ ಆನ್‌ಲೈನ್ ಮೂಲಕವೇ ಎಲ್ಲಾ ಅರ್ಜಿಗಳನ್ನು ಸಲ್ಲಿಸುವ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆಯೇ ;

(ಆ) ಇದರಿಂದ ಸಾರ್ವಜನಿಕರಿಗೆ ಅನುಕೂಲವಾಗುವ ಜೊತೆಗೆ ಅಕ್ರಮಕ್ಕೆ ಕಡಿವಾಣ ಹಾಕುವ ಉದ್ದೇಶವನ್ನು ಸರ್ಕಾರ ಹೊಂದಿದೆಯೇ ;

(ಇ) ಕಂದಾಯ ಇಲಾಖೆಯ ಸರ್ವರ್‌ಗಳು ಪದೇ ಪದೇ ಕಾರ್ಯನಿರ್ವಹಿಸದ ಕಾರಣ ಉದ್ದೇಶಿತ ಆನ್‌ಲೈನ್ ವ್ಯವಸ್ಥೆಗೆ ಧಕ್ಕೆಯಾಗುವುದನ್ನು ನಿವಾರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದೇ ?

# ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ವಸ್ತ್ರ ಸಂಹಿತೆ ಜಾರಿ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೯೬ (೯೮೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಮುಜರಾಯಿ ಇಲಾಖೆ ವ್ಯಾಪ್ತಿಯ ಯಾವ ಯಾವ ದೇವಸ್ಥಾನಗಳಲ್ಲಿ ಧಾರ್ಮಿಕ ಕ್ಷೇತ್ರದ ಘನತೆ ಗಾಂಭೀರ್ಯ ಮತ್ತು ಪಾವಿತ್ರ್ಯಕ್ಕೆ ಚ್ಯುತಿಯಾಗದಿರಲೆಂದು ವಸ್ತ್ರ ಸಂಹಿತೆಯನ್ನು ಜಾರಿಗೊಳಿಸಲಾಗಿದೆ ; (ವಿವರಗಳನ್ನು ನೀಡುವುದು)

(ಆ) ಮೈಸೂರಿನ ಚಾಮುಂಡಿ ಬೆಟ್ಟದಲ್ಲಿರುವ ಚಾಮುಂಡೇಶ್ವರಿ ದೇವಾಲಯದಲ್ಲಿ ಈವರೆಗೂ ವಸ್ತ್ರಸಂಹಿತೆಯನ್ನು ಜಾರಿಗೊಳಿಸದಿರಲು ಕಾರಣಗಳೇನು ;

(ಇ) ಈ ದೇವಸ್ಥಾನದಲ್ಲಿ ವಸ್ತ್ರ ಸಂಹಿತೆಯನ್ನು ಜಾರಿಗೊಳಿಸಬೇಕೆಂಬ ಬಗ್ಗೆ ಭಕ್ತರಿಂದ ಬೇಡಿಕೆ ಇದ್ದರೂ ಮೈಸೂರು ಜಿಲ್ಲೆ ಪ್ರವಾಸೋದ್ಯಮ ಜಿಲ್ಲೆ ಎಂಬ ನೆಪವೊಡ್ಡಿ ವಸ್ತ್ರ ಸಂಹಿತೆಯನ್ನು ಜಾರಿಗೊಳಿಸಲು ಮೀನಾ ಮೇಷ ಎಣಿಸುತ್ತಿರುವುದು ಸರಿಯಾದ ಕ್ರಮವೇ ;

(ಈ) ಧಾರ್ಮಿಕ ಕ್ಷೇತ್ರದ ಘನತೆ ಗಾಂಭೀರ್ಯವನ್ನು ಕಾಪಾಡುವ ಸಲುವಾಗಿ ಕೂಡಲೇ ವಸ್ತ್ರ ಸಂಹಿತೆಯನ್ನು ಜಾರಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

# ಮುಜರಾಯಿ ಇಲಾಖೆಯಿಂದ ದೇವಸ್ಥಾನಗಳ ಅಭಿವೃದ್ಧಿಗೆ ನೀಡಿದ ಅನುದಾನದ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೯೭ (೧೦೬೬) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳಲ್ಲಿ ರಾಜ್ಯದಲ್ಲಿ ಮುಜರಾಯಿ ಇಲಾಖೆಯಿಂದ ದೇವಸ್ಥಾನಗಳ ಅಭಿವೃದ್ಧಿಗೆ ನೀಡಿದ ಅನುದಾನ ಎಷ್ಟು ; (ವಿವರ ಒದಗಿಸುವುದು)

(ಆ) ಸದರಿ ಇಲಾಖೆಯಿಂದ ದೇವಸ್ಥಾನಗಳಿಗೆ ಹಾಗೂ ಮಠಗಳಿಗೆ ಪ್ರತಿವರ್ಷ ಎಷ್ಟು ಅನುದಾನ ನೀಡಲಾಗಿದೆ ; (ದೇವಸ್ಥಾನ ಮತ್ತು ಮಠಗಳ ಸಂಪೂರ್ಣ ವಿವರ ನೀಡುವುದು)

(ಇ) ಕಳೆದ ೨ ವರ್ಷಗಳಿಂದ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳಿಂದ ಸಂಗ್ರಹವಾದ ಹಣ ಎಷ್ಟು; ಸಂಗ್ರಹವಾದ ಹಣವನ್ನು ಯಾವ ಯಾವ ಉದ್ದೇಶಕ್ಕೆ ಬಳಸಿಕೊಳ್ಳಲಾಗಿದೆ ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಅಲ್ಪಸಂಖ್ಯಾತರ ಇಲಾಖೆಯಿಂದ ನಿರ್ಮಾಣಗೊಳುತ್ತಿರುವ ವಸತಿ ಶಾಲೆಗಳ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೯೮ (೧೦೬೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಲ್ಪಸಂಖ್ಯಾತರ ಇಲಾಖೆ ಮುಖಾಂತರ ನಿರ್ಮಾಣಗೊಳ್ಳುತ್ತಿರುವ ನಾಲ್ಕು ವಸತಿ ಶಾಲೆ ಮತ್ತು ಕಾಲೇಜು ಕಟ್ಟಡಗಳ ಅವಶ್ಯಕತೆ ಇದೆಯೇ ; ಈ ಕುರಿತು ಸರ್ಕಾರದ ನಿಲುವೇನು; ಸದರಿ ವಸತಿ ಶಾಲೆಗಳಲ್ಲಿ ಯಾವ ಯಾವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳು ಎಷ್ಟು ದಾಖಲಾಗಿದ್ದಾರೆ ; (ವಿವರ ನೀಡುವುದು)

(ಆ) ಅಲ್ಪಸಂಖ್ಯಾತ ವಸತಿ ಶಾಲೆಗಳ ಒಟ್ಟು ಎಷ್ಟು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ; (ಸಂಪೂರ್ಣ ವಿವರ ನೀಡುವುದು)

(ಇ) ಅಲ್ಪಸಂಖ್ಯಾತ ವಸತಿ ಶಾಲೆಗಳಲ್ಲಿ ಯಾವ ಯಾವ ಸೌಲಭ್ಯಗಳನ್ನು ನೀಡಲಾಗುತ್ತಿದೆ ; (ವಿವರ ಒದಗಿಸುವುದು)

(ಈ) ಈ ವಸತಿ ಶಾಲೆಗಳಲ್ಲಿ ಇತರ ಧರ್ಮ ಅಥವಾ ಜಾತಿಯ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶ ಇದೆಯೇ ; ಇದ್ದರೆ, ಅಂತಹ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ? (ಸಂಪೂರ್ಣ ವಿವರ ಒದಗಿಸುವುದು)

## ಮಳೆಯಿಂದ ಹಾನಿಯಾಗಿರುವ ರಸ್ತೆಗಳ ದುರಸ್ತಿ ಮತ್ತು ಹೊಸ ಕಾಮಗಾರಿಗಳ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೮೯ (೧೮೯೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಸಾಮಾನ್ಯ ಮಿಲಿಮೀಟರ್‌ಗಿಂತ ಹೆಚ್ಚಿನ ಮಳೆಯಾಗಿದ್ದು ಇದರಿಂದಾಗಿ ರಾಜ್ಯದಲ್ಲಿ ಅದರಲ್ಲೂ ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚು ಮಳೆಯಿಂದಾಗಿ ಹಾನಿಗೊಳಗಾದ ರಸ್ತೆಗಳ ಮತ್ತು ಸೇತುವೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ರಸ್ತೆಗಳನ್ನು ಮತ್ತು ಸೇತುವೆಗಳನ್ನು ದುರಸ್ತಿ ಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಗುತ್ತಿಗೆದಾರರನ್ನು ಆಯ್ಕೆ ಮಾಡಲಾಗಿದೆಯೇ ; ಒಪ್ಪಂದ ಕರಾರುಗಳನ್ನು ಮಾಡಿಕೊಳ್ಳಲಾಗಿದೆಯೇ ; (ಕಾಮಗಾರಿವಾರು ಮತ್ತು ಗುತ್ತಿಗೆ ಮೊತ್ತದ ವಿವರಗಳನ್ನು ನೀಡುವುದು)

(ಈ) ಪ್ರಸ್ತುತ ವರ್ಷದಲ್ಲಿ ಎಷ್ಟು ಕಾಮಗಾರಿಗಳನ್ನು ಸರ್ಕಾರದ ವತಿಯಿಂದ ಕೈಗೆತ್ತಿಕೊಳ್ಳಲಾಗಿದೆ ಮತ್ತು ಗುತ್ತಿಗೆದಾರರನ್ನು ಆಯ್ಕೆ ಮಾಡಿ ಕಾಮಗಾರಿಗಳ ಅವಧಿಗಳನ್ನು ನಿಗದಿಪಡಿಸಿ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ ?

## ಗೊಲ್ಲರಹಟ್ಟಿ, ತಾಂಡಗಳು ಮತ್ತು ವಡ್ಡರಹಟ್ಟಿ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸುವ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೯೦೦ (೧೯೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗೊಲ್ಲರಹಟ್ಟಿಗಳು, ತಾಂಡಗಳು ಮತ್ತು ವಡ್ಡರಹಟ್ಟಿ ಗ್ರಾಮಗಳಲ್ಲಿ ವಾಸಿಸುವ ಕಾಡುಗೊಲ್ಲರು/ಗೊಲ್ಲರು/ಲಂಬಾಣಿಯರು ಸಾಮಾಜಿಕವಾಗಿ–ಶೈಕ್ಷಣಿಕವಾಗಿ–ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅತೀ ಹಿಂದುಳಿದಿದ್ದು, ಈ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸದೇ ಇರುವುದರಿಂದ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಗೊಲ್ಲರಹಟ್ಟಿಗಳು, ತಾಂಡಗಳು ಮತ್ತು ವಡ್ಡರಹಟ್ಟಿ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಸದರಿ ಗ್ರಾಮಗಳು ಗ್ರಾಮಠಾಣ ವ್ಯಾಪ್ತಿಯಲ್ಲಿದ್ದರೂ ಸಹ ಪ್ರತ್ಯೇಕವಾಗಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಗೊಲ್ಲರಹಟ್ಟಿಗಳು, ತಾಂಡಗಳು ಮತ್ತು ವಡ್ಡರಹಟ್ಟಿ ಗ್ರಾಮಗಳು ಗ್ರಾಮಠಾಣ ವ್ಯಾಪ್ತಿಯಲ್ಲಿದ್ದರೂ ಸಹ ಪ್ರತ್ಯೇಕವಾಗಿ ಇರುವುದರಿಂದ ಸುತ್ತೋಲೆ ಸಂಖ್ಯೆ: ಕಂಇ:೨೦:ಸಿಸಿಆರ್‌ವಿ:೨೦೧೯, ದಿನಾಂಕ:೧೫.೧೦.೨೦೧೯ರ ನಿಯಮಾವಳಿಗಳನ್ನು ಪಾಲಿಸಿ ಕಂದಾಯ ಗ್ರಾಮಗಳನ್ನಾಗಿ ಘೋಷಿಸುವುದು ಕಷ್ಟ ಸಾಧ್ಯವಾಗುತ್ತಿರುವುದರಿಂದ ಸದರಿ ನಿಯಮಾವಳಿಗಳಲ್ಲಿ ಅಲ್ಪ ಮಟ್ಟದ ಸಡಿಲಿಕೆ ನೀಡಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ?

## ಮುಖ್ಯಮಂತ್ರಿಗಳ ಒಂದು ಲಕ್ಷ ಮನೆ ಯೋಜನೆ ಮತ್ತು ಖಾಲಿ ನಿವೇಶನ / ಮನೆಗಳ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೯೦೧ (೧೯೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಮುಖ್ಯಮಂತ್ರಿಗಳ ಒಂದು ಲಕ್ಷ ಮನೆ ಯೋಜನೆಯಡಿ ಇಲ್ಲಿಯವರೆಗೆ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ ; ಈ ಯೋಜನೆಗೆ ಎಷ್ಟು ಅನುದಾನ ಘೋಷಿಸಲಾಗಿತ್ತು ;

(ಆ) ಇದೇ ಯೋಜನೆ ಅಡಿ ೨೦೨೪–೨೫ನೇ ಸಾಲಿನಲ್ಲಿ ಸುಮಾರು ರೂ. ೩೭೦೦ ಕೋಟಿಗಳ ಕೊರತೆ ಉಂಟಾಗಿದ್ದು ನಿಜವೇ ; ಇದ್ದಲ್ಲಿ, ಇಲಾಖೆಯು ಈ ಕೊರತೆಯನ್ನು ನೀಗಿಸಲು ಯಾವ ಕ್ರಮಗಳನ್ನು ಕೈಗೊಂಡಿದೆ ;

(ಇ) ಕಳೆದ ಮೂರು ವರ್ಷಗಳಲ್ಲಿ ಇಲಾಖೆಯ ವತಿಯಿಂದ ನಗರ ಪ್ರದೇಶಗಳಲ್ಲಿ ಎಷ್ಟು ನಿವೇಶನ/ ಮನೆಗಳನ್ನು ನಿರ್ಮಿಸಲಾಗಿದೆ ; ಅದರಲ್ಲಿ ಎಷ್ಟು ನಿವೇಶನ/ಮನೆಗಳನ್ನು ಹಂಚಿಕೆ ಮಾಡಲಾಗಿದೆ ; ಮತ್ತು ಎಷ್ಟು ನಿವೇಶನ/ಮನೆಗಳು ಖಾಲಿ ಇವೆ ? (ಜಿಲ್ಲಾವಾರು ಮಾಹಿತಿ ನೀಡುವುದು)

## ಸಾಂಕ್ರಾಮಿಕ ರೋಗಗಳ ನಿಯಂತ್ರಣ ಮತ್ತು ತರಬೇತಿ ಕಾರ್ಯಕ್ರಮಗಳ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೯೦೨ (೧೮೯೪) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಒಂದು ವರ್ಷದಲ್ಲಿ 'ಕಾಲು ಮತ್ತು ಬಾಯಿ ರೋಗ. ರಕ್ತಸ್ರಾವ ಸೆಪ್ಟೆಸೆಮಿಯ ಮತ್ತು ಬ್ರೂಸೆಲೋಸಿಸ್, ಕಪ್ಪು ಕಾಲು ಮತ್ತು ಎಂಟರೊಟಾಕ್ಸೆಮಿಯಾ' ನಂತಹ ಸಂಕ್ರಾಮಿಕ ರೋಗಗಳ ವಿರುದ್ಧ ಹೋರಾಡಲು ರಾಜ್ಯದಲ್ಲಿ ಎಷ್ಟು ಜಾನುವಾರುಗಳಿಗೆ ಎಷ್ಟು ಕಾಲಾವಕಾಶದಲ್ಲಿ ಲಸಿಕೆ ನೀಡಲಾಗಿದೆ ಮತ್ತು ಎಷ್ಟು ಜಾನುವಾರುಗಳಿಗೆ ಲಸಿಕೆ ಬಾಕಿ ಇದೆ ; (ಶೇಕಡವಾರು ಮಾಹಿತಿ ನೀಡುವುದು)

(ಆ) ನಿಗದಿತ ಸಮಯದಲ್ಲಿ ಲಸಿಕೆ ನೀಡದೇ ಇರುವುದರಿಂದ ಈ ಸಾಂಕ್ರಾಮಿಕ ರೋಗಗಳಿಂದ ಕಳೆದ ಒಂದು ವರ್ಷದಲ್ಲಿ ಸಾವನ್ನಪ್ಪಿದ ಜಾನುವಾರುಗಳ ಸಂಖ್ಯೆ ಎಷ್ಟು ;

(ಇ) ರಾಜ್ಯದಲ್ಲಿ ಜಾನುವಾರು ಸಾಕಾಣಿಕೆದಾರರಿಗೆ ಆಧುನಿಕ ಮತ್ತು ವೈಜ್ಞಾನಿಕ ಪಶುಸಂಗೋಪನಾ ಪದ್ಧತಿಗಳು ಮತ್ತು ಇದರ ಬಗ್ಗೆ ಅರಿವು ಮೂಡಿಸುವ ಕುರಿತು ಕೈಗೊಂಡ ಕಾರ್ಯಕ್ರಮಗಳು ಯಾವುವು ;

(ಈ) ಈ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಸರ್ಕಾರದ ವತಿಯಿಂದ ಆಯೋಜಿಸಲಾಗುವುದೇ ಅಥವಾ ಖಾಸಗಿ ಸಂಸ್ಥೆಗಳಿಂದ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆಯೇ ; ಖಾಸಗಿ ಸಂಸ್ಥೆಗಳಿಂದ ತರಬೇತಿ ನೀಡಿದ್ದಲ್ಲಿ, ಇದಕ್ಕೆ ತಗಲುವ ವೆಚ್ಚವೆಷ್ಟು ? (ಮಾಹಿತಿ ನೀಡುವುದು)

## ಸಾಗುವಳಿ ಚೀಟಿ ನೀಡುವ ಬಗ್ಗೆ

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) :–**

೯೦೩ (೯೩೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೊಸಕೋಟೆ ತಾಲ್ಲೂಕಿನಲ್ಲಿ ಕಳೆದ ೨ ವರ್ಷಗಳಲ್ಲಿ ಸಾಗುವಳಿ ಚೀಟಿ ನೀಡಲು ಬಗರ್ ಹುಕುಂ ಸಮಿತಿ ಸಭೆಗಳನ್ನು ನಡೆಸಲಾಗಿದೆಯೇ ; (ಮಾಹಿತಿ ನೀಡುವುದು)

(ಆ) ಹಾಗಿದ್ದಲ್ಲಿ, ಸಾಗುವಳಿ ಚೀಟಿ ನೀಡಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ? (ಗ್ರಾಮವಾರು ಸರ್ವೆ ನಂಬರ್‌ವಾರು, ವಿಸ್ತೀರ್ಣವಾರು ಮಾಹಿತಿ ನೀಡುವುದು)

## ಹೊಸಕೋಟೆ ತಾಲ್ಲೂಕಿಗೆ ಮುಜರಾಯಿ ದೇವಸ್ಥಾನಗಳ ಅನುದಾನ ಕುರಿತು

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) :–**

೯೦೪ (೯೩೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳಿಂದ ಹೊಸಕೋಟೆ ವಿಧಾನಸಭಾ ಕ್ಷೇತ್ರಕ್ಕೆ ಮುಜರಾಯಿ ಇಲಾಖೆಯಿಂದ ದೇವಾಲಯಗಳ ಅಭಿವೃದ್ಧಿಗಾಗಿ ಮಂಜೂರಾಗಿರುವ ಒಟ್ಟು ಅನುದಾನವೆಷ್ಟು; (ಆದೇಶವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಮುಜರಾಯಿ ದೇವಾಲಯಗಳ ಅಭಿವೃದ್ಧಿಗಾಗಿ ಅನುದಾನ ಕೋರಿ ಸರ್ಕಾರಕ್ಕೆ ಸಲ್ಲಿಸಲಾಗಿರುವ ಪ್ರಸ್ತಾವನೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಲು ಕೈಗೊಳ್ಳಲಾಗಿರುವ ಕ್ರಮಗಳೇನು ;

(ಇ) ಕಳೆದ ೨ ವರ್ಷಗಳಿಂದ ಆರಾಧನಾ ಯೋಜನೆಯಡಿ ಹೊಸಕೋಟೆ ಕ್ಷೇತ್ರಕ್ಕೆ ಮಂಜೂರಾಗಿರುವ ಅನುದಾನವೆಷ್ಟು? (ಆದೇಶವಾರು ಸಂಪೂರ್ಣ ಮಾಹಿತಿ ನೀಡುವುದು)

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಹಾನಿ ಸಂತ್ರಸ್ತರಿಗೆ ಪರಿಹಾರ ನೀಡುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೯೦೫ (೯೫೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ ವರ್ಷ ಸುರಿದ ಧಾರಾಕಾರ ಮಳೆಯಿಂದಾಗಿ ಸಾಕಷ್ಟು ದೊಡ್ಡ ಮಟ್ಟದ ಹಾನಿ ಸಂಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಜಿಲ್ಲೆಯಲ್ಲಿ ಪ್ರಸ್ತುತ ವರ್ಷ ಮಳೆ ಹಾನಿಯಿಂದಾಗಿ ಆಗಿರುವ ನಷ್ಟದ ಅಂದಾಜು ಮೊತ್ತವೆಷ್ಟು; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಇ) ಸರ್ಕಾರ ಸದರಿ ಮಳೆ ಹಾನಿ ಪರಿಹಾರವಾಗಿ ಇದುವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ ; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಈ) ಬಿಡುಗಡೆಗೊಂಡ ಪರಿಹಾರದ ಹಣದಲ್ಲಿ, ಅತೀವ ಸಂಕಷ್ಟದಲ್ಲಿರುವ ಜಿಲ್ಲೆಯ ಸಂತ್ರಸ್ತ ಜನರಿಗೆ ಸರ್ಕಾರ ಇದುವರೆಗೆ ಕಲ್ಪಿಸಿರುವ ಪರಿಹಾರ ಕ್ರಮಗಳೇನು ; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಉ) ಯಾವ ಕಾಲಮಿತಿಯೊಳಗೆ ಬಾಕಿ ಇರುವ ಪರಿಹಾರದ ಹಣವನ್ನು ಬಿಡುಗಡೆಗೊಳಿಸಲಾಗುವುದು ?

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಪರಿರ್ತನೆಗೆ ಸಮಸ್ಯೆ ಆಗಿರುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೯೦೬ (೯೫೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಪರಿವರ್ತನೆ ಮಾಡುವಾಗ ಸರ್ಕಾರಿ ರಸ್ತೆ ಸಂಪರ್ಕ ಇಲ್ಲದಿದ್ದ ಪಕ್ಷದಲ್ಲಿ ಜಮೀನು ಭೂ ಪರಿವರ್ತನೆ ಮಾಡಬಾರದು ಮತ್ತು ಭೂ ಪರಿವರ್ತನೆಗೊಳಿಸುವ ಅಲಿನೇಷನ್ ಪೂರ್ವ ನಕ್ಷೆಯಲ್ಲಿ ಸರ್ಕಾರಿ ಸಂಪರ್ಕ ರಸ್ತೆಯನ್ನು ತೋರಿಸಬೇಕು ಮತ್ತು ಯಾವುದೇ ಖಾಸಗಿ ಸಂಪರ್ಕದ ಬಗ್ಗೆ ತೋರಿಸಬಾರದು ಎಂಬ ಆದೇಶದಿಂದಾಗಿ ಸಾಕಷ್ಟು ಅರ್ಜಿದಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಜಮೀನಿನ ಒಂದು ಭಾಗದಲ್ಲಿ ಭೂ ಪರಿವರ್ತನೆಗೊಳಿಸುವ ಸಂದರ್ಭದಲ್ಲಿ ಸರ್ಕಾರಿ ರಸ್ತೆಯ ವ್ಯವಸ್ಥೆ ಇಲ್ಲದ ಜಮೀನಾಗಿದ್ದಲ್ಲಿ, ಅರ್ಜಿದಾರರಿಗೆ ಅವರ ಜಮೀನು ಪರಿವರ್ತಿಸುವ ಅವಕಾಶ ಇಲ್ಲದಂತಾಗುತ್ತದೆ ಜಮೀನಿಗೆ ಸಂಪರ್ಕ ರಸ್ತೆ ಕಾಣಿಸದ ಪಕ್ಷದಲ್ಲಿ ಅವರು ಭೂ ಪರಿವರ್ತನೆಯಿಂದ ವಂಚಿತರಾಗುತ್ತಾರೆ. ಈ ಸಮಸ್ಯೆ ಅಧಿಕವಾಗಿರುವುದರಿಂದ ಇದನ್ನು ಪರಿಹರಿಸಲು ಸರ್ಕಾರ ಏನು ಕ್ರಮವಹಿಸಿದೆ ;

(ಇ) ದಕ್ಷಿಣ ಕನ್ನಡ ಜಿಲ್ಲೆಯ ಭೌಗೋಳಿಕ ಅಧ್ಯಯನ ಮತ್ತು ಜನಜೀವನ ವ್ಯವಸ್ಥೆಯನ್ನು ಪರಿಗಣಿಸಿ ಭೂ ಪರಿವರ್ತನೆ ಮಾಡುವಾಗ ಸರ್ಕಾರಿ ರಸ್ತೆ ಸಂಪರ್ಕ ಇಲ್ಲದಿದ್ದ ಪಕ್ಷದಲ್ಲಿ ಜಮೀನು ಭೂ ಪರಿವರ್ತನೆ ಮಾಡಬಾರದು ಮತ್ತು ಭೂ ಪರಿವರ್ತನೆಗೊಳಿಸುವ ಅಲಿನೇಷನ್ ಪೂರ್ವ ನಕ್ಷೆಯಲ್ಲಿ ಸರ್ಕಾರಿ ಸಂಪರ್ಕ ರಸ್ತೆಯನ್ನು ತೋರಿಸಬೇಕು ಮತ್ತು ಯಾವುದೇ ಖಾಸಗಿ ಸಂಪರ್ಕ ರಸ್ತೆಯು ಬಗ್ಗೆ ತೋರಿಸಬಾರದು ಎಂಬ ಆದೇಶವನ್ನು ಮರು ಪರಿಶೀಲಿಸಲು ಸರ್ಕಾರ ಈ ಕೂಡಲೇ ಕ್ರಮವಹಿಸುವುದೇ ?

## "ಸಿ" ಗ್ರೇಡ್ ದೇವಾಲಯಗಳನ್ನು ಕಡೆಗಣಿಸಿರುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೯೦೭ (೯೫೩) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹಿಂದೂ ಧಾರ್ಮಿಕ ಹಾಗೂ ಧರ್ಮದಾಯ ದತ್ತಿ ಇಲಾಖೆ ವ್ಯಾಪ್ತಿಯಲ್ಲಿನ 'ಸಿ' ಗ್ರೇಡ್ ದೇಗುಲಗಳನ್ನು ಸಂಪೂರ್ಣ ಕಡೆಗಣಿಸಿರುವುದರಿಂದ ಬಹುತೇಕ ದೇವಾಲಯಗಳು ಶಿಥಿಲಾವಸ್ಥೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, 'ಸಿ' ಗ್ರೇಡ್ ದೇಗುಲಗಳು ಆದಾಯ ಇಲ್ಲದಿರುವುದರಿಂದ ಶಿಥಿಲಗೊಂಡರೆ ಕಳೆಗುಂದಿದರೆ ಸರಿಪಡಿಸಲು, ಬಣ್ಣ ಬಳಿಸಲೂ ಹಣ ಇಲ್ಲದ ಸ್ಥಿತಿ ಎದುರಾಗಿದ್ದು, ಇದರಿಂದಾಗಿ ಬಹುತೇಕ ಗ್ರಾಮೀಣ ದೇವಾಲಯಗಳು ಅಸ್ತಿತ್ವ ಕಳೆದುಕೊಳ್ಳುವ ಸ್ಥಿತಿ ತಲುಪಿದ್ದರೂ ಸರ್ಕಾರ ಅವುಗಳ ಅಭಿವೃದ್ಧಿಗೆ ಇದುವರೆಗೆ ಯಾವುದೇ ಕ್ರಮ ವಹಿಸದಿರಲು ಕಾರಣಗಳೇನು ;

(ಇ) ಯಾವ ಕಾಲಮಿತಿಯೊಳಗೆ, ರಾಜ್ಯದಲ್ಲಿರುವ ಎಲ್ಲಾ 'ಸಿ' ಗ್ರೇಡ್ ದೇಗುಲಗಳ ಜೀರ್ಣೋದ್ಧಾರಕ್ಕೆ ಮತ್ತು ಸದರಿ ದೇವಾಲಯಗಳಲ್ಲಿ ಅಗತ್ಯ ಮೂಲ ಸೌಕರ್ಯ ಕಲ್ಪಿಸಲು ಬೇಕಾಗಿರುವ ಅನುದಾನವನ್ನು ಒದಗಿಸಲು ಸರ್ಕಾರ ಕ್ರಮ ವಹಿಸುವುದೇ ?

## ಸಾಲದ ಮೇಲಿನ ಮುದ್ರಾಂಕ ಶುಲ್ಕ ಏರಿಕೆ ಆಗಿರುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೯೦೮ (೯೫೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸಹಕಾರ ಸಂಘಗಳು, ಬ್ಯಾಂಕುಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾರ್ವಜನಿಕರು ಪಡೆಯುವ ಸಾಲದ ಮುದ್ರಾಂಕ ಶುಲ್ಕ (ಸ್ಟ್ಯಾಂಪ್ ಡ್ಯೂಟಿ) ವನ್ನು ಭಾರಿ ಪ್ರಮಾಣದಲ್ಲಿ ಏರಿಕೆ ಮಾಡಿರುವುದರಿಂದ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದ ಜನರಿಗೆ ಆರ್ಥಿಕವಾಗಿ ಸಾಕಷ್ಟು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸಾರ್ವಜನಿಕರು ತಮ್ಮ ಸಂಕಷ್ಟಕ್ಕೆಂದು ಪಡೆಯುವ ಸಾಲದ ಮೇಲಿನ ಮುದ್ರಾಂಕ ಶುಲ್ಕವನ್ನು ಶೇಕಡ ೧೫೦ ರಿಂದ

೪೦೦ ಪಟ್ಟು ಹೆಚ್ಚಿಸಿರುವುದು ಗ್ರಾಹಕರಿಗೆ ಅಧಿಕ ಹೊರೆಯಾಗಿ ಪರಿಣಮಿಸಿರುವುದನ್ನು ಮನಗಂಡು ಅದನ್ನು ಪರಿಷ್ಕರಿಸಲು ಸರ್ಕಾರ ಇದುವರೆಗೆ ಯಾವುದೇ ಕ್ರಮ ವಹಿಸದಿರಲು ಕಾರಣಗಳೇನು ;

(ಇ) ಸಾಲ ಮಾಡಿ ಕನಸಿನ ಸೂರು ಕಟ್ಟಿಕೊಳ್ಳುವ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದವರು ಮನೆಯಲ್ಲಿನ ಸಂಕಷ್ಟಕ್ಕೆ ಒಡವೆಗಳನ್ನು ಅಡಮಾನ ಮಾಡಿ ಸಾಲ ಪಡೆಯುವ ರೈತರು ಹಾಗೂ ಕೂಲಿ ಕಾರ್ಮಿಕರ ಪಾಲಿಗೆ ಭರಿಸಲು ಸಾಧ್ಯವಿಲ್ಲದಂತಹ ಹೊರೆಯಾಗಿರುವ ಈ ಮುದ್ರಾಂಕ ಶುಲ್ಕ ಏರಿಕೆಯನ್ನು ಯಾವ ಕಾಲಮಿತಿಯೊಳಗೆ, ಪರಿಷ್ಕರಿಸಿ ಗಣನೀಯವಾಗಿ ಕಡಿಮೆ ಮಾಡಲು ಅಗತ್ಯ ಕ್ರಮ ವಹಿಸಲಾಗುವುದು ?

## ದಕ್ಷಿಣ ಕನ್ನಡ ಜಿಲ್ಲೆಗೆ ಮಂಗಳೂರು ಎಂದು ಮರು ನಾಮಕರಣ ಮಾಡುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೯೦೯ (೯೫೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಬಂದರು ನಗರಿ, ಶಿಕ್ಷಣ ಕಾಶಿ, ಸಾಂಸ್ಕೃತಿಕ ವೈವಿಧ್ಯತೆ ನಾಡು ದಕ್ಷಿಣ ಕನ್ನಡ ಜಿಲ್ಲೆಗೆ 'ಮಂಗಳೂರು' ಎಂದು ಮರು ನಾಮಕರಣ ಮಾಡಬೇಕೆಂಬ ಬೇಡಿಕೆ ಮತ್ತು ಒತ್ತಾಯಗಳು ಸಾರ್ವಜನಿಕ ವಲಯದಿಂದ ಕೇಳಿಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಮಂಗಳೂರು ಹೆಸರಿನ ಮೂಲಕ ಬ್ರ್ಯಾಂಡ್ ಆಗಿಸಿ, ವಿಶ್ವದೆಲ್ಲೆಡೆ ಮಂಗಳೂರು ಹಿರಿಮೆಯನ್ನು ಪಸರಿಸಲು ಅನುವಾಗುವ

ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ 'ಮಂಗಳೂರು' ಎಂದು ಮರುನಾಮಕರಣ ಮಾಡುವ ಪ್ರಸ್ತಾವನೆ ಸರ್ಕಾರದಲ್ಲಿ ಪ್ರಸ್ತುತ ಯಾವ ಹಂತದಲ್ಲಿದೆ ;

(ಇ) ಯಾವ ಕಾಲಮಿತಿಯೊಳಗೆ, ದಕ್ಷಿಣ ಕನ್ನಡ ಜಿಲ್ಲೆಗೆ 'ಮಂಗಳೂರು' ಎಂದು ಮರುನಾಮಕರಣ ಮಾಡುವ ನಿಟ್ಟಿನಲ್ಲಿ ಅಗತ್ಯ ಕ್ರಮ ವಹಿಸಿ ಆದೇಶ ಹೊರಡಿಸಲಾಗುವುದು ?

## ಗೋಹತ್ಯೆ ಮತ್ತು ಗೋಹಿಂಸೆ ಪ್ರಕರಣಗಳಲ್ಲಿ ಕೈಗೊಂಡ ಕ್ರಮಗಳ ಕುರಿತು

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೧೦ (೯೩೮) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಹಲವೆಡೆ ಗೋವುಗಳ ಕೆಚ್ಚಲು ಕೊಯ್ದಿರುವುದು ಹಾಗೂ ಗೋವುಗಳ ಮೇಲೆ ಮಾರಣಾಂತಿಕ ಹಲ್ಲೆಯಂತಹ ಅಮಾನವೀಯ ಪ್ರಕರಣಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಕಳೆದ ೨ ವರ್ಷದಿಂದ ರಾಜ್ಯದಲ್ಲಿ ದಾಖಲಾಗಿರುವ ಗೋಹತ್ಯೆ ಮತ್ತು ಗೋಹಿಂಸೆ ಪ್ರಕರಣಗಳೆಷ್ಟು ; (ವರ್ಷವಾರು/ ಜಿಲ್ಲಾವಾರು ವಿವರ ನೀಡುವುದು)

(ಇ) ಈ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಎಷ್ಟು ಜನರ ವಿರುದ್ಧ ಪ್ರಕರಣ ದಾಖಲಾಗಿದೆ ; ಎಷ್ಟು ಪ್ರಕರಣಗಳಲ್ಲಿ ಅಪರಾಧಿಗಳನ್ನು ಬಂಧಿಸಲಾಗಿದೆ ; ಬಂಧಿತರ ವಿರುದ್ಧ ಯಾವ ಸೆಕ್ಷನ್ ಅಡಿ

ಪ್ರಕರಣ ದಾಖಲಾಗಿದೆ ; ಸದರಿ ಪ್ರಕರಣಗಳು ಪ್ರಸ್ತುತ ಯಾವ ಹಂತದಲ್ಲಿದೆ ; (ಪ್ರಕರಣವಾರು ವಿವರ ನೀಡುವುದು)

(ಈ) ಗೋಹತ್ಯೆ ಮತ್ತು ಗೋಹಿಂಸೆ ಪ್ರಕರಣಗಳನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ನೈಸ್ ರಸ್ತೆ ಯೋಜನೆಯನ್ನು ಸ್ಥಗಿತಗೊಳಿಸಲು ನಿರ್ಧರಿಸಿರುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೧೧ (೯೩೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು–ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರಾಜೆಕ್ಟ್ ಯೋಜನೆಗೆ ಯಾವ ಗ್ರಾಮದಲ್ಲಿ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ; ಸಂಸ್ಥೆಗೆ ಎಷ್ಟು ಸರ್ಕಾರಿ ಮತ್ತು ಖಾಸಗಿ ಭೂಮಿ ಹಸ್ತಾಂತರ ಮಾಡಲಾಗಿದೆ ; (ಸರ್ಕಾರಿ ಹಾಗೂ ಖಾಸಗಿ ಜಮೀನಿನ ಪ್ರತ್ಯೇಕ ವಿವರ ನೀಡುವುದು)

(ಆ) ಯೋಜನೆಗಾಗಿ ಕೆ.ಐ.ಎ.ಡಿ.ಬಿ ಸ್ವಾಧೀನಪಡಿಸಿಕೊಂಡಿದ್ದ ಭೂಮಿಯ ಭೂಸ್ವಾಧೀನ ಪ್ರಕ್ರಿಯೆಯನ್ನು ರಾಜ್ಯ ಹೈಕೋರ್ಟ್ ರದ್ದುಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಕುರಿತು ಸರ್ಕಾರ ಕೈಗೊಂಡ ಕ್ರಮವೇನು ;

(ಇ) ನೈಸ್ ರಸ್ತೆ ಕಾಮಗಾರಿ ಆರಂಭಗೊಂಡಿದ್ದು ಯಾವಾಗ ; ಈವರೆಗೆ ಎಷ್ಟು ಕಿ.ಮೀ ರಸ್ತೆ ನಿರ್ಮಾಣವಾಗಿದೆ ; ಗುತ್ತಿಗೆ ಕರಾರಿನ ಅನ್ವಯ ರಸ್ತೆ ಕಾಮಗಾರಿ ಆಗಿದೆಯೇ ; ಕಾಮಗಾರಿ ಯಾವಾಗ ಪೂರ್ಣಗೊಳ್ಳಬೇಕಿತ್ತು ; ಪ್ರಸ್ತುತ ಯಾವ ಹಂತದಲ್ಲಿದೆ ;

(ಈ) ಸದರಿ ಯೋಜನೆಯನ್ನು ಸ್ಥಗಿತಗೊಳಿಸಲು ಸರ್ಕಾರ ನಿರ್ಧರಿಸಿದೆಯೇ ; ಹಾಗಿದ್ದಲ್ಲಿ, ಕಾರಣಗಳೇನು ; ಯೋಜನೆ ಕುರಿತು ಈ ಹಿಂದೆ ಸದನ ಸಮಿತಿ ನೀಡಿರುವ ವರದಿಯಲ್ಲಿರುವ ಅಭಿಪ್ರಾಯವೇನು ; ಈ ಬಗ್ಗೆ ಪರಿಶೀಲನೆ ನಡೆಸಲು ಸಂಪುಟ ಉಪ ಸಮಿತಿ ರಚಿಸಲಾಗಿದೆಯೇ ; ಉಪ ಸಮಿತಿ ಸಲ್ಲಿಸಿರುವ ವರದಿಯಲ್ಲಿರುವ ಪ್ರಮುಖ ಅಂಶಗಳೇನು ?

## ಚಿಕ್ಕಮಗಳೂರು ಜಿಲ್ಲೆಗೆ ಮಂಜೂರು/ಬಿಡುಗಡೆ ಮಾಡಿರುವ ಅನುದಾನ ಕುರಿತು

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೧೨ (೯೪೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೩–೨೪, ೨೦೨೪–೨೫ ಹಾಗೂ ೨೦೨೫–೨೬ ಆರ್ಥಿಕ ವರ್ಷದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಚಿಕ್ಕಮಗಳೂರು ಜಿಲ್ಲೆಗೆ ಮಂಜೂರು ಮಾಡಿರುವ ಅನುದಾನವೆಷ್ಟು; ಈ ಪೈಕಿ ಬಿಡುಗಡೆಯಾಗಿರುವ ಮತ್ತು ಬಿಡುಗಡೆಗೆ ಬಾಕಿ ಇರುವ ಅನುದಾನವೆಷ್ಟು ; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ಒದಗಿಸುವುದು)

(ಆ) ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಮುದಾಯ ಭವನ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡು ವರ್ಷಗಳು ಕಳೆದರೂ ಇನ್ನೂ ಸಹ ಬಿಲ್ ಪಾವತಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಬಾಕಿ ಇರುವ ಅನುದಾನವನ್ನು ಯಾವ ಕಾಲಮಿತಿಯಲ್ಲಿ ಬಿಡುಗಡೆ ಮಾಡಲಾಗುವುದು ;

(ಇ) ಇನ್ನು ಪ್ರಾರಂಭಿಸದೇ ಇರುವ ಸಮುದಾಯ ಭವನ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು ?

## ಕಂದಾಯ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವ ರೈತರಿಗೆ ಅರಣ್ಯ ಇಲಾಖೆಯಿಂದ ಆಗುತ್ತಿರುವ ತೊಂದರೆಗಳ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೧೩ (೯೪೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಲವಾರು ವರ್ಷಗಳಿಂದ ಕಂದಾಯ ಭೂಮಿಯಲ್ಲಿ ಸಾಗುವಳಿ ಮಾಡಿಕೊಂಡು ಸಾಗುವಳಿ ಚೀಟಿ/ಪಹಣಿ ಪಡೆದು ಜೀವನ ನಡೆಸುತ್ತಿರುವ ರೈತರ ಕೆಲವು ಜಮೀನುಗಳಿಗೆ ಈಗ ಅರಣ್ಯ ಇಲಾಖೆಯವರು ಸದರಿ ಜಮೀನು ಅರಣ್ಯ ಇಲಾಖೆಗೆ ಸೇರಿದೆ ಎಂದು ಹೇಳುತ್ತಿರುವುದರಿಂದ ರೈತರು ಆತಂಕಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಪ್ರಕರಣಗಳು ಇವೆ; ಈ ರೀತಿ ಆಗಲು ಕಾರಣಗಳೇನು ; (ತಾಲ್ಲೂಕುವಾರು ಸರ್ವೆ ನಂಬರ್ ಸಹಿತ ವಿವರ ಒದಗಿಸುವುದು)

(ಇ) ಈ ರೀತಿ ಪ್ರಕರಣಗಳಲ್ಲಿ ಸರ್ಕಾರದ ನಿಲುವೇನು ?

## ಚಿಕ್ಕಮಗಳೂರು ನಗರದಲ್ಲಿ ಮನೆಗಳ ನಿರ್ಮಾಣ ವಿಳಂಬವಾಗಿರುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೧೪ (೯೪೨) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ನಗರದಲ್ಲಿ ವಸತಿ ರಹಿತರಿಗೆ ವಸತಿ ಸೌಲಭ್ಯ ಕಲ್ಪಿಸುವ ಸಲುವಾಗಿ ಪ್ರಧಾನ ಮಂತ್ರಿ ಆವಾಸ್ ಹೌಸಿಂಗ್ ಫಾರ್ ಆಲ್ ಯೋಜನೆಯಡಿ ಜಿ+೨ ಮಾದರಿಯಲ್ಲಿ ಮನೆಗಳ ನಿರ್ಮಾಣ ಮಾಡಲು ಪ್ರಾರಂಭಿಸಿದ್ದು ಯಾವಾಗ ; ಕರಾರು ಪ್ರಕಾರ ಕಾಮಗಾರಿ ಯಾವಾಗ ಪೂರ್ಣಗೊಳ್ಳಬೇಕಾಗಿತ್ತು ;

(ಆ) ಈ ಮನೆ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತವೆಷ್ಟು ; ಇದುವರೆಗೂ ಎಷ್ಟು ಅನುದಾನ ಬಿಡುಗಡೆ ಆಗಿದೆ ; ಎಷ್ಟು ಹಣ ವೆಚ್ಚ ಮಾಡಲಾಗಿದೆ ;

(ಇ) ಭೌತಿಕವಾಗಿ ಈವರೆಗೆ ಎಷ್ಟು ಪ್ರಗತಿ ಸಾಧಿಸಲಾಗಿದೆ ; ಈ ಮನೆ ನಿರ್ಮಾಣ ಕಾಮಗಾರಿಯು ವಿಳಂಬ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಕಾಮಗಾರಿ ವಿಳಂಬಕ್ಕೆ ಕಾರಣಗಳೇನು ;

(ಈ) ಕಾಮಗಾರಿಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ರೇಷ್ಮೆ ಕೃಷಿಗೆ ಬೆಳೆ ವಿಮೆ ಸೌಲಭ್ಯ ಕಲ್ಪಿಸುವ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೧೫ (೧೦೨೩) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನುಸಿ ಮತ್ತು ಕೀಟಗಳ ಹಾವಳಿಯಿಂದ ಹಿಪ್ಪುನೇರಳೆ ಸೊಪ್ಪಿನ ಗುಣಮಟ್ಟ ಹಾಳಾಗುತ್ತಿರುವುದರಿಂದ ಮತ್ತು ಕಳಪೆ ಹಾಗೂ ರೋಗ ಪೀಡಿತ ಮೊಟ್ಟೆಗಳ ಚಾಕಿಯಿಂದ ರೇಷ್ಮೆ ಹುಳುಗಳು ರೋಗಕ್ಕೆ ತುತ್ತಾಗಿ ರೇಷ್ಮೆ ಬೆಳೆಗಾರರು ಸಂಕಷ್ಟಕ್ಕೆ ಒಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಇಂತಹ ಸಂದರ್ಭಗಳಲ್ಲಿ ರೇಷ್ಮೆ ಬೆಳೆಗಾರರಿಗೆ ಸರ್ಕಾರ ನೀಡುತ್ತಿರುವ ಪರಿಹಾರಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಕೇಂದ್ರ ರೇಷ್ಮೆ ಮಂಡಳಿಯು ರೇಷ್ಮೆ ಕೃಷಿಗೆ ಬೆಳೆ ವಿಮೆ ಸೌಲಭ್ಯ ನೀಡುವ ಬಗ್ಗೆ ಮಾರ್ಗಸೂಚಿಗಳನ್ನು ಸಿದ್ಧಪಡಿಸಲು ರಚಿಸಿರುವ ವಿಷಯ ತಜ್ಞರ ಸಮಿತಿಯ ಅಂತಿಮ ವರದಿಯು ಸರ್ಕಾರಕ್ಕೆ ಸ್ವೀಕೃತವಾಗಿದೆಯೇ; ಸ್ವೀಕೃತವಾಗಿದ್ದಲ್ಲಿ, ಇತರೆ ಬೆಳೆಗಳಂತೆ ರೇಷ್ಮೆ ಬೆಳೆಗೂ ವಿಮಾ ಸೌಲಭ್ಯವನ್ನು ವಿಸ್ತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ಜಿಲ್ಲಾ ನಿರ್ಮಿತಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಯೋಜನಾ ವ್ಯವಸ್ಥಾಪಕರ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೧೬ (೧೦೨೪) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ನಿರ್ಮಿತಿ ಕೇಂದ್ರಗಳ ಹೆಸರು, ಈ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯೋಜನಾ ವ್ಯವಸ್ಥಾಪಕರ ಹೆಸರು, ವಿದ್ಯಾರ್ಹತೆ, ಎಷ್ಟು ವರ್ಷಗಳಿಂದ ಆ ಹುದ್ದೆಯಲ್ಲಿದ್ದಾರೆ ಮತ್ತು ಅವರ ನೇಮಕಾತಿ ಆದೇಶಗಳ ಪ್ರತಿ ; (೫೮ ವರ್ಷ ತುಂಬಿದ ಯೋಜನಾ ವ್ಯವಸ್ಥಾಪಕರ ವಿವರಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿರುವ ಎಲ್ಲಾ ನಿರ್ಮಿತಿ ಕೇಂದ್ರಗಳು ಅಳವಡಿಸಿಕೊಂಡಿರುವ ಬೈಲಾ ಪ್ರತಿಗಳನ್ನು ನೀಡುವುದು ;

(ಇ) ತುಮಕೂರು, ಹಾಸನ, ದಾವಣಗೆರೆ, ಬಳ್ಳಾರಿ, ಬಿಜಾಪುರ, ಚಾಮರಾಜನಗರ, ಬಾಗಲಕೋಟೆ ನಿರ್ಮಿತಿ ಕೇಂದ್ರಗಳಲ್ಲಿ ಯೋಜನಾ ವ್ಯವಸ್ಥಾಪಕರ ಹುದ್ದೆಗಳು ಖಾಲಿ ಇದ್ದಾಗ್ಯೂ ಆ ಹುದ್ದೆಗಳನ್ನು ತುಂಬಲು ಅಧಿಸೂಚನೆಗಳನ್ನು ಹೊರಡಿಸದೆ, ಆ ಹುದ್ದೆಗಳನ್ನು ಪ್ರಭಾರದಲ್ಲಿ ನಡೆಸುತ್ತಿರುವುದಕ್ಕೆ ಕಾರಣಗಳೇನು ; ಈ ಹುದ್ದೆಗಳ ಭರ್ತಿ ಮಾಡಲು ಪ್ರಕಟಣೆ ಹೊರಡಿಸಿ, ಅರ್ಹ ಅಭ್ಯರ್ಥಿಗಳನ್ನು ನೇಮಕಾತಿ ಮಾಡಲು ಸರ್ಕಾರವು ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳುವುದು ? (ಮಾಹಿತಿ ನೀಡುವುದು)

## ಸರ್ಕಾರಿ ಪಡ ಜಮೀನುಗಳ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೧೭ (೧೦೨೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳಲ್ಲಿ ಗುರುತಿಸಲಾಗಿರುವ ಸರ್ಕಾರಿ ಪಡ ಜಮೀನುಗಳ ಸಂಖ್ಯೆ ಮತ್ತು ಅವುಗಳ ವಿಸ್ತೀರ್ಣ ಎಷ್ಟು ; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಆ) ಸರ್ಕಾರಿ ಪಡ ಜಮೀನುಗಳನ್ನು ಅವರ ವಾರಸುದಾರರಿಗೆ ಹಿಂದಿರುಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ದೇವಸ್ಥಾನಗಳಿಗೆ ಸ್ವಾಯತ್ತತೆ ನೀಡುವ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೧೮ (೯೮೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೨– ೨೩ನೇ ಸಾಲಿನ ಆಯವ್ಯಯದಲ್ಲಿ ಮುಜರಾಯಿ ಇಲಾಖೆ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುವ ದೇವಸ್ಥಾನಗಳಿಗೆ ಸ್ವಾಯತ್ತತೆ ನೀಡಲು ಕ್ರಮ ವಹಿಸಲಾಗುವುದಾಗಿ ಘೋಷಿಸಿದ್ದು ಅದರಂತೆ ಇದುವರೆಗೆ ಎಷ್ಟು ದೇವಸ್ಥಾನಗಳಿಗೆ ಸ್ವಾಯತ್ತತೆ ನೀಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ದೇವಸ್ಥಾನಗಳಿಗೆ ಯಾವ ರೀತಿಯಲ್ಲಿ ಸ್ವಾಯತ್ತತೆ ನೀಡಲಾಗಿದೆ ಸಂಪೂರ್ಣ ಸ್ವಾಯತತ್ತೆ ಎಂದರೇನು ; ಸರ್ಕಾರದ ಯಾವುದೇ ರೀತಿಯ ಹಸ್ತಕ್ಷೇಪವು ದೇವಸ್ಥಾನದ ದೈನಂದಿನ ಪೂಜೆ ವ್ಯವಸ್ಥೆಗಳಲ್ಲಿ ಇರದಿರುವುದನ್ನು ಸ್ವಾಯುಕ್ತತೆ ಎಂದು ಕರೆಯಲಾಗಿದೆಯೇ ; (ಈ ಕುರಿತು ಸರ್ಕಾರದ ನಿಲುವೇನು)

(ಇ) ದೇವಸ್ಥಾನಗಳ ಆಡಳಿತ ವ್ಯವಸ್ಥೆ ಹಾಗೂ ದೈನಂದಿನ ಕಾರ್ಯಭಾರಗಳನ್ನು ಸದರಿ ದೇವಸ್ಥಾನದ ಭಕ್ತರ ಅಧೀನಕ್ಕೆ ನೀಡುವ ಕುರಿತು ಸರ್ಕಾರದ ನಿಲುವೇನು ;

(ಈ) ಪ್ರತಿ ದೇವಸ್ಥಾನಕ್ಕೆ ಅದರ ಭಕ್ತರನ್ನೇ ಸದಸ್ಯರನ್ನಾಗಿ ನೋಂದಾಯಿಸಲು ಅವಕಾಶ ಮಾಡಿಕೊಟ್ಟ ಆ ಸದಸ್ಯರ ಮೂಲಕ ಚುನಾಯಿತ ಸಮಿತಿಯನ್ನು ದೇವಸ್ಥಾನದ ದೈನಂದಿನ ಆಡಳಿತ ನೋಡಿಕೊಳ್ಳಲು ಅವಕಾಶ ಕಲ್ಪಿಸುವ ಮೂಲಕ ದೇವಸ್ಥಾನಗಳನ್ನು ಸರ್ಕಾರಿ ಆಡಳಿತದಿಂದ ಮುಕ್ತಗೊಳಿಸುವ ಕುರಿತು ಸರ್ಕಾರದ ನಿಲುವೇನು ?

## ಬೈಕ್ ಟ್ಯಾಕ್ಸಿ ಸೇವೆ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೧೯ (೯೫೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಸೇವೆಯುನ್ನು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಕುರಿತು ಸರ್ಕಾರದ ನಿಲುವೇನು ; (ವಿವರ ನೀಡುವುದು)

(ಆ) ಬೈಕ್ ಟ್ಯಾಕ್ಸಿ ಸೇವೆ ಕುರಿತಂತೆ ಮೋಟಾರು ವಾಹನ ಕಾಯ್ದೆಯಡಿ ನಿಯಮಗಳನ್ನು ರೂಪಿಸುವಂತೆ ಮಾನ್ಯ ಉಚ್ಚ ನ್ಯಾಯಾಲಯವು ಈ ಹಿಂದೆಯೇ ಆದೇಶ ನೀಡಿದ್ದರೂ ನಿಯಮ ರೂಪಿಸದೆ ಇರುವುದಕ್ಕೆ ಕಾರಣವೇನು ; ಈ ಬೈಕ್ ಟ್ಯಾಕ್ಸಿ ಸೇವೆಯಿಂದ ತಮ್ಮ ಜೀವನ ನಡೆಸುತ್ತಿದ್ದ ಹಲವಾರು ಜನರು ನಿರುದ್ಯೋಗಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ನಿರುದ್ಯೋಗಿಗಳಿಗೆ ಸರ್ಕಾರ ಯಾವ ರೀತಿಯ ಪರಿಹಾರ ನೀಡಿದೆ ; (ವಿವರ ನೀಡುವುದು)

(ಇ) ಆರ್ಥಿಕ ತೊಂದರೆಯಲ್ಲಿರುವ ವಿದ್ಯಾರ್ಥಿಗಳು ಕಾಲೇಜು ಅವಧಿಯ ನಂತರ ಹಾಗೂ ದಿನಗೂಲಿ ನೌಕರರು ಪಾರ್ಟ್‌ಟೈಮ್ ವೃತ್ತಿಯನ್ನಾಗಿ ಬೈಕ್ ಟ್ಯಾಕ್ಸಿ ಆಯ್ಕೆ ಮಾಡಿಕೊಂಡು ತಮ್ಮ ಜೀವನ ಕಟ್ಟಿಕೊಂಡಿದ್ದು, ಸೇವೆ ಸ್ಥಗಿತಗೊಳಿಸಿದ ಪರಿಣಾಮ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಸರ್ಕಾರ ಯಾವ ರೀತಿ ನೆರವಿಗೆ ಬರಲಿದೆ ; (ಮಾಹಿತಿ ಒದಗಿಸುವುದು)

(ಈ) ನಗರದಲ್ಲಿ ದಿನನಿತ್ಯ ಕಛೇರಿ ಕೆಲಸಕ್ಕಾಗಿ ಹೊರಡುವ ಸಾರ್ವಜನಿಕರಿಗೆ ಸಂಚಾರ ದಟ್ಟಣೆಯಿಂದಾಗಿ ನಿಗದಿತ ಸಮಯಕ್ಕೆ ಕಛೇರಿ ತಲುಪಲು ವರದಾನದಂತಿದ್ದ ಬೈಕ್ ಟ್ಯಾಕ್ಸಿ ಸೇವೆಯನ್ನು ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಆದೇಶದಂತೆ ಮೋಟಾರ್ ವಾಹನ ಕಾಯ್ದೆಯಡಿ ನಿಯಮ ರೂಪಿಸಿ ಯಾವ ಕಾಲಮಿತಿಯಲ್ಲಿ ಪುನರಾರಂಭಿಸಲಾಗುವುದು ? (ವಿವರ ನೀಡುವುದು)

## ಸರ್ಕಾರಿ ಜಾಗದ ಸಂರಕ್ಷಣೆ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೨೦ (೯೫೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸರ್ಕಾರಿ ಸ್ಥಳಗಳಲ್ಲಿ ಮುಸ್ಲಿಂಮರಿಗೆ ಪ್ರಾರ್ಥನೆಗೆ ಮಾತ್ರವೇ ಗುರುತಿಸಲಾದ ಸ್ಥಳಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು )

(ಆ) ಮುಸ್ಲಿಂಮರಿಗೆ ಪ್ರಾರ್ಥನೆಗೆ ಅವಕಾಶ ಕಲ್ಪಿಸಿದ ಸರ್ಕಾರಿ ಜಾಗವನ್ನು ಉಪಯೋಗಿಸಿದ ಕಾರಣಕ್ಕೆ ಬಾಡಿಗೆಯನ್ನು ನಿಗಧಿ ಪಡಿಸಲಾಗಿದೆಯೇ ; ಇಲ್ಲವಾದಲ್ಲಿ, ನಿಗಧಿ ಪಡಿಸದಿರಲು ಕಾರಣವೇನು ; ಎಂದು ಬಾಡಿಗೆ ದರವನ್ನು ನಿಗಧಿ ಪಡಿಸಲಾಗುವುದು ; (ವಿವರ ನೀಡುವುದು)

(ಇ) ಮುಸ್ಲಿಂಮರಿಗೆ ಪ್ರಾರ್ಥನೆಗೆ ಅವಕಾಶ ಕಲ್ಪಿಸಿದ ಸರ್ಕಾರಿ ಜಾಗದಲ್ಲಿ ಗೋಡೆ ನಿರ್ಮಾಣಕ್ಕೆ ಅವಕಾಶ ಕಲ್ಪಿಸಲಾಗಿದೆಯೇ ; ಯಾವ ನಿಯಮದ ಅನ್ವಯ ಸರ್ಕಾರಿ ಜಾಗದಲ್ಲಿ ಗೋಡೆ ನಿರ್ಮಿಸಲು ಅನುಮತಿ ನೀಡಲಾಗಿದೆ ; (ಅನುಮತಿ ಪತ್ರದೊಂದಿಗೆ ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಮುಸ್ಲಿಂಮರಿಗೆ ವರ್ಷಕ್ಕೆ ಎರಡು ಬಾರಿ ಮಾತ್ರವೇ ಪ್ರಾರ್ಥನೆಗೆ ಅವಕಾಶ ಕಲ್ಪಿಸಿದ ಸರ್ಕಾರಿ ಜಾಗದಲ್ಲಿ ಗೋಡೆಯನ್ನು ಅನಧಿಕೃತವಾಗಿ, ಅಕ್ರಮವಾಗಿ ನಿರ್ಮಿಸಿದ್ದಲ್ಲಿ ಸದರಿ ಗೋಡೆಯನ್ನು ತೆರವುಗೊಳಿಸದಿರಲು ಕಾರಣವೇನು ; ಈ ಅಕ್ರಮ ನಿರ್ಮಾಣಕ್ಕೆ ಸಹಕರಿಸಿದವರ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ ; ಈ ಅಕ್ರಮ ನಿರ್ಮಾಣಗಳನ್ನು ಎಂದು ತೆರವುಗೊಳಿಸಲಾಗುವುದು ; (ವಿವರ ನೀಡುವುದು)

(ಉ) ಇವರಿಗೆ ವರ್ಷಕ್ಕೆ ಎರಡು ಬಾರಿ ಮಾತ್ರವೇ ಪ್ರಾರ್ಥನೆಗೆ ಅವಕಾಶ ಕಲ್ಪಿಸಿದ ಸರ್ಕಾರಿ ಜಾಗದಲ್ಲಿ ಇತರ ಧರ್ಮದವರು ತಮ್ಮ ಧಾರ್ಮಿಕ ಕಾರ್ಯಕ್ರಮಗಳನ್ನು ನಿರ್ವಹಿಸಬಾರದು ಎಂಬುದಾಗಿ ಸರ್ಕಾರಿ ಕಾನೂನು ಮಾಡಿದೆಯೇ ; ಈ ಕುರಿತು ಸರ್ಕಾರದ ನಿಲುವೇನು ; ರಾಜ್ಯದ ಎಷ್ಟು ಸ್ಥಳಗಳಲ್ಲಿ ಇತರ ಧರ್ಮದವರ ಪ್ರಾರ್ಥನೆ ಮತ್ತು ಉತ್ಸವಗಳಿಗೆ ಅವಕಾಶ ಕಲ್ಪಿಸಲಾಗಿದೆ ;

(ಊ) ಸರ್ಕಾರಿ ಮೈದಾನದಲ್ಲಿ ಯಾವುದೇ ಧರ್ಮ ಸಮುದಾಯದವರು ತಮ್ಮ ಧಾರ್ಮಿಕ ಆಚರಣೆಗಳನ್ನು ನಿರ್ವಹಿಸಲು ಅನುವಾಗುವಂತೆ ಏಕ ರೂಪ ನಿಯಮಾವಳಿಗಳನ್ನು ಜಾರಿಗೆ ತರುವ ಕುರಿತು ಸರ್ಕಾರದ ನಿಲುವೇನು ?

## ಪಶುವೈದ್ಯಕೀಯ ಘಟಕಕ್ಕೆ ವಾಹನ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೨೧ (೯೫೯) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೊಬೈಲ್ ಪಶುವೈದ್ಯಕೀಯ ಘಟಕ ವಾಹನವು ಸಂಚರಿಸದೇ ಬಿಲ್ಲುಗಳನ್ನು ಕ್ಲೇಮು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಕುರಿತು ರಾಜ್ಯದಲ್ಲಿರುವ ಎಲ್ಲಾ ಮೊಬೈಲ್ ಪಶು ವೈದ್ಯಕೀಯ ಘಟಕ ವಾಹನದ ದಿನಾಂಕ:೦೧/೦೪/೨೦೨೩ ರಿಂದ ೧೦/೦೭/೨೦೨೫ ರವರೆಗಿನ ಬೆಳಿಗ್ಗೆ : ೦೮.೦೦ ರಿಂದ ಸಂಜೆ: ೦೮.೦೦ ರವರೆಗಿನ ಪ್ರತಿದಿನದ ಜಿ.ಪಿ.ಎಸ್. ಟ್ರ್ಯಾಕಿಂಗ್ ವರದಿಯ ವಿವರವನ್ನು ದೃಢೀಕೃತ ಮಾಹಿತಿಯೊಂದಿಗೆ ವಾಹನ ಸಂಚರಿಸುವ ಸಮಗ್ರ ಮಾಹಿತಿಯೊಂದಿಗೆ ವಿವರ ನೀಡುವುದು ;

(ಆ) ಮೊಬೈಲ್ ಪಶುವೈದ್ಯಕೀಯ ಘಟಕ ವಾಹನದ ಸಂಖ್ಯೆ, ಚಾರ್ಸಿ ನಂಬರ್, ಖರೀದಿಸಿದ ದಿನಾಂಕ, ಯಾವ ಏಜೆನ್ಸಿಯಿಂದ ಖರೀದಿಸಲಾಗಿದೆ ಮತ್ತು ಯಾವಾಗ ಸೇವೆಯ ಬಳಕೆಗೆ ಬಂದಿದೆ ; (ದಿನಾಂಕದೊಂದಿಗೆ ಸಮಗ್ರ ಮಾಹಿತಿ ನೀಡುವುದು)

(ಇ) ಮೊಬೈಲ್ ಪಶುವೈದ್ಯಕೀಯ ಘಟಕವು ಅತೀ ದೊಡ್ಡ ಭ್ರಷ್ಟಾಚಾರ ಹಗರಣವಾಗಿರುವ ಕುರಿತು ಸರ್ಕಾರದ ನಿಲುವು ಏನು ? (ವಿವರ ನೀಡುವುದು)

## ಮುಜರಾಯಿ ದೇವಸ್ಥಾನಗಳ ಭೂಮಿ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೨೨ (೯೬೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮುಜರಾಯಿ ಇಲಾಖೆ ದೇವಸ್ಥಾನಗಳು ಪ್ರಸ್ತುತ ಎಷ್ಟು ಎಕರೆ ಭೂಮಿಯನ್ನು ಹೊಂದಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಶ್ರೀಮತಿ ದ್ವಾರಕಾಬಾಯಿ ವೇದಾಂತಂರವರು ಬೆಂಗಳೂರು ದಕ್ಷಿಣ ತಾಲೂಕಿನ ತಾವರೆಕೆರೆ ಹೋಬಳಿಯು ಬ್ಯಾಲಾಳು ಚೋಳನಾಯಕನಹಳ್ಳಿ, ಪೆದ್ದನಹಳ್ಳಿ, ದೊಡ್ಡಮಾರನ ಹಳ್ಳಿ ಮತ್ತು ಕಾಡುಮಾರನಹಳ್ಳಿಯ ೧೧೯೮.೩೪ ಎಕರೆ ಜಾಗವನ್ನು ೧೧/ ೧೩ ನೇ ಏಪ್ರಿಲ್ ೧೯೩೬ ರಂದು ಶ್ರೀರಂಗಪಟ್ಟಣ ತಾಲ್ಲೂಕು, ಶ್ರೀ ರಂಗನಾಥಸ್ವಾಮಿ ದೇವಾಲಯಕ್ಕೆ ದಾನವಾಗಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸದರಿ ಜಾಗವನ್ನು ಯಾವ ಕಾರಣಕ್ಕಾಗಿ ದಾನವಾಗಿ ನೀಡಲಾಗಿದೆ ; ಪ್ರಸ್ತುತ ಎಷ್ಟು ಎಕರೆ ಜಾಗ ದೇವಾಲಯುದ ಹೆಸರಿನಲ್ಲಿದೆ ; ಅನಧಿಕೃತವಾಗಿ ಒತ್ತುವರಿಯಾದ ಜಾಗವೆಷ್ಟು ; (ಒತ್ತುವರಿದಾರರ ಹೆಸರಿನೊಂದಿಗೆ ಮಾಹಿತಿ ನೀಡುವುದು)

(ಇ) ದೇವಸ್ಥಾನಕ್ಕೆ ದಾನವಾಗಿ ನೀಡಿರುವ ಜಾಗವನ್ನು ಸರ್ಕಾರ ಯಾವ ಆದೇಶದ ಅನ್ವಯ ೭೯ ನಿರಾಶ್ರಿತರಿಗೆ ತಲಾ ೨.೨ ಎಕರೆ ಜಮೀನು ಮಂಜೂರು ಮಾಡಿದೆ ; ಈ ಜಮೀನನ್ನು ಸರ್ಕಾರಕ್ಕೆ ದಾನವಾಗಿ ನೀಡಲಾಗಿತ್ತೇ ; ಸರ್ಕಾರಕ್ಕೆ ದಾನ ನೀಡಿಲ್ಲವೆಂದಾಗ ಸರ್ಕಾರ ಹೇಗೆ ದೇವಸ್ಥಾನದ ಜಾಗವನ್ನು ಹಂಚಲು ಸಾಧ್ಯ; ದೇವಸ್ಥಾನಕ್ಕೆ ದಾನ ನೀಡಿದ ಜಮೀನನ್ನು ಸ್ವಾಧೀನ ಪಡಿಸಿ ಇತರರಿಗೆ ಹಂಚುವಾಗ ದೇವಸ್ಥಾನಕ್ಕೆ ಎಷ್ಟು ಮೊತ್ತವನ್ನು ಪರಿಹಾರವಾಗಿ ನೀಡಿದೆ ; (ವಿವರ ನೀಡುವುದು)

(ಈ) ಧಾರ್ಮಿಕ ದತ್ತಿ ಆಯುಕ್ತರ ಅಧ್ಯಕ್ಷತೆಯಲ್ಲಿನ ೧೩ ಜನರ ಸಮಿತಿಯು ೧೧.೧೧.೨೦೨೧ ರಿಂದ ಇದುವರೆಗೆ ಎಷ್ಟು ಸಭೆಗಳನ್ನು ನಡೆಸಿದೆ; ಎಷ್ಟು ಅನಧಿಕೃತ ಒತ್ತುವರಿದಾರರನ್ನು ಗುರುತಿಸಿದೆ ? (ವಿವರ ನೀಡುವುದು)

## ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ ಸೆಕ್ಷನ್ ೯೫ ತಿದ್ದುಪಡಿ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೯೨೩ (೧೦೭೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ ಸೆಕ್ಷನ್ ೯೫ ತಿದ್ದುಪಡಿ ಅಧಿಸೂಚನೆಯನ್ನು ದಿನಾಂಕ:೨೭.೦೭.೨೦೨೩ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದ್ದರೂ ಜಿಲ್ಲಾಧಿಕಾರಿಗಳು ಭೂ ಪರಿವರ್ತನೆಗಾಗಿ ಅರ್ಜಿಗಳನ್ನು ಸ್ವೀಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ತಿದ್ದುಪಡಿ ಅಧಿಸೂಚನೆಯನ್ನು ದಿನಾಂಕ:೨೭.೦೭.೨೦೨೩ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದ್ದರೂ ಸರ್ಕಾರವು ಇದುವರೆವಿಗೂ ಅಧಿಸೂಚನೆ ಹೊರಡಿಸದಿರಲು ಕಾರಣವೇನು ;

(ಇ) ಅಧಿಸೂಚನೆಯನ್ನು ಹೊರಡಿಸಲಾಗುವುದು ಯಾವಾಗ ?

## ಬಿ–ಖಾತಾ ಮತ್ತು ಕಂದಾಯ ನಿವೇಶನಗಳ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೯೨೪ (೧೦೭೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿ–ಖಾತಾ ಮತ್ತು ಕಂದಾಯ ನಿವೇಶನಗಳಲ್ಲಿ ನಿರ್ಮಿಸಲಾದ ಕಟ್ಟಡದ ನಿವಾಸಿಗಳು ಆ ಮನೆಗಳಲ್ಲಿ ವಾಸಿಸುತ್ತಿದ್ದಲ್ಲಿ, ಬೆಸ್ಕಾಂ/ ಎಸ್ಕಾಂ ಮತ್ತು ಇತರ ವಿದ್ಯುತ್ ಸರಬರಾಜು ನಿಗಮಗಳು ವಿದ್ಯುತ್ ಸರಬರಾಜು ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಿ–ಖಾತಾ ಆಸ್ತಿಗಳಲ್ಲಿರುವ ಮತ್ತು ಕಂದಾಯ ನಿವೇಶನಗಳಲ್ಲಿನ ಮನೆಗಳಿಗೆ ವಿದ್ಯುತ್ ಸರಬರಾಜು ನಿರ್ಬಂಧಿಸುವ ಯಾವುದೇ ಆದೇಶಗಳು ಅಥವಾ ಸುತ್ತೋಲೆಗಳನ್ನು ಸರ್ಕಾರ ಹೊರಡಿಸಿದೆಯೇ ; ಹಾಗಿದ್ದಲ್ಲಿ, ಅಂತಹ ಅಗತ್ಯ ಸೇವೆಗಳನ್ನು ನಿರಾಕರಿಸಲು ಕಾರಣಗಳೇನು ;

(ಇ) ಅಂತಹ ಪ್ರದೇಶಗಳ ನಿವಾಸಿಗಳಿಗೆ ಮಾನವೀಯ ಆಧಾರದ ಮೇಲೆ ಗೃಹಬಳಕೆ ವಿದ್ಯುತ್ ಸಂಪರ್ಕಗಳನ್ನು ಒದಗಿಸುವಂತೆ ಬೆಸ್ಕಾಂ/ಎಸ್ಕಾಂಗೆ ಸೂಚಿಸಲು ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ ?

# ಅಲ್ಪಸಂಖ್ಯಾತ ಇಲಾಖೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ "ಡೇ ಸ್ಕೂಲ್" ಹಾಗೂ ಮೊರಾರ್ಜಿ ವಸತಿ ಶಾಲೆಗಳ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) :–**

೯೨೫ (೧೦೩೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಎಷ್ಟು ಮೌಲಾನ ಆಜಾದ್ ಮಾದರಿ ಶಾಲೆಗಳು (ಡೇ ಸ್ಕೂಲ್) ಹಾಗೂ ಅಲ್ಪಸಂಖ್ಯಾತರ ಮೊರಾರ್ಜಿ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ ; ಮತ್ತು ಅವುಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಅವುಗಳಲ್ಲಿ ಎಷ್ಟು ಸ್ವಂತ ಕಟ್ಟಡ ಹೊಂದಿವೆ ಮತ್ತು ಬಾಡಿಗೆ ಕಟ್ಟಡದಲ್ಲಿ ಎಷ್ಟು ನಡೆಯುತ್ತಿವೆ ; (ವಿವರವಾದ ಮಾಹಿತಿ ನೀಡುವುದು)

(ಇ) ಮೌಲಾನಾ ಆಜಾದ್ ಮಾದರಿ ಶಾಲೆಗಳಿಗೆ ಮಂಜೂರಾದ ಶಿಕ್ಷಕ ಹಾಗೂ ಶಿಕ್ಷಕೇತರ ಹುದ್ದೆಗಳೆಷ್ಟು ; ಖಾಯಂ ಹುದ್ದೆಗಳಲ್ಲಿ ನೇಮಕಗೊಂಡು ಖಾಲಿ ಇರುವ ಹುದ್ದೆಗಳೆಷ್ಟು ;

(ಈ) ಅಲ್ಪಸಂಖ್ಯಾತರ ಮೊರಾರ್ಜಿ ವಸತಿ ಶಾಲೆಗಳಿಗೆ ಮಂಜೂರಾದ ಹುದ್ದೆಗಳು ಎಷ್ಟು ; ಅವುಗಳಲ್ಲಿ ಖಾಯಂಮಾತಿ ಮೇಲೆ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ?

## SCSP/TSP ಅಡಿಯಲ್ಲಿ ೨೦೨೧-೨೨, ೨೦೨೨-೨೩, ೨೦೨೩-೨೪ ಹಾಗೂ ೨೦೨೪-೨೫ನೇ ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನಗಳ ವಿವರಗಳ ಬಗ್ಗೆ

**ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶನ ಹೊಂದಿದವರು) :-**

೯೨೬ (೯೪೪೪) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರದ ಮಹತ್ವಾಕಾಂಕ್ಷೆ ಕಾಯ್ದೆ SCSP/TSP ಅಡಿಯಲ್ಲಿ ರೇಷ್ಮೆ ಇಲಾಖೆಗೆ ೨೦೨೧-೨೨, ೨೦೨೨-೨೩, ೨೦೨೩-೨೪ ಹಾಗೂ ೨೦೨೪-೨೫ನೇ ಹಣಕಾಸು ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನವೆಷ್ಟು ;

(ಆ) ಸದರಿ ಹಣಕಾಸು ವರ್ಷಗಳ ಅವಧಿಗಳಲ್ಲಿ ರೇಷ್ಮೆ ಇಲಾಖೆಗೆ ಬಿಡುಗಡೆಯಾಗಿರುವ SCSP/TSP ಅನುದಾನಗಳನ್ನು ಯಾವ ಯಾವ ಯೋಜನೆಗಳ ಜಾರಿಗೆಗೆ ವ್ಯಯಿಸಲಾಗಿದೆ ;

(ಇ) SCSP/TSP ಕಾಯ್ದೆ ಸೆಕ್ಷನ್ ೧೭ರ ಅನ್ವಯ ರೇಷ್ಮೆ ಇಲಾಖೆಯು ಈ ಹಣಕಾಸು ವರ್ಷಗಳ ಅವಧಿಗಳಲ್ಲಿ ಪರಿಶಿಷ್ಟ ಸಮುದಾಯ ಹಾಗೂ ಸಾಮಾನ್ಯ ಸಮುದಾಯದ ಅಭಿವೃದ್ಧಿ ಅಂತರವನ್ನು ಗುರುತಿಸಿ, ಸಂಬಂಧಿಸಿದ ಸಮುದಾಯ ಅಭಿವೃದ್ಧಿಗೆ ಅಭ್ಯಯಿಸಿ/ಸಮಾಲೋಚಿಸಿ ತಯಾರಿಸಿರುವ ಅನುದಾನ ವಿನಿಯೋಗಗಳಿಗೆ ಸಂಬಂಧಿಸಿದ ಉಪಯೋಜನೆ ಕಾರ್ಯಯೋಜನೆ ಯಾವುವು ; (ಪ್ರತಿಗಳನ್ನು ಒದಗಿಸುವುದು)

(ಈ) SCSP/TSP ಕಾಯ್ದೆ ಸೆಕ್ಷನ್ ೧೫ ಹಾಗೂ ೧೬ರಡಿ ಕಡ್ಡಾಯ ಪಡಿಸಿರುವಂತೆ ಸದರಿ ಅನುದಾನದಡಿ ಬಿಡುಗಡೆಯಾಗಿರುವ

ಹಣವನ್ನು ಕೇವಲ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಸೇರಿರುವ ವ್ಯಕ್ತಿ, ಸದರಿ ಸಮುದಾಯ ವಾಸಿಸುತ್ತಿರುವ ಕಾಲೋನಿ/ ಪ್ರದೇಶಗಳ ಅಭಿವೃದ್ದಿಗೆ ಮಾತ್ರ ಬಳಸಲು ಖಾತ್ರಿಪಡಿಸಲು ರೇಷ್ಮೆ ಇಲಾಖೆ ಕೈಗೊಂಡಿರುವ ಕ್ರಮಗಳೇನು ? (ಸಂಬಂಧಿಸಿದ ದಾಖಲೆ ಒದಗಿಸುವುದು)

## ಸರ್ಕ್ಯೂಟ್ ಹೌಸ್ ಮತ್ತು ಪ್ರವಾಸಿ ಮಂದಿರಗಳ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೨೭ (೧೦೧೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಹಲವು ಭಾಗಗಳಲ್ಲಿನ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವ ಸರ್ಕ್ಯೂಟ್ ಹೌಸ್ ಮತ್ತು ಪ್ರವಾಸಿ ಮಂದಿರಗಳಲ್ಲಿ ಶುಚಿ ಕಾಪಾಡದೆ (maintainance) ಹಾಗೆ ಬೇಕಾಬಿಟ್ಟಿ ಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಲವು ಭಾಗದ ಪ್ರವಾಸಿ ಮಂದಿರಗಳಲ್ಲಿನ ದಿಂಬುಗಳು ಮತ್ತು ಬೆಡ್–ಶೀಟ್‌ಗಳನ್ನು ಕಾಲಕಾಲಕ್ಕೆ ಶುಚಿಯಾಗಿ ಇಟ್ಟುಕೊಳ್ಳದೆ ಅವುಗಳನ್ನೇ ಬಂದ ಪ್ರತಿಯೊಬ್ಬರಿಗೂ ಬಳಸುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ ;

(ಇ) ಹಲವು ಭಾಗದ ಪ್ರವಾಸಿ ಮಂದಿರಗಳಲ್ಲಿನ ಶೌಚಾಲಯಗಳು ಶುಚಿಯಿಂದ ಕೂಡಿರದೆ ಅಶುಚಿ ತಾಂಡವವಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದರಿಂದ ಸರ್ಕಾರಿ ಅತಿಥಿ ಗೃಹದ ಬಗ್ಗೆ ಜನರಿಗೆ ತಪ್ಪು ಭಾವನೆ ಮೂಡುವುದಲ್ಲವೇ ; ಇದನ್ನು ಸುಧಾರಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳುವ ಕಾರ್ಯಕ್ರಮಗಳೇನು ;

(ಈ) ಹಾಗಿದ್ದಲ್ಲಿ, ಸರ್ಕಾರದಿಂದ ಪ್ರವಾಸಿ ಮಂದಿರಗಳ ಜೀರ್ಣೋದ್ಧಾರಕ್ಕೆ/ನಿರ್ವಹಣೆಗೆ ಅನುದಾನ ಬಿಡುಗಡೆಗೊಂಡಿಲ್ಲವೇ ; ಬಿಡುಗಡೆಗೊಂಡಿದ್ದಲ್ಲಿ, ವೆಚ್ಚವಾರು ಪೂರ್ಣ ವಿವರ ನೀಡುವುದು ; ಬಿಡುಗಡೆಗೊಳ್ಳದೇ ಇದ್ದಲ್ಲಿ, ಕಾರಣಗಳೇನು ; ಬಿಡುಗಡೆಗೊಂಡಿದ್ದರೂ ಅದನ್ನು ನಿರ್ವಹಣೆ ಮಾಡದೇ ಇರುವಲ್ಲಿ ಹೊಣೆ ಯಾರದ್ದು ; ಅವರ ಮೇಲೆ ಸರ್ಕಾರ ಕೈಗೊಂಡಿರುವ/ ಕೈಗೊಳ್ಳಲಿರುವ ಕ್ರಮಗಳೇನು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ಹಲವು ಪ್ರವಾಸಿ ಮಂದಿರಗಳಲ್ಲಿ ಸ್ಥಳೀಯರು ಬರುವುದರಿಂದ ಅಶುಚಿಗೆ ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಇವುಗಳ ನಿರ್ವಹಣೆಯ ಪೂರ್ಣ ವಿವರ ನೀಡುವುದು)

(ಊ) ಮುಂಬರುವ ದಿನಗಳಲ್ಲಿ ಪ್ರವಾಸಿ ಮಂದಿರಗಳಲ್ಲಿ ಶುಚಿತ್ವ ಕಾಪಾಡಲು ಹಾಗೂ ಸರಿಯಾಗಿ ನಿರ್ವಹಣೆ ಮಾಡಲು ಇತರೆ ತಂಗುದಾಣಗಳಿಗೆ ರಾಜ್ಯದ ಪ್ರವಾಸಿ ಮಂದಿರಗಳನ್ನು ಮಾದರಿಯಾಗಿಸುವ ನಿಟ್ಟಿನಲ್ಲಿ ಸರ್ಕಾರದಿಂದ ಕೈಗೊಳ್ಳುವ ಅಗತ್ಯ ಕ್ರಮಗಳೇನು ; ಕಾಲಮಿತಿ ಎಷ್ಟು ?

## ವಸತಿ ಯೋಜನೆಗಳ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೨೮ (೧೦೧೨) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೩ ವರ್ಷಗಳಲ್ಲಿ ವಸತಿ ರಹಿತರಿಗೆ ಸರ್ಕಾರ ಯಾವ ಯೋಜನೆಯನ್ನು ಹಮ್ಮಿಕೊಂಡಿದೆ ;

(ಆ) ಕಲಬುರಗಿ ಜಿಲ್ಲೆಯಲ್ಲಿ ವಸತಿ ಇಲಾಖೆಯಿಂದ ಮಂಜೂರಾದ ಮನೆಗಳು ಎಷ್ಟು ; ಮತ್ತು ಅದಕ್ಕೆ ಬಿಡುಗಡೆಯಾದ ಅನುದಾನ ಎಷ್ಟು ; (ತಾಲೂಕುವಾರು ಮಾಹಿತಿ ನೀಡುವುದು)

(ಇ) ಸದರಿ ಜಿಲ್ಲೆಯಲ್ಲಿ ವಸತಿ ಇಲಾಖೆಯಿಂದ ಬಿಡುಗಡೆಯಾದ ಮನೆಗಳಲ್ಲಿ ಪೂರ್ಣಗೊಳ್ಳದೆ ಇರುವ ಮನೆಗಳ ಸಂಖ್ಯೆ ಎಷ್ಟು; (ತಾಲೂಕುವಾರು ಮಾಹಿತಿ ನೀಡುವುದು)

(ಈ) ಸರ್ಕಾರದಿಂದ ಹೊರ ರಾಜ್ಯಗಳಲ್ಲಿರುವ ವಸತಿ ಗೃಹಗಳ ಸಂಖ್ಯೆ ಎಷ್ಟು ಮತ್ತು ಅದಕ್ಕೆ ಬಿಡುಗಡೆಯಾದ ಅನುದಾನವೆಷ್ಟು ?

## ಸ್ಲಂ ಬೋರ್ಡ್‌ಗೆ ಸೇರಿದ ಆಸ್ತಿಗಳ ಬಗ್ಗೆ

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೨೯ (೧೦೧೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಯಾಣ ಕರ್ನಾಟಕ ಮತ್ತು ವಿಜಯಪುರ, ಬೆಳಗಾವಿ, ಬಾಗಲಕೋಟೆಯಲ್ಲಿರುವ ಸ್ಲಂ ಬೋರ್ಡ್ ಗೆ ಸೇರಿದ ಒಟ್ಟು ಆಸ್ತಿ ಎಷ್ಟು ; (ನಗರವಾರು, ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕಲ್ಯಾಣ ಕರ್ನಾಟಕ ಮತ್ತು ಸದರಿ ಜಿಲ್ಲೆಯಲ್ಲಿನ ಸ್ಲಂ ಬೋರ್ಡ್ ನಿರ್ವಹಣೆಗೆ ಕಳೆದ ೦೩ ವರ್ಷಗಳಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ; (ಸಂಪೂರ್ಣ ನಗರವಾರು ಮಾಹಿತಿ ನೀಡುವುದು)

(ಇ) ಕಲ್ಯಾಣ ಕರ್ನಾಟಕ ಮತ್ತು ಸದರಿ ಜಿಲ್ಲೆಗಳಲ್ಲಿ ಕಳೆದ ೦೩ ವರ್ಷಗಳಲ್ಲಿ ಸ್ಲಂ ಬೋರ್ಡ್ ಗೆ ನೂತನವಾಗಿ ಸೇರಿದ ಸ್ಲಂ ಬೋರ್ಡ್ ಜಾಗವೆಂದು ಘೋಷಣೆ ಮಾಡಿರುವ ಜಾಗ ಎಷ್ಟು;

ಅದಕ್ಕೆ ಬಿಡುಗಡೆಯಾದ ಅನುದಾನ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಕಲ್ಯಾಣ ಕರ್ನಾಟಕ ಮತ್ತು ವಿಜಯಪುರ, ಬೆಳಗಾವಿ, ಬಾಗಲಕೋಟೆ ಜಿಲ್ಲೆಯಲ್ಲಿ ಸ್ಲಂ ಬೋರ್ಡ್ ಜಾಗದಲ್ಲಿ ವಾಸಿಸುತ್ತಿರುವವರ ಮನೆಗಳು ಎಷ್ಟು ; ಮತ್ತು ಹಕ್ಕು ಪತ್ರ ಎಷ್ಟು ಜನರಿಗೆ ನೀಡಲಾಗಿದೆ; ನೀಡಬೇಕಾದ ಹಕ್ಕು ಪತ್ರಗಳು ಎಷ್ಟು ? (ಸಂಪೂರ್ಣ ಮಾಹಿತಿ ನೀಡುವುದು)

## ವಕ್ಫ್ ಬೋರ್ಡ್ ಅನುದಾನ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೩೦ (೧೦೧೪) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಕ್ಫ್ ಬೋರ್ಡ್ ಗೆ ಕಳೆದ ೧೦ ವರ್ಷಗಳಲ್ಲಿ ನೀಡಿದ ಅನುದಾನ ಎಷ್ಟು ; ಹಾಗೂ ಈ ಬೋರ್ಡ್ ಗೆ ಸೇರಿದ ಆಸ್ತಿ ಎಷ್ಟು ; ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ಆಸ್ತಿ ಇದೆ; ಸದರಿ ಆಸ್ತಿಯು ಯಾವ ಯಾವ ಉದ್ದೇಶಕ್ಕೆ ಬಳಕೆಯಾಗುತ್ತಿದೆ ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಕಳೆದ ೦೫ ವರ್ಷಗಳಲ್ಲಿ ಎಷ್ಟು ಮಸೀದಿ/ಖಬರ ಸ್ಥಾನಗಳನ್ನು ಅಭಿವೃದ್ಧಿ ಮಾಡಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ವಕ್ಫ್ ಬೋರ್ಡ್ ಆಸ್ತಿ ಕಬ್ಬಳಿಕೆ / ಒತ್ತುವರಿ ಮಾಡಿರುವ ಪ್ರಕರಣಗಳು ಎಷ್ಟು ; ಯಾವ ಜಿಲ್ಲೆಯಲ್ಲಿ ಎಷ್ಟು ಆಸ್ತಿ ಕಬ್ಬಳಿಕೆಯಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಈ ರೀತಿ ಕಬಳಿಸಿರುವ ಅಥವಾ ಒತ್ತುವರಿ ಮಾಡಿಕೊಂಡಿರುವ ವಕ್ಫ್ ಬೋರ್ಡ್ ಆಸ್ತಿಯಲ್ಲಿ ಎಷ್ಟು ಪ್ರಮಾಣದ ಆಸ್ತಿಯನ್ನು ಈವರೆಗೆ ಮರಳಿ ಪಡೆಯಲಾಗಿದೆ ; ಹಾಗೂ ಆಸ್ತಿ ಕಬಳಿಸಿದವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

## ಕೊಳಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳಿಂದ ಆದ ಅನ್ಯಾಯದ ಬಗ್ಗೆ

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೩೧ (೧೦೧೫) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆಯಾಗಿ ೩೦ ವರ್ಷಗಳಿಂದ ಅಧಿಕೃತವಾಗಿ ವಾಸ ಮಾಡುತ್ತಿದ್ದ ಜಯನಗರ ೭ನೇ ಬ್ಲಾಕಿನ ಶಾಸ್ತ್ರಿ ನಗರದ ಮನೆ ನಂಬರ್ ೧೭೮ ಎ ಮನೆಯನ್ನು ಅನಧಿಕೃತವಾಗಿ ಕೆಡವಿ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸರ್ಕಾರವು ಈ ವಿಷಯದಲ್ಲಿ ಸರ್ಕಾರದ ಅಧಿಕಾರಿಗಳಿಂದ ತಪ್ಪಾಗಿರುವುದನ್ನು ಒಪ್ಪಿದ್ದು, ಸದನದಲ್ಲಿ ಭರವಸೆ ನೀಡಿದ್ದು, ಇದುವರೆಗೂ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ ; (ಸಂಪೂರ್ಣ ದಾಖಲೆ ಸಹಿತವಾಗಿ ವಿವರ ನೀಡುವುದು)

(ಇ) ಯಾವುದೇ ನೋಟಿಸ್ ನೀಡದೆ ವಾಸವಿರುವ ಮನೆಯನ್ನು ಕೆಡವಿದ ಅಧಿಕಾರಿಗಳ ಮೇಲೆ ಅನೇಕ ದೂರುಗಳನ್ನು ಸಲ್ಲಿಸಿದ್ದರು ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು ;

(ಈ) ಅನಧಿಕೃತವಾಗಿ ಮನೆಯನ್ನು ಕೆಡವಿ ಅನ್ಯಾಯವಾಗಿರುವವರಿಗೆ ಸರ್ಕಾರದಿಂದ ಯಾವ ಪರಿಹಾರ ನೀಡಲಾಗಿದೆ ? (ದಾಖಲೆ ಸಹಿತ ವಿವರ ನೀಡುವುದು)

## ಮುಜರಾಯಿ ಇಲಾಖೆ ದೇವಸ್ಥಾನಗಳ ಒತ್ತುವರಿ ಕುರಿತು

**ಶ್ರೀ ಶರವಣ ಟಿ.ಎ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೩೨ (೧೦೭೬) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಎ ಗ್ರೇಡ್, ಬಿ ಗ್ರೇಡ್ ಮತ್ತು ಸಿ ಗ್ರೇಡ್ ದೇವಾಲಯಗಳು ಸದರಿ ಒಟ್ಟಾರೆ ಇರುವ ದೇವಸ್ಥಾನಗಳ ಚರಾಸ್ತಿ ಮತ್ತು ಸ್ತಿರಾಸ್ಥಿಯ ಒಟ್ಟು ಪ್ರಮಾಣವೆಷ್ಟು ; (ಆಯಾ ದೇವಾಲಯಗಳ ಹೆಸರು ಸಮೇತ ಮಾಹಿತಿ ನೀಡುವುದು)

(ಆ) ಈ ದೇವಾಲಯಗಳ ವ್ಯಾಪ್ತಿಯಲ್ಲಿ ಇರುವ ಮುಜರಾಯಿ ಅಥವಾ ದೇವಸ್ಥಾನ ಮಂಡಳಿಗಳ ಎಷ್ಟು ಪ್ರಮಾಣದ ಆಸ್ತಿ ಒತ್ತುವರಿ ಆಗಿದೆ ; (ದೇವಸ್ಥಾನಗಳ ಹೆಸರಿನ ಸಹಿತ ಮಾಹಿತಿ ನೀಡುವುದು)

(ಇ) ಈಗಿನ ಮಾರುಕಟ್ಟೆ ಮೌಲ್ಯದಂತೆ ಸುಮಾರು ಎಷ್ಟು ಕೋಟಿ ಮೌಲ್ಯದ ಆಸ್ತಿ ಒತ್ತುವರಿ ಆಗಿದೆ ; (ಆಗಿರುವುದರ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು)

(ಈ) ದೇವಸ್ಥಾನಗಳ ಆಸ್ತಿ ಒತ್ತುವರಿ ತೆರವು ಮಾಡಿಸುವ ನಿಟ್ಟಿನಲ್ಲಿ ಎಷ್ಟು ಜನಕ್ಕೆ ನೋಟಿಸ್ ನೀಡಲಾಗಿದೆ ಮತ್ತು ಯಾವ ಕ್ರಮ ಅನುಸರಿಸಲಾಗಿದೆ ? (ವಿವರ ಸಲ್ಲಿಸುವುದು)

## ವಿವಿಧ ವಸತಿ ಯೋಜನೆ ಗುರಿ ಮತ್ತು ಸಾಧನೆಯ ಬಗ್ಗೆ

**ಶ್ರೀ ಶರವಣ ಟಿ.ಎ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೩೩ (೧೦೭೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೩–೨೪ ರಿಂದ ಇಲ್ಲಿಯವರೆಗೆ ಕೇಂದ್ರ ಪುರಸ್ಕೃತ ಮತ್ತು ರಾಜ್ಯ ಪುರಸ್ಕೃತ ಯೋಜನೆಯಲ್ಲಿ ಹಂಚಿಕೆಯಾದ ಮನೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮತ್ತು ಯೋಜನೆವಾರು ಮಾಹಿತಿ ನೀಡುವುದು)

(ಆ) ನಿಗದಿಯಾದ ಗುರಿಗೆ ಎದುರಾಗಿ ಸಾಧಿಸಿದ ಪ್ರಗತಿ ಮತ್ತು ಬಿಡುಗಡೆಯಾದ ಅನುದಾನ ಎಷ್ಟು ; (ಜಿಲ್ಲಾವಾರು ಮತ್ತು ಯೋಜನೆವಾರು ಮಾಹಿತಿ ನೀಡುವುದು)

(ಇ) ಭೌತಿಕ ಪ್ರಗತಿ Upload ಮಾಡಿದ್ದರೂ ಸಹ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಲ್ಲಿ ಆಡಿಟ್ ಮಾಡುವುದಕ್ಕೆ ಬಾಕಿ ಇರುವ ಪ್ರಕರಣಗಳೆಷ್ಟು ; (ಜಿಲ್ಲಾವಾರು ಮತ್ತು ಯೋಜನೆವಾರು ಮಾಹಿತಿ ನೀಡುವುದು)

(ಈ) ಮನೆ ಹಂಚಿಕೆ ಮಾಡಿ ವರ್ಷ ಕಳೆದರೂ ಸಹ ಇನ್ನೂ ಫಲಾನುಭವಿಗಳ ಆಯ್ಕೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಯಾವ ಕಾಲ ಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು ?

# ರಾಜ್ಯದಲ್ಲಿ ಖಾಲಿ ಇರುವ ಉಪ ನೋಂದಣಾಧಿಕಾರಿ ಹುದ್ದೆಗಳು ಹಾಗೂ ಉಪ ನೋಂದಣಾಧಿಕಾರಿ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ಬಗ್ಗೆ

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :–**

೯೩೪ (೧೦೮೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಉಪ ನೋಂದಣಾಧಿಕಾರಿ ಇರುವ ಕಛೇರಿಗಳು ಎಷ್ಟು ಮತ್ತು ಪ್ರಸ್ತುತ ಇಲಾಖೆಯಲ್ಲಿ ಮಂಜೂರಾಗಿರುವ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಉಪ ನೋಂದಣಾಧಿಕಾರಿಗಳ ಹುದ್ದೆಗಳು ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕಳೆದ ಹಲವಾರು ವರ್ಷಗಳಿಂದ ಇಲಾಖೆಯಲ್ಲಿ ಉಪ ನೋಂದಣಾಧಿಕಾರಿ ಹುದ್ದೆಗಳ ನೇಮಕಾತಿ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ವಿಧಗಳಿಗೆ ನೇಮಕಾತಿ ಅಧಿಸೂಚನೆ ಹೊರಡಿಸಲಾಗುತ್ತದೆ ; ಈ ನೇಮಕಾತಿಯನ್ನು ಯಾವ ನೇಮಕಾತಿ ಪ್ರಾಧಿಕಾರಕ್ಕೆ ವಹಿಸಲಾಗುವುದು ;

(ಇ) ಎಷ್ಟು ಉಪ ನೋಂದಣಾಧಿಕಾರಿ ಹುದ್ದೆಗಳ ನೇರ ನೇಮಕಾತಿಗಾಗಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಮತ್ತು ಎಷ್ಟು ಹುದ್ದೆಗಳಿಗೆ ಆರ್ಥಿಕ ಇಲಾಖೆಯು ಅನುಮೋದನೆ ನೀಡಿದೆ ;

(ಈ) ಸುಮಾರು ವರ್ಷಗಳಿಂದ ಉಪ ನೋಂದಣಾಧಿಕಾರಿ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರು ಭ್ರಷ್ಟಾಚಾರದಲ್ಲಿ

ತೊಡಗಿಕೊಂಡಿದ್ದು ರಾಜಾರೋಷವಾಗಿ ಸಾರ್ವಜನಿಕರಿಂದ ಲಂಚವನ್ನು ತೆಗೆದುಕೊಳ್ಳುತ್ತಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಈ ನೌಕರರನ್ನು ಕಡ್ಡಾಯವಾಗಿ ಕೇವಲ ೨ ವರ್ಷಗಳವರೆಗೆ ಮಾತ್ರ ನೇಮಕ ಮಾಡಿಕೊಳ್ಳುವ ಮೂಲಕ ಕ್ರಮ ಕೈಗೊಂಡು ಭ್ರಷ್ಟಾಚಾರವನ್ನು ತಡೆಗಟ್ಟಬಹುದಲ್ಲವೇ ; ಈ ಬಗ್ಗೆ ಸರ್ಕಾರದ ನಿಲುವೇನು ?

## ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಸಾರ್ವಜನಿಕ ಸೇವೆಯಿಂದ ಆಟೋರಿಕ್ಷಾ ಪ್ರಯಾಣ ದರದಲ್ಲಿ ಹೆಚ್ಚಿಸಿರುವುದರಿಂದ ಆಟೋ ಚಾಲಕರು ಮತ್ತು ಸಾರ್ವಜನಿಕರಿಗೆ ನಷ್ಟ ಉಂಟಾಗುತ್ತಿರುವ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :–**

೯೩೫ (೧೦೮೩) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಾದ್ಯಂತ ಇರುವ ಸಾರ್ವಜನಿಕ ಆಟೋ ಸೇವೆಯಲ್ಲಿ ಜಿಲ್ಲಾಧಿಕಾರಿಗಳು ದರ ಏರಿಕೆ ಮಾಡಲು ಕಾರಣವೇನು ;

(ಆ) ದರ ಏರಿಕೆಯಿಂದಾಗಿ ಸಾರ್ವಜನಿಕರು ಹಾಗೂ ಮೊದಲೇ ಉಚಿತ ಬಸ್ ಸೇವೆಯಿಂದ ಆರ್ಥಿಕ ನಷ್ಟ ಅನುಭವಿಸುತ್ತಿರುವ ಆಟೋ ಚಾಲಕರು ಇಬ್ಬರಿಂದಲೂ ವಿರೋಧ ವ್ಯಕ್ತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಳ್ಳಬಹುದಾದ ಕ್ರಮಗಳೇನು ;

(ಇ) ಈ ಮೊದಲೇ ಸುರಕ್ಷತೆ ಮತ್ತು ಭದ್ರತೆಯ ಹಿತದೃಷ್ಟಿಯಿಂದಾಗಿ ಕ್ಯಾಬ್‌ಗಳ ಮೊರೆ ಹೋಗಿರುವ ಸಾರ್ವಜನಿಕರಿಂದಾಗಿ ಆಟೋ ಚಾಲಕರಿಗೆ ಆರ್ಥಿಕ ನಷ್ಟ ಉಂಟಾಗುತ್ತಿರುವುದರಿಂದ ಈಗ ದರ ಏರಿಕೆ ಮಾಡಿರುವುದು ಸರಿಯೇ ? (ವಿವರಣೆ ನೀಡುವುದು)

## ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಬರುವ ಕಲ್ಯಾಣ ಕರ್ನಾಟಕ ಭಾಗದ ದೇವಸ್ಥಾನಗಳ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :–**

೯೩೬ (೧೦೮೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮುಜರಾಯಿ ಇಲಾಖೆ ವ್ಯಾಪ್ತಿಗೆ ಬರುವ ಕಲ್ಯಾಣ ಕರ್ನಾಟಕ ಭಾಗದ ದೇವಸ್ಥಾನಗಳು ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ದೇವಸ್ಥಾನಗಳಿಗೆ ಕಳೆದ ೨ ವರ್ಷಗಳಲ್ಲಿ ಸಂಗ್ರಹವಾದ ಆದಾಯದ ಮೊತ್ತವೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಈ ದೇವಸ್ಥಾನಗಳಿಗೆ ಕಳೆದ ೨ ವರ್ಷಗಳಲ್ಲಿ ಇಲಾಖೆಯಿಂದ ನೀಡಿದ ಅನುದಾನವೆಷ್ಟು ? (ಜಿಲ್ಲಾವಾರು, ದೇವಸ್ಥಾನಗಳವಾರು ಮಾಹಿತಿ ನೀಡುವುದು)

# ವಸತಿ ರಹಿತ ಬುಡಕಟ್ಟು ಮತ್ತು ಬಡ ಕುಟುಂಬಗಳಿಗೆ ಆಶ್ರಯ ನೀಡುವ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) :–**

೯೩೭ (೧೦೬೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸ್ತುತ ರಾಜ್ಯದಲ್ಲಿರುವ ವಸತಿ ರಹಿತ ಕುಟುಂಬಗಳ ಸಂಖ್ಯೆ ಎಷ್ಟು ; ವಸತಿ ರಹಿತ ಕುಟುಂಬಗಳನ್ನು ಗುರುತಿಸಲು ಸರ್ಕಾರವು ನಿಗದಿಪಡಿಸಿರುವ ಮಾನದಂಡಗಳು ಯಾವುವು ; ವಸತಿ ರಹಿತರನ್ನು ಗುರುತಿಸಿ ಅವರಿಗೆ ಆಶ್ರಯ ಕಲ್ಪಿಸಿ ರಾಜ್ಯವನ್ನು ಗುಡಿಸಲು ಮುಕ್ತ ರಾಜ್ಯವನ್ನಾಗಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ವಸತಿ ರಹಿತ ಬಡ ಜನರಿಗೆ ವಸತಿ ಸೌಲಭ್ಯ ಕಲ್ಪಿಸಲು ಕಳೆದ ೨ ವರ್ಷದಲ್ಲಿ ಎಷ್ಟು ಮನೆಗಳನ್ನು ಹಂಚಲಾಗಿದೆ ಮತ್ತು ಜಿಲ್ಲೆಗೆ ಎಷ್ಟು ಮನೆಗಳ ಅನುಷ್ಠಾನದ ಗುರಿಯನ್ನು ನಿಗಧಿಪಡಿಸಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ವಸತಿ ರಹಿತ ಮತ್ತು ನಿವೇಶನ ರಹಿತ ಒಟ್ಟು ಎಷ್ಟು ಬುಡಕಟ್ಟು ಜನಾಂಗದ ಕುಟುಂಬಗಳಿವೆ ; (ತಾಲ್ಲೂಕುವಾರು ಮಾಹಿತಿ ನೀಡುವುದು) ಕಳೆದ ೨ ವರ್ಷದಲ್ಲಿ ಎಷ್ಟು ಬುಡಕಟ್ಟು ಕುಟುಂಬಗಳಿಗೆ ಮನೆಗಳನ್ನು ಹಂಚಲಾಗಿದೆ ; ಜಿಲ್ಲೆಯಲ್ಲಿ ಬಾಕಿ ಇರುವ ವಸತಿ ರಹಿತ ಬುಡಕಟ್ಟು ಜನಾಂಗದ ಕುಟುಂಬಗಳಿಗೆ ಆದ್ಯತೆಯ ಮೇರೆಗೆ ಆಶ್ರಯ ಕಲ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ? (ವಿವರ ನೀಡುವುದು)

# ಅರಣ್ಯ ಮತ್ತು ಅರಣ್ಯೇತರ ಪ್ರದೇಶದ ಹಳ್ಳಿಗಳನ್ನು ಕಂದಾಯ ಗ್ರಾಮವನ್ನಾಗಿ ಮಾಡುವ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) :–**

೯೩೮ (೧೦೬೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸ್ವಾತಂತ್ರ್ಯ ಪೂರ್ವದಿಂದಲೂ ಅರಣ್ಯ ಪ್ರದೇಶದಲ್ಲಿ ಮತ್ತು ಅರಣ್ಯೇತರ ಪ್ರದೇಶಗಳಲ್ಲಿ ವಾಸಿಸಿಕೊಂಡು ಬಂದಿರುವ ಹಳ್ಳಿಗಳಿಗೆ ಕಂದಾಯ ಗ್ರಾಮಗಳನ್ನಾಗಿ ಮಾಡಲು ಇರುವ ಮಾನದಂಡಗಳು ಯಾವುವು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಬೆಳಗಾವಿ ಖಾನಾಪೂರ ತಾಲ್ಲೂಕಿನ ಅರಣ್ಯ ಮತ್ತು ಅರಣ್ಯ ಪ್ರದೇಶದಲ್ಲಿ ಹೈನುಗಾರಿಕೆ ಮೂಲ ಕಸುಬನ್ನಾಗಿ ಮಾಡಿಕೊಂಡು ಬಂದಿರುವ ಧನಗರಗೌಳಿ ಸಮಾಜದ ಎಷ್ಟು ಹಳ್ಳಿಗಳಿವೆ ಮತ್ತು ಎಷ್ಟು ಹಳ್ಳಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಲಾಗಿದೆ ; (ವಿವರ ನೀಡುವುದು)

(ಇ) ಕಂದಾಯ ಗ್ರಾಮಗಳನ್ನಾಗಿ ಮಾಡದಿರುವುದರಿಂದ ಇಂದಿಗೂ ಕೂಡ ಅನೇಕ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವ ಸದರಿ ಹಾಡಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಲು ಸರ್ಕಾರದ ಮುಂದಿನ ಕ್ರಮಗಳೇನು ? (ವಿವರ ನೀಡುವುದು)

# ಖಾನಾಪುರ ತಾಲ್ಲೂಕಿನ ಜಿಲ್ಲಾ ಮುಖ್ಯ ರಸ್ತೆ ಕಾಮಗಾರಿ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) :–**

೯೩೯ (೧೦೬೩) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಖಾನಾಪುರದಿಂದ ಹಲಸಿ ಮಾರ್ಗವಾಗಿ ದಾಂಡೇಲಿಗೆ ಹೋಗುವ ಜಿಲ್ಲಾ ಮುಖ್ಯ ರಸ್ತೆಯು ತಾವರಗಟ್ಟಿ ಚೆಕ್ ಪೋಸ್ಟ್‌ನಿಂದ ಹುಂಬ್ರಾಪಾನಿ ಗ್ರಾಮದವರೆಗಿನ ಕೇವಲ ೨.೫ ಕಿ.ಮೀ ರಸ್ತೆಯು ಸಂಪೂರ್ಣವಾಗಿ ಹದಗೆಟ್ಟು ಹೋಗಿದ್ದು, ಮಾರ್ಚ್ ೨೦೨೫ ರಲ್ಲಿ ೪೦೦ ಮೀಟರ್ ಕಾಮಗಾರಿ ಮಾಡಲಾಗಿದ್ದು, ಹೊಸದಾಗಿ ಮಾಡಿದ್ದ ರಸ್ತೆ ಕೂಡ ಸಂಪೂರ್ಣವಾಗಿ ಹದಗೆಟ್ಟಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ; ಈ ಕಾಮಗಾರಿಗೆ ಬಿಡುಗಡೆಯಾದ ಅನುದಾನವೆಷ್ಟು ;

(ಆ) ಸದರಿ ಜಿಲ್ಲಾ ಮುಖ್ಯ ರಸ್ತೆಯ ಕೇವಲ ೨.೫ ಕಿ.ಮೀ ರಸ್ತೆಯನ್ನು ಆದ್ಯತೆಯ ಮೇರೆಗೆ ನಿರ್ಮಾಣ ಮಾಡಲು ಸರ್ಕಾರ ಅನುದಾನವನ್ನು ಒದಗಿಸುವುದೇ ; ಒದಗಿಸಿದ್ದಲ್ಲಿ, ಯಾವ ಕಾಲಮಿತಿಯೊಳಗೆ ರಸ್ತೆಯನ್ನು ನಿರ್ಮಾಣ ಮಾಡಬಹುದಾಗಿದೆ ?

## ಉತ್ತರ ಕನ್ನಡ ಜಿಲ್ಲೆಯ ಬಗರ್ ಹುಕುಂ ಅರ್ಜಿಗಳ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) :–**

೯೪೦ (೧೦೬೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಗರ್ ಹುಕುಂಗಾಗಿ ಭೂಮಿ ಪಡೆಯಲು ಇರುವ ಅರ್ಹತೆಗಳೇನು ;

(ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಬಗರ್ ಹುಕುಂಗಾಗಿ ಸಲ್ಲಿಸಿದ ಅರ್ಜಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಜಿಲ್ಲೆಯಲ್ಲಿ ಬಗರ್ ಹುಕುಂಗಾಗಿ ಸಲ್ಲಿಸಿದ ಅರ್ಜಿಗಳಲ್ಲಿ ಬಾಕಿ ಇರುವ ಅರ್ಜಿಗಳಿಗೆ ಜಮೀನು ಮಂಜೂರು ಮಾಡಲು ಕೈಗೊಂಡ ಕ್ರಮಗಳೇನು ;

(ಈ) ಜಿಲ್ಲೆಯಲ್ಲಿ ಬಗರ್ ಹುಕುಂಗಾಗಿ ಸಲ್ಲಿಸಿದ ಅರ್ಜಿಗಳಲ್ಲಿ ಭೂಮಿ ಮಂಜೂರು ಮಾಡಿದ ಫಲಾನುಭವಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಉ) ಜಿಲ್ಲೆಯಲ್ಲಿ ಬಗರ್ ಹುಕುಂಗಾಗಿ ಸಲ್ಲಿಸಿದ ಅರ್ಜಿಗಳಲ್ಲಿ ತಿರಸ್ಕೃತ ಅರ್ಜಿಗಳ ಸಂಖ್ಯೆ ಎಷ್ಟು ; ತಿರಸ್ಕೃತಕ್ಕೆ ಕಾರಣವೇನು ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಕೋಲಾರ ಜಿಲ್ಲೆಯ ಗ್ರಾಮಗಳನ್ನು ತಾಲ್ಲೂಕಿಗೆ ಸೇರ್ಪಡೆ ಮಾಡಿರುವ ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೯೪೧ (೧೦೩೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ ಜಿಲ್ಲೆಯಲ್ಲಿ ಕೆ.ಜಿ.ಎಫ್. ತಾಲ್ಲೂಕನ್ನು ಹೊಸದಾಗಿ ರಚಿಸಿದ್ದು ಯಾವಾಗ ; ಈ ಹೊಸ ತಾಲ್ಲೂಕಿಗೆ ಸೇರಿಸಿರುವ ಗ್ರಾಮ/ಹೋಬಳಿಗಳ ಸಂಖ್ಯೆ ಎಷ್ಟು ;

(ಆ) ಘಟ್ಟು ಕಾಮನಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ ೦೮ ಗ್ರಾಮಗಳ ನಾಗರಿಕರು ಸಾರ್ವಜನಿಕ ಕೆಲಸ-ಕಾರ್ಯಗಳಿಗೆ ಕೆ.ಜಿ.ಎಫ್ ತಾಲ್ಲೂಕಿಗೆ ಹೋಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ;

(ಇ) ಸದರಿ ಗ್ರಾಮಗಳನ್ನು ಕೆ.ಜಿ.ಎಫ್ ತಾಲ್ಲೂಕಿಗೆ ಸೇರಿಸಲು ಸರ್ಕಾರದ ನಿಲುವುಗಳೇನು ;

(ಈ) ಈ ಗ್ರಾಮಗಳು ಯಾವ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುತ್ತದೆ ಹಾಗೂ ಈ ಗ್ರಾಮಗಳ ಅಭಿವೃದ್ಧಿಗಾಗಿ ಇದುವರೆವಿಗೂ ಎಷ್ಟು ಅನುದಾನ ಬಿಡುಗಡೆಯಾಗಿದೆ ; ಯಾವ-ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ? (ಮಾಹಿತಿ ನೀಡುವುದು)

## ರಾಜ್ಯದಲ್ಲಿ ಅರಣ್ಯ ಭೂಮಿಯಲ್ಲಿ ರೆವಿನ್ಯೂ ದಾಖಲಾತಿ ಹೊಂದಿರುವ ಜಮೀನು ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :-**

೯೪೨ (೧೦೩೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕಂದಾಯ ಇಲಾಖೆಯಿಂದ ಹಂಚಿಕೆ ಮಾಡಿರುವ ಅರಣ್ಯ ಜಮೀನು ಎಷ್ಟು ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಅರಣ್ಯ ಭೂಮಿಯಲ್ಲಿ ರೆವಿನ್ಯೂ ದಾಖಲಾತಿ ಹೊಂದಿರುವ ರೈತರಿಗೆ ಭೂಮಿ ಹಂಚಿಕೆ ಮಾಡಲಾಗಿದೆಯೇ ; ಎಷ್ಟು ಭೂಮಿಯನ್ನು ಹಂಚಿಕೆ ಮಾಡಲಾಗಿದೆ ;

(ಇ) ರೆವಿನ್ಯೂ ಇಲಾಖೆಯಿಂದ ಅರಣ್ಯ ಇಲಾಖೆಗೆ ಹಸ್ತಾಂತರಿಸಿದ ಜಮೀನಿನಲ್ಲಿ ರೈತರಿಗೆ ನೀಡಿರುವ ಜಮೀನು ಎಷ್ಟು ; ಅವರಿಗೆ ಹಕ್ಕು ಪತ್ರ ನೀಡಲಾಗಿದೆಯೇ ? (ಪೂರ್ಣ ಮಾಹಿತಿಯನ್ನು ನೀಡುವುದು)

## ಪಶುಸಂಗೋಪನೆ ಇಲಾಖೆಯಲ್ಲಿ ಭರ್ತಿ ಮಾಡಲಾಗಿರುವ ಹುದ್ದೆಗಳ ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೯೪೩ (೧೦೩೬) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪಶುಸಂಗೋಪನೆ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು ; ಭರ್ತಿ ಮಾಡಿದ ಹುದ್ದೆಗಳ ಸಂಖ್ಯೆ ಎಷ್ಟು ; ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು ; (ಹುದ್ದೆವಾರು/ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದ ಪಶು ವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ ಎಷ್ಟು ; ಎಲ್ಲಾ ಪಶು ಆಸ್ಪತ್ರೆಗಳಲ್ಲಿ ವೈದ್ಯರು ಲಭ್ಯವಿದ್ದಾರೆಯೇ ; ಪಶು ವೈದ್ಯರು ಇಲ್ಲದೇ ಇರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು ;

(ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ; ಮುಖ್ಯವಾಗಿ ಪಶು ವೈದ್ಯರು ಇಲ್ಲದೇ ಇದ್ದಲ್ಲಿ, ಪ್ರಾಣಿಗಳ ಆರೋಗ್ಯ ಕ್ಷೇಮವು ಸಾಧ್ಯವೇ ;

(ಈ) ಪಶು ವೈದ್ಯರು ಖಾಲಿ ಇರುವ ತಾಲ್ಲೂಕು ಪಶು ವೈದ್ಯಕೀಯ ಆಸ್ಪತ್ರೆಗಳಲ್ಲಿ ಯಾರು ಕಾರ್ಯನಿರ್ವಹಿಸುತ್ತಿದ್ದಾರೆ ; ಯಾವುದೇ ಪಶು ವೈದ್ಯರು ಇಲ್ಲದೇ ಇದ್ದಲ್ಲಿ, ಪ್ರಾಣಿಗಳನ್ನು ರಕ್ಷಿಸುವುದು ಹೇಗೆ ; ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?

## ರಾಜ್ಯದಲ್ಲಿ ಪೂರ್ಣಗೊಂಡಿರುವ ಪೋಡಿ ಮುಕ್ತ ಗ್ರಾಮಗಳ ಬಗ್ಗೆ ಮಾಹಿತಿ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೯೪೪ (೧೦೩೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇದುವರೆಗೂ ಪೂರ್ಣಗೊಂಡಿರುವ ಪೋಡಿ ಮುಕ್ತ ಗ್ರಾಮಗಳ ಸಂಖ್ಯೆ ಎಷ್ಟು ;

(ಆ) ತುಮಕೂರು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಎಷ್ಟು ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮ ಎಂದು ಘೋಷಿಸಲಾಗಿದೆ ; ಬಾಕಿಯಿರುವ ಗ್ರಾಮಗಳ ಸಂಖ್ಯೆ ಎಷ್ಟು ;

(ಇ) ಬಾಕಿಯಿರುವ ಗ್ರಾಮಗಳಲ್ಲಿ ರೈತರು ಅರ್ಜಿ ಸಲ್ಲಿಸಿದ್ದರೂ ಸಹ ಪೋಡಿ ಕಾರ್ಯಗಳನ್ನು ಕೈಗೊಳ್ಳದಿರಲು ಕಾರಣಗಳೇನು ;

(ಈ) ಈ ಜಿಲ್ಲೆಗಳಲ್ಲಿ ಪೋಡಿ ಕಾರ್ಯವನ್ನು ಪೂರ್ಣಗೊಳಿಸಲು ಸಮಯ ನಿಗಧಿ ಪಡಿಸಲಾಗಿದೆಯೇ ; ನಿಗಧಿತ ಸಮಯದಲ್ಲಿ ಪೋಡಿ ಕಾರ್ಯವನ್ನು ಪೂರ್ಣಗೊಳಿಸದಿರುವ ಅಧಿಕಾರಿಗಳ ವಿರುದ್ಧ ಸರ್ಕಾರದ ಕ್ರಮಗಳೇನು ?

## ವಿಜಯಪುರ ಜಿಲ್ಲೆಯಲ್ಲಿ ರಾಜ್ಯ ನಿರ್ಮಿತಿ ಕೇಂದ್ರದ ವತಿಯಿಂದ ಅನುಷ್ಠಾನಗೊಂಡಿರುವ ಕಾಮಗಾರಿಗಳ ಕುರಿತು

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) :–**

೯೪೫ (೯೫೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಿಂದ ರಾಜ್ಯ ನಿರ್ಮಿತಿ ಕೇಂದ್ರ ವತಿಯಿಂದ ವಿಜಯಪುರ ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಯಾವ ಯಾವ ಇಲಾಖೆಗಳು ಯಾವ ಯಾವ ಕಾಮಗಾರಿಗಳನ್ನು ಅನುಷ್ಠಾನ ಮಾಡುವಂತೆ ಅನುಮತಿ ನೀಡಿ ಆದೇಶ ಹೊರಡಿಸಿರುತ್ತವೆ ; (ಇಲಾಖೆಗಳು ಅನುಮತಿ ನೀಡಿದ ಕಾಮಗಾರಿಗಳ ಆದೇಶದ ಪ್ರತಿಗಳ ವಿವರ ನೀಡುವುದು)

(ಆ) ಅನುಮತಿ ನೀಡಿ ಕೈಗೊಳ್ಳಲಾದ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು ; ಬಿಡುಗಡೆಯಾದ ಅನುದಾನ ಪೈಕಿ ಬಳಕೆಯಾದ ಮೊತ್ತ ಎಷ್ಟು ;

(ಇ) ಹಾಗಿದ್ದಲ್ಲಿ, ಬಾಕಿ ಉಳಿದಿರುವ ಮೊತ್ತ ಎಷ್ಟು ; ಬಿಡುಗಡೆ ಮಾಡಬೇಕಾಗಿರುವ ಬಾಕಿ ಅನುದಾನವೆಷ್ಟು ;

(ಈ) ಕಳೆದ ಎರಡು ವರ್ಷಗಳಿಂದ ಕೈಗೂಡಿರುವ ಎಲ್ಲ ಕಾಮಗಾರಿಗಳ ಪ್ರಗತಿ ವಿವರಗಳೇನು ? (ಸದರಿ ಕಾಮಗಾರಿಗಳ ದೃಢೀಕೃತ ಅಂದಾಜು ಪಟ್ಟಿಯ ಪ್ರತಿಯೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

## ಕಲಬುರಗಿ ಜಿಲ್ಲೆಯ ಚಿತ್ತಾಪುರ ಪಟ್ಟಣದ ನಾಗಾವಿ ಹತ್ತಿರ ನಿರ್ಮಿಸಿದ ಮನೆಗಳು ಹಂಚಿಕೆಯಾಗದಿರುವ ಕುರಿತು

**ಡಾ॥ ತಾಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) :–**

೯೪೬ (೧೦೦೯) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯ ಚಿತ್ತಾಪುರ ಪಟ್ಟಣದ ನಾಗಾವಿ ಹತ್ತಿರ ಕೊಳಗೇರಿ ಪ್ರದೇಶದ ಬಡವರಿಗಾಗಿ ರೂ.೫೮ ಕೋಟಿ ವೆಚ್ಚದಲ್ಲಿ ೧೦೦೦ ಮನೆಗಳು ನಿರ್ಮಾಣವಾಗಿ ಎರಡು ವರ್ಷ ಕಳೆದರೂ ಇನ್ನೂ ಹಂಚಿಕೆ ಮಾಡದಿರಲು ಕಾರಣಗಳೇನು ;

(ಆ) ೭–೮ ವರ್ಷಗಳ ಹಿಂದೆ ರೂ.೫೦–೭೫ ಸಾವಿರ ವಂತಿಗೆ ಹಣ ಕಟ್ಟಿದ ದಲಿತ ಮತ್ತು ಹಿಂದುಳಿದ ಕುಟುಂಬಗಳು ಕಾಯುತ್ತಿರುವುದಕ್ಕೆ ಪರಿಹಾರ ನೀಡಲಾಗುವುದೇ ;

(ಇ) ೧೦೦೦ ಮನೆಗಳು ನಿರ್ಮಾಣವಾಗಿದ್ದರೂ ಅದಕ್ಕೆ ಬೇಕಾದ ಮೂಲಭೂತ ಸೌಕರ್ಯ ಆಮೆಗತಿಯಲ್ಲಿ ನಡೆಯುತ್ತಿರುವುದರಿಂದ ಮನೆಗಳು ಈಗಾಗಲೇ ಬಿರುಕು ಬಿಟ್ಟಿದ್ದು ಮದ್ಯಪಾನ/ಜೂಜಾಟ ಮುಂತಾದ ಅನೈತಿಕ ಚಟುವಟಿಕೆಗಳು ನಡೆಯುತ್ತಿದ್ದರು ಸರ್ಕಾರ ಮನೆಗಳನ್ನು ಹಂಚಿಕೆ ಮಾಡದಿರಲು ಕಾರಣವೇನು ;

(ಈ) ಚುನಾವಣೆ ಹತ್ತಿರ ಬಂದಾಗ ಸ್ಥಳೀಯ ಜನಪ್ರತಿನಿಧಿಗಳು ೧೦೦೦ ಮನೆಗಳನ್ನು ಕಟ್ಟಿದ್ದೇವೆ ಎಂದು ರಾಜಕೀಯಕ್ಕಾಗಿ ಬಳಸಿಕೊಂಡು ಬಡವರಿಗೆ ಮೋಸ ಮಾಡುತ್ತಿರುವುದು ಸರಿಯೇ ;

(ಉ) ಮೂಲಭೂತ ಸೌಕರ್ಯಗಳ ಕಾಮಗಾರಿಗಳನ್ನು ತಕ್ಷಣವೇ ಮುಗಿಸಿ ೭–೮ ವರ್ಷಗಳಿಂದ ಮನೆಗಳಿಗಾಗಿ ಕಾಯುತ್ತಿರುವ ಬಡವರಿಗೆ ಮನೆಗಳನ್ನು ಹಂಚಿಕೆ ಮಾಡಲು ಸರ್ಕಾರ ಕ್ರಮಕೈಗೊಳ್ಳುವುದೇ ?

## ರಾಜ್ಯದ ಖೇಣಿ ಮತ್ತು ಟೋಂಕ ಬಂದರು ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೪೭ (೯೮೧) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಖೇಣಿ ಮತ್ತು ಕಾಸರಗೋಡಿನ ಬಂದರಿನ ಉದ್ದೇಶವೇನು ; (ವಿವರ ಒದಗಿಸುವುದು)

(ಆ) ಭೂಮಿ, ಮನೆ ಕಳೆದುಕೊಳ್ಳುವ ಪ್ರತಿ ಕುಟುಂಬದ ಸದಸ್ಯರಿಗೆ ಒಂದು ಸರ್ಕಾರಿ ಉದ್ಯೋಗ ಹಾಗೂ ಪುನರ್ವಸತಿ ಕಾರ್ಯ ಕೈಗೊಳ್ಳಲು ಸರ್ಕಾರ ಮುಂದಾಗುವುದೇ ;

(ಇ) ಈ ಯೋಜನೆ ಕೈಬಿಡಲು ಸರ್ಕಾರ ಮುಂದಾಗುವುದೇ ; ಈ ಎರಡೂ ಬಂದರಿನ ಕಾರ್ಯ ವಿರೋಧಿಸಿ ಹೋರಾಟ ಮಾಡಿದ ಎಷ್ಟು ಮೀನುಗಾರರನ್ನು ಬಂಧಿಸಲಾಗಿದೆ ; ಎಷ್ಟು ಜನರ ಮೇಲೆ ಪ್ರಕರಣ ದಾಖಲು ಮಾಡಲಾಗಿದೆ ; (ಹೆಸರು ಸಮೇತ ವಿವರ ಒದಗಿಸುವುದು)

(ಈ) ಈ ಎಲ್ಲಾ ಪ್ರಕರಣಗಳನ್ನು ಕೈಬಿಡಲು ಸರ್ಕಾರ ಮುಂದಾಗುವುದೇ ; ಈ ಮೀನುಗಾರರ ಬೇಡಿಕೆಗೆ ಸರ್ಕಾರ ಯಾವ ರೀತಿಯಾಗಿ ಸ್ಪಂದಿಸಲಿದೆ ? (ವಿವರ ನೀಡುವುದು)

## ಸಾಂಪ್ರದಾಯಿಕ ಮೀನುಗಾರರಿಗೆ ನೆರವು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೪೮ (೯೮೩) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾಂಪ್ರದಾಯಿಕ ಮೀನುಗಾರರು ತಮ್ಮ ಹಡಗುಗಳನ್ನು ಆಳ ಸಮುದ್ರ ಮೀನುಗಾರಿಕೆ ದೋಣಿಗಳಾಗಿ ಪರಿವರ್ತಿಸಲು ಸರ್ಕಾರವು ಆರ್ಥಿಕ ನೆರವು ನೀಡುತ್ತಿದೆಯೇ ;

(ಆ) ಕಳೆದ ಮೂರು ವರ್ಷಗಳಲ್ಲಿ ಈ ಆರ್ಥಿಕ ಸಹಾಯವನ್ನು ಪಡೆದ ಮೀನುಗಾರರ ಸಂಖ್ಯೆ ಎಷ್ಟು ;

(ಇ) ಮೀನುಗಾರಿಕೆಯನ್ನು ಹೆಚ್ಚಿಸಲು ಅಸ್ತಿತ್ವದಲ್ಲಿರುವ ದೋಣಿಗಳನ್ನು ಆಳ ಸಮುದ್ರ ಮೀನುಗಾರಿಕೆ ದೋಣಿಗಳಾಗಿ ಬದಲಾಯಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಕಲ್ಯಾಣ ಕರ್ನಾಟಕಕ್ಕೆ ಇ–ಬಸ್ ಹಂಚಿಕೆ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೪೯ (೯೮೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ (ಕೆಕೆಆರ್‌ಟಿಸಿ) ಕೇಂದ್ರ ಸರ್ಕಾರವು ಪಿ.ಎ.ಎಂ.ಇ. ಸೇವಾ ಯೋಜನೆಯಡಿ ಎಷ್ಟು ಇ–ಬಸ್ ಗಳನ್ನು ಮಂಜೂರು ಮಾಡಿದೆ ;

(ಆ) ಈ ಇ–ಬಸ್ಸುಗಳನ್ನು ಈ ಜಿಲ್ಲೆಗಳ ಯಾವ ಯಾವ ನಗರ ಪ್ರದೇಶಗಳಿಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು ;

(ಇ) ಈ ಭಾಗದಲ್ಲಿ ಕೊರತೆ ಇರುವ ಬಸ್ಸುಗಳ ಸಂಖ್ಯೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಅರ್ಚಕರಿಗೆ ವೇತನ ಪಾವತಿಯಲ್ಲಿ ತಾರತಮ್ಯ ಕುರಿತು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೫೦ (೯೮೫) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಎ ಮತ್ತು ಬಿ ದರ್ಜೆಯ ದೇವಸ್ಥಾನಗಳ ಸಂಖ್ಯೆ ಎಷ್ಟು ; ಈ ದೇವಸ್ಥಾನಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ ;

(ಆ) ಈ ದೇವಸ್ಥಾನಗಳ ಅರ್ಚಕರಿಗೆ ವೇತನ ಪಾವತಿಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ವೇತನ ತಾರತಮ್ಯ ಹೋಗಲಾಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದೇ ?

## ರಾಜ್ಯದಲ್ಲಿ ಮೀನು ಉತ್ಪಾದನೆಯಾಗುತ್ತಿರುವ ಕುರಿತು

**ಡಾ|| ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೯೫೧ (೯೯೭) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮೀನುಗಾರಿಕಾ ವಲಯದಿಂದ ಎಷ್ಟು ಮೀನುಗಾರಿಕಾ ಉದ್ಯೋಗ ಸೃಷ್ಟಿಯಾಗಿವೆ ;

(ಆ) ೨೦೨೨–೨೩, ೨೦೨೩–೨೪, ೨೦೨೪–೨೫ನೇ ಸಾಲಿನಲ್ಲಿ ಎಷ್ಟು ಮೀನು ಉತ್ಪಾದನೆಯಾಗಿದೆ ;

(ಇ) ಕರಾವಳಿ ಹಾಗೂ ಒಳನಾಡಿನಲ್ಲಿ ಮೀನುಗಾರರು ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆಯೇ ; ಕರಾವಳಿ ಹಾಗೂ ಒಳನಾಡಿನ ಮೀನು ಉತ್ಪಾದನೆ ಪ್ರಮಾಣ ಎಷ್ಟು ;

(ಈ) ಮೀನು ಉತ್ಪಾದನೆಯಲ್ಲಿ ರಾಜ್ಯವು ಯಾವ ಸ್ಥಾನದಲ್ಲಿದೆ ; ಮೀನು ಉತ್ಪಾದಕರಿಗೆ ಹಾಗೂ ಮೀನು ಉತ್ಪಾದನಾ ಸಂಸ್ಥೆಗಳಿಗೆ ಸರ್ಕಾರ ಯಾವ ರೀತಿ ಪ್ರೋತ್ಸಾಹ ನೀಡುತ್ತಿದೆ ?

## ರಾಜ್ಯದಲ್ಲಿರುವ ಹಾಲು ಉತ್ಪಾದಕರ ಹಾಗೂ ಹಾಲು ಪೂರೈಕೆ ಕುರಿತು

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೯೫೨ (೯೯೮) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಜನ ನೋಂದಾಯಿತ ಹಾಲು ಉತ್ಪಾದಕರಿದ್ದಾರೆ ; ಪ್ರತಿ ದಿನ ಎಷ್ಟು ಹಾಲು ಸಂಗ್ರಹವಾಗುತ್ತದೆ ;

(ಆ) ಅತೀ ಹೆಚ್ಚು ಹಾಲು ಕೊಡುವ ಹಸುವಿನ ತಳಿಗಳು ಯಾವುವು ; ಕೆ.ಎಂ.ಎಫ್. ಗೆ ಬರುವ ಹಾಲು ಹಸುವಿನ ಹಾಲೇ ಅಥವಾ ಎಮ್ಮೆ ಮತ್ತು ಹಸು ಹಾಲು ಎರಡೂ ಮಿಶ್ರಣವೇ ;

(ಇ) ನಂದಿನಿ ಬ್ರಾಂಡ್ ಉತ್ಪನ್ನಗಳು ಯಾವುವು ; ಈ ಉತ್ಪನ್ನಗಳಿಗೆ ಹೊರ ರಾಜ್ಯದಲ್ಲಿಯೂ ಸಹ ಬೇಡಿಕೆ ಇದೆಯೇ ; ಈ ಹಾಲು ಬೇರೆ ರಾಜ್ಯಗಳಲ್ಲೂ ಮಾರಾಟವಾಗುತ್ತಿದೆಯೇ ;

(ಈ) ನಂದಿನಿ ಹಾಲನ್ನು ರಾಜ್ಯದ ಸರ್ಕಾರಿ ವಿದ್ಯಾರ್ಥಿ ನಿಲಯಗಳಿಗೆ ಪೂರೈಕೆ ಮಾಡಲಾಗುತ್ತಿದೆಯೇ ; ಯಾವ ಇಲಾಖೆಯ ವಿದ್ಯಾರ್ಥಿ ನಿಲಯಗಳು ನಂದಿನಿ ಹಾಲು ಬಳಸುತ್ತಿವೆ ?

## ರಾಜ್ಯದಲ್ಲಿ ಜಾನುವಾರು ಗಣತಿ ಕುರಿತು

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೯೫೩ (೯೯೯) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಜಾನುವಾರು ಗಣತಿ ನಡೆದಿದೆಯೇ ; ಇದು ಎಷ್ಟನೇ ಗಣತಿ ; ಕುರಿ, ಕೋಳಿ, ಮೇಕೆ, ಎಮ್ಮೆ, ಹಸು, ಹಂದಿ ಇತ್ಯಾದಿ ; (ಜಾನುವಾರು ಗಣತಿಯ ವಿವರ ನೀಡುವುದು)

(ಆ) ರಾಜ್ಯದಲ್ಲಿ ದೇಸಿಯ ಹೆಣ್ಣು ಹಸುಗಳು ಎಷ್ಟಿವೆ ; ಅತಿ ಹೆಚ್ಚು ಹಾಲು ಉತ್ಪಾದನೆಗೆ ದೇಸಿಯ ಹಸುಗಳು ಯೋಗ್ಯವೇ ; ದೇಸಿಯ ಹಸುಗಳಿಗೆ ಕೃತಕ ಗರ್ಭದಾರಣೆ ಮಾಡಲಾಗುತ್ತಿದೆಯೇ ; ಇದರಿಂದಾಗುವ ಪ್ರಯೋಜನಗಳೇನು ;

(ಇ) ಮಿಶ್ರತಳಿಗಳಿಂದ ಮೂಲ ದೇಸಿಯ ತಳಿಗಳು ನಾಶವಾಗುವುದಿಲ್ಲವೇ ; ಮೂಲ ತಳಿ ಉಳಿವಿಗಾಗಿ ಕೈಗೊಂಡ ಕ್ರಮವೇನು ?

## ಪ್ರಯಾಣಿಕರಿಂದ ನಿಗದಿತ ಟಿಕೆಟ್ ದರಕ್ಕಿಂತ ಹೆಚ್ಚುವರಿ ವಸೂಲಿ ಮಾಡುತ್ತಿರುವ ಬಗ್ಗೆ

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೯೫೪ (೧೦೦೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಗಳೂರು ಭಾಗದ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಪ್ರಯಾಣ ಮಾಡುವ ಪ್ರಯಾಣಿಕರಿಂದ ನಿಗಧಿತ ಟಿಕೆಟ್ ದರಕ್ಕಿಂತ ಹೆಚ್ಚುವರಿಯಗಿ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಡಿಜಿಟಲ್ ಪೇಮೆಂಟ್ ಮಾದರಿ ಯಾವಾಗಿನಿಂದ ಜಾರಿಯಾಗಿದೆ ; ಟಿಕೆಟ್‌ಗಾಗಿ ಡಿಜಿಟಲ್ ಪೇಮೆಂಟ್ ಮಾಡದೆ ನಗದು ಪಾವತಿ ಮಾಡುವ ಪ್ರಯಾಣಿಕರಿಗೆ ಹೆಚ್ಚುವರಿ ಹಣ ವಸೂಲಿಯಿಂದ ತೊಂದರೆಯಾಗಿದೆ ಎಂಬ ದೂರುಗಳು ಬಂದಿದೆಯೇ ;

(ಇ) ಟಿಕೆಟ್‌ನಲ್ಲಿ ನಿಗಧಿಪಡಿಸಿರುವ ದರಕ್ಕಿಂತ ಹೆಚ್ಚು ದರ ಪಡೆಯಲು ಸರ್ಕಾರದಿಂದ ಸೂಚನೆ ಅಥವಾ ಆದೇಶ ಮಾಡಲಾಗಿದೆಯೇ ; ಹಾಗಿದ್ದಲ್ಲಿ, ಯಾವ ಕಾರಣಕ್ಕೆ ಇಂತಹ ಆದೇಶ ಮಾಡಲಾಗಿದೆ ?

## ಕೆ.ಆರ್.ಐ.ಡಿ.ಎಲ್.ನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಗುತ್ತಿಗೆದಾರರ ಖಾತೆಗೆ ಹಣ ಜಮೆಯಾಗಿರುವ ಬಗ್ಗೆ

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೯೫೫ (೧೦೦೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆ.ಆರ್.ಐ.ಡಿ.ಎಲ್. ನಲ್ಲಿ ಕಾಮಗಾರಿ ಆದೇಶ ಇಲ್ಲದಿದ್ದರೂ ಹಾಗೂ ಅಧಿಕೃತವಾಗಿ ಅನುದಾನ ಬಿಡುಗಡೆಯಾಗದಿದ್ದರೂ ನಕಲಿ ದಾಖಲೆ ಸೃಷ್ಟಿಸಿ ಗುತ್ತಿಗೆದಾರರ ಖಾತೆಗೆ ಹಣ ಜಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದುವರೆಗೂ ಎಷ್ಟು ಹಣ ಜಮೆಯಾಗಿದೆ ; (ವಿವರ ನೀಡುವುದು) ಈ ರೀತಿ ನಿಯಮಬಾಹಿರವಾಗಿ ಗುತ್ತಿಗೆದಾರರ ಖಾತೆಗೆ ಜಮೆ ಮಾಡಿರುವವರ ಮೇಲೆ ಯಾವ ರೀತಿ ಕ್ರಮಕೈಗೊಳ್ಳಲಾಗಿದೆ ;

(ಆ) ನಕಲಿ ದಾಖಲೆ ಸೃಷ್ಟಿಸಿದ ಗುತ್ತಿಗೆದಾರರ ಮೇಲೆ ಸರ್ಕಾರ ಯಾವ ರೀತಿ ಕ್ರಮಕೈಗೊಂಡಿದೆ ; ಸರ್ಕಾರಕ್ಕೆ ಆರ್ಥಿಕ ವಂಚನೆ ಮಾಡಿರುವ ಗುತ್ತಿಗೆದಾರರ ಲೈಸನ್ಸ್ ರದ್ದು ಮಾಡಲಾಗಿದೆಯೇ ; ಮಾಡಿದ್ದಲ್ಲಿ, ಎಷ್ಟು ಲೈಸನ್ಸ್ ರದ್ದು ಮಾಡಲಾಗಿದೆ ; ಇವರ ಮೇಲೆ ಎಫ್.ಐ.ಆರ್. ದಾಖಲು ಮಾಡಲಾಗಿದೆಯೇ ; ಇವರ ಖಾತೆಗೆ ಜಮೆಯಾಗಿರುವ ಹಣ ಹಿಂಪಡೆಯಲಾಗಿದೆಯೇ ?

## ಟಿ. ನರಸೀಪುರ ಮತ್ತು ಕಡಕೋಳ ಪಂಚಾಯಿತಿಗೆ ಮನೆ ಮಂಜೂರು ಮಾಡುವ ಕುರಿತು

**ಡಾ. ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೯೫೬ (೯೬೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಟಿ.ನರಸೀಪುರ ಪುರಸಭೆ ಮತ್ತು ಕಡಕೋಳ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಹೆಚ್ಚು ವಸತಿ ರಹಿತರು ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ೨೦೧೯–೨೦ನೇ ಸಾಲಿನಿಂದ ಪ್ರಸ್ತುತದವರೆಗೆ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ ; (ವರ್ಷವಾರು ವಿವರ ಒದಗಿಸುವುದು)

(ಇ) ೨೦೨೫–೨೬ನೇ ಸಾಲಿನಲ್ಲಿ ಸದರಿ ವಸತಿ ರಹಿತರಿಗೆ ಮನೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಹಂತದಲ್ಲಿದೆಯೇ ? (ಇದ್ದಲ್ಲಿ ವಿವರ ಒದಗಿಸುವುದು)

## ಟೆಂಡರ್‌ನಲ್ಲಿ ಭಾಗವಹಿಸಲು ಪ್ರತ್ಯೇಕ ಜಾತಿ ಪ್ರಮಾಣ ಪತ್ರ ನೀಡುವ ಕುರಿತು

**ಡಾ. ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೯೫೭ (೯೬೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಿಂದುಳಿದ ವರ್ಗಗಳ ಪ್ರವರ್ಗ –೧ ಮತ್ತು ೨ಎ ಸಮುದಾಯಗಳಿಗೆ ಸಿವಿಲ್ ಗುತ್ತಿಗೆ ಕಾಮಗಾರಿಗಳಲ್ಲಿ ರೂ.೧.೦೦ ಕೋಟಿಯವರೆಗೆ ಮೀಸಲಾತಿ ನೀಡಿ ಸರ್ಕಾರದ ಆದೇಶವನ್ನು ಹೊರಡಿಸಲಾಗಿದ್ದು ಸದರಿ ಪ್ರವರ್ಗಗಳಿಗೆ ಗುತ್ತಿಗೆಯಲ್ಲಿ ಮೀಸಲಾತಿಯುನ್ನು ಪಡೆಯುಲು ಆದಾಯುದ ಮಿತಿ ಇರುವುದಿಲ್ಲದಿರುವುದು ನಿಜವೇ ;

(ಆ) ಈ ಪ್ರವರ್ಗಗಳ ಜನರು ಕಂದಾಯ ಇಲಾಖೆಯ ತಹಶೀಲ್ದಾರ್ ಕಛೇರಿಗೆ ಭೇಟಿ ನೀಡಿ ಕೇವಲ ಜಾತಿಯನ್ನು ನಮೂದಿಸಿ ಪ್ರವರ್ಗ–೧ ಮತ್ತು ೨ಎ ಗೆ ಜಾತಿ ಪ್ರಮಾಣ ಪತ್ರವನ್ನು ಕೊಡುವಂತೆ ಮನವಿ ಮಾಡಿದಾಗ ತಹಶೀಲ್ದಾರ್ ಕಛೇರಿಗಳಲ್ಲಿ ಆದಾಯವನ್ನು ನಮೂದಿಸದೆ ಕೇವಲ ಜಾತಿ ಪ್ರಮಾಣ ಪತ್ರವನ್ನು ಸದರಿ ವರ್ಗಗಳಿಗೆ ಕೊಡಲು ಸಾಧ್ಯವಿಲ್ಲವೆಂದು ತಿಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಸದರಿ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ಒದಗಿಸುವುದು)

## ಕಂದಾಯ ಜಮೀನುಗಳ ಬೀಳು ರಿಸ್ಟೋರ್ ಮಾಡುವ ಕುರಿತು

**ಡಾ. ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೯೫೮ (೯೬೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಂದಾಯ ಜಮೀನುಗಳ ಬಿಲ್ಲು ರಿಸ್ಟೋರ್ ಮಾಡಿಕೊಳ್ಳಲು ೨೦೧೪ ರಲ್ಲಿ ಸರ್ಕಾರ ಆದೇಶ ಹೊರಡಿಸಿದ್ದು, ಇನ್ನೂ ಬಹಳಷ್ಟು ರೈತರು ಅರ್ಜಿ ಸಲ್ಲಿಸಲು ಸಾಧ್ಯವಾಗದೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸದರಿ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ಒದಗಿಸುವುದು)

## ಯೋಜನೆಗಳ ಮಾಹಿತಿ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೫೯ (೯೯೦) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆ ಗ್ರಾಮೀಣ ಭಾಗದಲ್ಲಿ ಕೃಷಿ ಮೀನುಗಾರಿಕೆಯಲ್ಲಿ ತೊಡಗಿರುವವರ ಸಂಖ್ಯೆ ಎಷ್ಟು ; (ಮಾಹಿತಿ ನೀಡುವುದು)

(ಆ) ಮೀನು ಕೃಷಿ ಯೋಜನೆಗಳಿಗಾಗಿ ಯಾವ ಯಾವ ರೀತಿಯ ಪ್ರೋತ್ಸಾಹದಾಯಕ ಯೋಜನೆಗಳನ್ನು ಸರ್ಕಾರ ರೂಪಿಸಿದೆ ? (ಮಾಹಿತಿ ನೀಡುವುದು)

## ರಸ್ತೆ ಕಾಮಗಾರಿ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೬೦ (೯೯೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ತಾಲ್ಲೂಕಿನ ಚಿಟ್ಟಾದಿಂದ ಘೋಡಂಪಳ್ಳಿಗೆ ಸಂಚರಿಸುವ ರಸ್ತೆ ತುಂಬಾ ಹಾಳಾಗಿದ್ದು ದಿನನಿತ್ಯ ಸಂಚರಿಸುವ ಜನರು ರಾತ್ರಿ ವೇಳೆಯಲ್ಲಿ ಸಾಕಷ್ಟು ಬಿದ್ದು ಗಾಯಗೊಂಡಿರುವುದು ಮತ್ತು ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿರುವ ಬಗ್ಗೆ ಕಳೆದ ಎರಡು ವರ್ಷಗಳಿಂದ ಸ್ಥಳೀಯರು ಪ್ರತಿಭಟನೆ, ಮನವಿ ಸಲ್ಲಿಸಿದರೂ ಇಲ್ಲಿಯವರೆಗೆ ಯಾವುದೇ ರಸ್ತೆ ಕಾಮಗಾರಿ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ;

(ಆ) ಸರ್ಕಾರವು ಈ ರಸ್ತೆ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಕೈಗೊಳ್ಳುವುದು ? (ಮಾಹಿತಿ ನೀಡುವುದು)

## ಮನೆಗಳ ಹಂಚಿಕೆ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೬೧ (೯೯೨) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷದಲ್ಲಿ ವಿವಿಧ ನಿಗಮಗಳ ಅಡಿಯಲ್ಲಿ ಹಂಚಿಕೆಯಾದ ಮನೆಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಪಾರದರ್ಶಕವಾಗಿ ಮನೆಗಳ ಹಂಚಿಕೆ ಮಾಡುವಲ್ಲಿ ಸರ್ಕಾರ ಯಾವ ಯಾವ ಮಾನದಂಡ ಅನುಸರಿಸುತ್ತಿದೆ ? (ಮಾಹಿತಿ ನೀಡುವುದು)

## ದೃಢೀಕರಣ ಪತ್ರ ನೀಡುವಲ್ಲಿ ನಿಯಮ ಉಲ್ಲಂಘನೆಯಾಗಿರುವ ಕುರಿತು

**ಡಾ॥ ಚಂದ್ರಶೇಖರ ಬಸವರಾಜ ಪಾಟೀಲ (ಪದವೀಧರರ ಕ್ಷೇತ್ರ) :–**

೯೭೨ (೯೪೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸುಳ್ಳು ದಾಖಲೆಗಳನ್ನು ಪಡೆದುಕೊಂಡು ನೈಜತೆಯನ್ನು ಪರಿಶೀಲಿಸದೆ ಹೆಗ್ಗಡದೇವನಕೋಟೆ ತಹಶೀಲ್ದಾರ್ ಹಾಗೂ ಕಸಬಾ ಹೋಬಳಿ ಉಪ ತಹಶೀಲ್ದಾರ್ ಮನಬಂದಂತೆ ವಂಶವೃಕ್ಷ ದೃಢೀಕರಣ ಪತ್ರಗಳನ್ನು ನೀಡುವ ಮೂಲಕ ನಿಯಮಗಳನ್ನು ಉಲ್ಲಂಘನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ; (ಮಾಹಿತಿ ನೀಡುವುದು)

(ಆ) ಹೆಗ್ಗಡದೇವನಕೋಟೆ ತಹಶೀಲ್ದಾರ್ ದಿನಾಂಕ: ೧೪–೦೮–೨೦೨೪ರಂದು ತಹಶೀಲ್ದಾರ್ ಕಛೇರಿ ಕಸಬಾ ಹೋಬಳಿ ಉಪ

ತಹಶೀಲ್ದಾರರು ನೀಡಿರುವ ವಂಶವೃಕ್ಷ ಪತ್ರ ಸಂಖ್ಯೆ: ಆರ್‌ಡಿ ೦೦೩೮೪೯೫೩೪೨೧೪೬ ಯಾವ ದಾಖಲೆಗಳನ್ನು ಪಡೆದುಕೊಂಡಿರುತ್ತಾರೆ ; (ಮಾಹಿತಿ ನೀಡುವುದು)

(ಇ) ಅರ್ಜಿದಾರರು ನೀಡಿರುವ ದಾಖಲೆಗಳನ್ನು ನೈಜತೆಯನ್ನು ಪರಿಶೀಲನೆ ಮಾಡಲಾಗಿದೆಯೇ ; ಮಾಡಿದ್ದಲ್ಲಿ, ಮಾಹಿತಿ ನೀಡುವುದು ;

(ಈ) ನೈಜತೆಯನ್ನು ಪರಿಶೀಲನೆ ಮಾಡದೇ ವಂಶವೃಕ್ಷ ದೃಢೀಕರಣ ಪತ್ರ ನೀಡಿದ್ದರೆ ಅದನ್ನು ರದ್ದುಪಡಿಸಿ ಸಂಬಂಧಪಟ್ಟ ಅರ್ಜಿದಾರರು ಹಾಗೂ ತಹಶೀಲ್ದಾರರ ಹಾಗೂ ಕಸಬಾ ಹೋಬಳಿ ತಹಶೀಲ್ದಾರರ ವಿರುದ್ಧ ಸರ್ಕಾರ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೇ ? (ಮಾಹಿತಿ ನೀಡುವುದು)

## ಕಲ್ಯಾಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಖಾಲಿಯಿರುವ ಹುದ್ದೆಗಳ ಕುರಿತು

**ಡಾ॥ ಚಂದ್ರಶೇಖರ ಬಸವರಾಜ ಪಾಟೀಲ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೯೬೩ (೯೯೩) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಯಾಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು ;

(ಆ) ಚಾಲಕ ನಿರ್ವಾಹಕ ಹುದ್ದೆಗಳ ಭರ್ತಿಗೆ ಸರ್ಕಾರ ಕಾಲಮಿತಿ ಹಾಕಿಕೊಂಡಿದೆಯೇ ? (ವಿವರಿಸುವುದು)

## ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಂಚಿಕೆಯಾದ ಮನೆಗಳ ಕುರಿತು

**ಡಾ|| ಚಂದ್ರಶೇಖರ ಬಸವರಾಜ ಪಾಟೀಲ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೬೪ (೯೯೪) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಳೆದ ಎರಡು ವರ್ಷಗಳಲ್ಲಿ ಹಂಚಿಕೆಯಾದ ಮನೆಗಳ ಸಂಖ್ಯೆ ಎಷ್ಟು ;

(ಆ) ಹಂಚಿಕೆಯಾಗಿದ್ದಲ್ಲಿ ಅವರುಗಳ ಜಿಲ್ಲಾವಾರು ಮಾಹಿತಿ ನೀಡುವುದು ?

## ಕಲ್ಯಾಣ ಕರ್ನಾಟಕ ಭಾಗದಲ್ಲಿ ಸೇವೆಯಲ್ಲಿರುವ ಬಸ್ಸುಗಳ ಕುರಿತು

**ಡಾ|| ಚಂದ್ರಶೇಖರ ಬಸವರಾಜ ಪಾಟೀಲ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೬೫ (೯೯೫) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಂಚರಿಸುತ್ತಿರುವ ಹೊಸ ಬಸ್ಸುಗಳ ಸಂಖ್ಯೆ ಎಷ್ಟು ;

(ಆ) ಯಾವ ಯಾವ ಜಿಲ್ಲೆಗಳಿಗೆ ಎಷ್ಟು ಬಸ್ಸುಗಳು ಸಂಚರಿಸುತ್ತಿವೆ ? (ಜಿಲ್ಲಾವಾರು ಮಾಹಿತಿ ನೀಡುವುದು)

## ಪಶುಸಂಗೋಪನೆ ಇಲಾಖೆಯಲ್ಲಿರುವ ಯೋಜನೆಗಳ ಬಗ್ಗೆ

**ಡಾ|| ಚಂದ್ರಶೇಖರ ಬಸವರಾಜ ಪಾಟೀಲ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೬೬ (೧೦೧೦) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪಶುಸಂಗೋಪನೆ ಇಲಾಖೆಯಲ್ಲಿ ಪ್ರಸ್ತುತ ಯಾವ ಯಾವ ಯೋಜನೆಗಳು ಚಾಲ್ತಿಯಲ್ಲಿವೆ ; (ಮಾಹಿತಿ ಒದಗಿಸುವುದು)

(ಆ) ಕಲ್ಯಾಣ ಕರ್ನಾಟಕ ಭಾಗದಲ್ಲಿ ಎಷ್ಟು ಜನ ರೈತರಿಗೆ ಯಾವ ಯಾವ ಯೋಜನೆಗಳನ್ನು ಒದಗಿಸಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

## ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದ ಖೇಣಿ ವಾಣಿಜ್ಯ ಬಂದರು ಯೋಜನೆ ಸ್ಥಗಿತಗೊಳಿಸುವ ಬಗ್ಗೆ

**ಶ್ರೀ ಗಣಪತಿ ದುಮ್ಮಾ ಉಳ್ವೇಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೬೭ (೧೦೭೫) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯ, ಅಂಕೋಲಾದ ಖೇಣಿ ವಾಣಿಜ್ಯ ಬಂದರು ಯೋಜನೆಯಿಂದ ಸಮುದ್ರವನ್ನೇ ನಂಬಿದ್ದ ಮೀನುಗಾರರಿಗೆ ತೀರ ಸಂಕಷ್ಟ ಉಂಟಾಗಿರುವ ಕಾರಣದಿಂದ ಮತ್ತು ಈ ಯೋಜನೆಯ ವಿರುದ್ಧ ಸಾರ್ವಜನಿಕರು ಹಾಗೂ ಸ್ಥಳೀಯರು ಪರಿಸರ ಹಾನಿಯಾಗುವ ಬಗ್ಗೆ ಆತಂಕದಿಂದ ವಿರೋಧ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಸರ್ಕಾರ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಡಲ ತೀರಗಳನ್ನು ಗುರುತಿಸಿ ಖಾಸಗಿ ವಾಣಿಜ್ಯ ಬಂದರು ನಿರ್ಮಾಣ ಮಾಡುತ್ತಿರುವ ಯೋಜನೆಯನ್ನು ಸ್ಥಗಿತಗೊಳಿಸಲು ಕೈಗೊಂಡಿರುವ ಕ್ರಮಗಳೇನು ; (ಮಾಹಿತಿ ಒದಗಿಸುವುದು)

(ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಖಾಸಗಿ ವಾಣಿಜ್ಯ ಬಂದರು ನಿರ್ಮಾಣದಿಂದ ಆಗುವ ಪ್ರಕೃತಿ ವಿಕೋಪ ಹಾಗೂ ಪರಿಸರ

ಹಾನಿಯ ಬಗ್ಗೆ ಸಂಬಂಧಪಟ್ಟ ವಿಜ್ಞಾನಿಗಳಿಂದ ವರದಿ ಪಡೆಯಲಾಗಿದೆಯೇ ; (ಮಾಹಿತಿ ಒದಗಿಸುವುದು)

(ಇ) ಒಂದು ವೇಳೆ ಈ ಯೋಜನೆ ಅನುಷ್ಠಾನಗೊಂಡಲ್ಲಿ ಸದರಿ ಕಡಲ ತೀರಗಳ ನಿವಾಸಿಗಳಿಗೆ ಹಾಗೂ ಕಡಲ ತೀರಗಳಲ್ಲಿ ಮೀನುಗಾರಿಕೆ ಸೇರಿದಂತೆ ಇತರೆ ವಾಣಿಜ್ಯ ವ್ಯವಹಾರಗಳನ್ನು ನಡೆಸುವ ವ್ಯಾಪಾರಿಗಳಿಗೆ ಪರಿಹಾರ ಹಾಗೂ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆಯೇ ; (ಮಾಹಿತಿ ಒದಗಿಸುವುದು)

(ಈ) ಕಡಲ ತೀರದ ಭೂಮಿಯನ್ನು ಸರ್ಕಾರ ಖೇಣಿ ವಾಣಿಜ್ಯ ಯೋಜನೆಗೆ ಒಟ್ಟ ಎಷ್ಟು ಎಕರೆ ಜಾಗವನ್ನು ಗುರುತಿಸಲಾಗಿದೆ ? (ನೀಲಿನಕ್ಷೆ ಸಮೇತ ಸಂಪೂರ್ಣ ಮಾಹಿತಿ ಒದಗಿಸುವುದು)

## ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೬೮ (೯೬೫) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಯಾಣ ಕರ್ನಾಟಕದ ಸಾರಿಗೆ ಸಂಸ್ಥೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ವೃಂದವಾರು ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ಹುದ್ದೆಗಳನ್ನು ಭರ್ತಿ ಮಾಡದಿರಲು ಕಾರಣಗಳೇನು ; ಯಾವಾಗ ಭರ್ತಿ ಮಾಡಲಾಗುವುದು ;

(ಇ) ಖಾಲಿ ಇರುವ ಹುದ್ದೆಗಳ ಕಾರಣಕ್ಕಾಗಿ ಬಸ್ಸುಗಳ ಓಡಾಟ ಕಡಿಮೆಯಾಗಿದೆಯೇ ; ಆಗಿದ್ದರೆ, ಸಾರಿಗೆ ಸಂಸ್ಥೆಯ ಅರ್ಥಿಕ ಸ್ಥಿತಿ ಗತಿಯ ವಿವರ ನೀಡುವುದು ?

## ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿಕೊಂಡಿರುವ ಕುರಿತು

**ಶ್ರೀ ಎಂ.ಪಿ.ಕುಶಾಲಪ್ಪ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೬೯ (೧೦೩೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಂದಾಯ ಇಲಾಖೆ ವ್ಯಾಪ್ತಿಗೆ ಬರುವ ಸಾರ್ವಜನಿಕ ರಸ್ತೆ (ಗ್ರಾಮ ನಕ್ಷೆಯಲ್ಲಿ) ಜನರು ಓಡಾಡುವ ರಸ್ತೆಯನ್ನು ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ಸರ್ಕಾರ ಕೈಗೊಳ್ಳುವ ಕ್ರಮವೇನು ; (ಆದೇಶ ಪ್ರತಿಗಳನ್ನು ನೀಡುವುದು)

(ಆ) ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು ಹೋಬಳಿ, ಕೆಳಗೂರು ಗ್ರಾಮದ ಸರ್ವೆ ನಂ. ೧೧೩/೩ರಲ್ಲಿ ಹಾದು ಹೋಗುವ ಸರ್ಕಾರಿ ರಸ್ತೆಯನ್ನು (ಗ್ರಾಮ ನಕ್ಷೆ ಹಾಗೂ ಸರ್ವೆ ನಕ್ಷೆಯಲ್ಲಿ ಇರುವ) ಒತ್ತುವರಿ ಮಾಡಿಕೊಂಡು ನೂರಾರು ವರ್ಷದಿಂದ ಇದ್ದ ರಸ್ತೆಯನ್ನು ಮುಚ್ಚಿ ಕಾಫಿ ಗಿಡ ಹಾಕಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವವರ ವಿರುದ್ಧ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್‌ರವರಿಗೆ ದೂರು ನೀಡಿದರೂ ಇಲ್ಲಿಯವರೆಗೆ ಕ್ರಮಕೈಗೊಳ್ಳದಿರಲು ಕಾರಣವೇನು ; (ವಿವರ ನೀಡುವುದು)

(ಇ) ಗ್ರಾಮ ನಕ್ಷೆಯಲ್ಲಿ ಇದ್ದ ರಸ್ತೆಯನ್ನು ತೆರವು ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಲು ಇರುವ ತೊಡಕುಗಳೇನು ; (ವಿವರ ನೀಡುವುದು)

(ಈ) ಗ್ರಾಮ ನಕ್ಷೆ, ಸರ್ವೆ ನಕ್ಷೆ, ರಸ್ತೆ ಖರಾಬು ಮತ್ತು ಸರ್ಕಾರಿ ಆದೇಶಗಳು ಸದರಿ ಜಮೀನಿನ ಮಾಲೀಕರಿಗೆ ಅನ್ವಯವಾಗುವುದಿಲ್ಲವೇ ?

## ರಾಜ್ಯದ ಲೋಕೋಪಯೋಗಿ ಇಲಾಖೆಗೆ ಸೇರಿದ ವಸತಿ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೯೭೦ (೧೦೫೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೌಕರರಿಗೆ ವಾಸ್ತವ್ಯಕ್ಕೆ ಅನುಕೂಲವಾಗಲು ಲೋಕೋಪಯೋಗಿ ಇಲಾಖಾ ವತಿಯ ವ್ಯಾಪ್ತಿಗೆ ಒಳಪಟ್ಟ ವಸತಿ ಗೃಹಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ವಿಜಯಪುರ ನಗರದ ಆದಿಲ್‌ಶಾಹಿ ಹೋಟೆಲ್ ಪಕ್ಕದಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ವಸತಿ ನಿಲಯಗಳು ಪಾಳು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದನ್ನು ದುರಸ್ತಿಪಡಿಸಿ ನೌಕರರ ವಾಸ್ತವ್ಯಕ್ಕೆ ಅನುಕೂಲ ಮಾಡಿಕೊಡಲು ಯಾವ ಕ್ರಮಕೈಗೊಳ್ಳಲಾಗಿದೆ ;

(ಇ) ಕಳೆದ ೫ ವರ್ಷಗಳಲ್ಲಿ ಇಲಾಖೆ ವತಿಯಿಂದ ಎಷ್ಟು ವಸತಿ ಗೃಹಗಳನ್ನು ನಿರ್ಮಿಸಲಾಗಿದೆ ; ಹಾಗೂ ವಾಸಿಸುತ್ತಿರುವ ಸರ್ಕಾರಿ ಅಧಿಕಾರಿಗಳ ಕುಟುಂಬಗಳಿಗೆ ಯಾವ ರೀತಿಯ ವ್ಯವಸ್ಥೆಗಳನ್ನು ನೀಡಲಾಗಿದೆ ;

(ಈ) ರಾಜ್ಯದಲ್ಲಿರುವ ಬಹುತೇಕ ವಸತಿ ಗೃಹಗಳು ಪಾಳು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಪಾಳು ಬೀಳಲು ಕಾರಣಗಳೇನು ; ಕಳೆದ ೫ ವರ್ಷದಿಂದ ವಸತಿ ಗೃಹಗಳ ನಿರ್ವಹಣೆಗಾಗಿ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ ; (ಜಿಲ್ಲಾವಾರು ವಿವರ ಒದಗಿಸುವುದು)

(ಉ) ವಸತಿ ಗೃಹಕ್ಕಾಗಿ ಬೇಡಿಕೆ ಎಷ್ಟಿದೆ ; ಬೇಡಿಕೆಯನ್ನು ಈಡೇರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ನೌಕರರ ವಸತಿ ವ್ಯವಸ್ಥೆಗೆ ಅನುಕೂಲವಾಗಲು ಲೋಕೋಪಯೋಗಿ ಇಲಾಖಾ ವತಿಯ ವ್ಯಾಪ್ತಿಗೆ ಒಳಪಟ್ಟಂತೆ ವಸತಿ ಗೃಹಗಳ ಸಂಖ್ಯೆ ಎಷ್ಟು ? (ಮಾಹಿತಿ ಒದಗಿಸುವುದು)

## ಕರ್ನಾಟಕ ರಾಜ್ಯದಲ್ಲಿನ ಮನೆ ಹಾನಿಗಾಗಿ ನೀಡುವ ಪರಿಹಾರ ಹಣದ ಕುರಿತು

**ಡಾ॥ ಎಂ.ಜಿ.ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೭೧ (೧೦೮೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮೀಣ ಭಾಗದಲ್ಲಿ ಮನೆಗಳು ಹಾನಿಯಾದಾಗ ಫಲಾನುಭವಿಗಳಿಗೆ ಪರಿಹಾರವನ್ನು ನೀಡಲು ಇರುವ ಮಾನದಂಡಗಳೇನು ; ಮನೆ ಹಾನಿ ಪರಿಹಾರವನ್ನು ಎಷ್ಟು ಬಾರಿ ಪಡೆಯಲು ಅವಕಾಶವಿದೆ ; (ಆದೇಶದ ಪ್ರತಿಯೊಂದಿಗೆ ಮಾಹಿತಿ ಒದಗಿಸುವುದು)

(ಆ) ಕಳೆದ ೨ ವರ್ಷಗಳಲ್ಲಿ ಮನೆ ಹಾನಿಗೆ ಪರಿಹಾರದ ರೂಪಕವಾಗಿ ಎಷ್ಟು ಚೆಕ್‌ಗಳನ್ನು ಫಲಾನುಭವಿಗಳಿಗೆ ನೀಡಲಾಗಿದೆ ಇವುಗಳಲ್ಲಿ

ಎಷ್ಟು ಚೆಕ್‌ಗಳು ಬೌನ್ಸ್ ಆಗಿವೆ ; ಚೆಕ್ ಬೌನ್ಸ್ ಆಗಿದ್ದಲ್ಲಿ ಅಂತಹ ಚೆಕ್‌ಗಳನ್ನು ನೀಡಿರುವ ಎಷ್ಟು ಪ್ರಕರಣಗಳು ದಾಖಲಾಗಿವೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಇ) ಚೆಕ್ ಬೌನ್ಸ್ ಪ್ರಕರಣಗಳಲ್ಲಿ ಅಧಿಕಾರಿಗಳ ಕೈವಾಡ ಇದೆಯೇ ; ಇದ್ದಲ್ಲಿ ಇಂತಹ ಪ್ರಕರಣಗಳಲ್ಲಿ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಮಾಹಿತಿ ಒದಗಿಸುವುದು)

## ಸರ್ವೆ ಅಳತೆಗೆ ಬಳಸುತ್ತಿದ್ದ ಸರಪಳಿ ಬದಲಿಗೆ ರೋವರ್ ಬಳಕೆ ಕುರಿತು

**ಡಾ॥ ಎಂ.ಜಿ.ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೭೨ (೧೦೮೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಭೂಮಿ ಸರ್ವೆ ಅಳತೆಗೆ ಬಳಸುತ್ತಿದ್ದ ಸರಪಳಿ ಪದ್ಧತಿ ಬದಲಿಗೆ ಆಧುನಿಕ ತಂತ್ರಜ್ಞಾನ ಆಧಾರಿತ ರೋವರ್ ಬಳಕೆ ಮಾಡಲಾಗಿದೆಯೇ ;

(ಆ) ಹಾಗಿದ್ದಲ್ಲಿ, ಈ ರೋವರ್ ಬಳಕೆಯ ವೈಶಿಷ್ಟ್ಯವೇನು ಹಾಗೂ ಇದರ ಕಾರ್ಯ ಚಟುವಟಿಕೆಗಳೇನು ; (ಸಂಪೂರ್ಣ ವಿವರಣೆ ನೀಡುವುದು)

(ಇ) ಈ ರೋವರ್ ಆಧಾರಿತ ಸರ್ವೆ ಮಾಡಲು ಈಗಾಗಲೇ ಪ್ರಾಯೋಗಿಕವಾಗಿ ಯಾವುದಾದರೂ ಜಿಲ್ಲೆಯೊಂದನ್ನು ಆಯ್ಕೆ ಮಾಡಿಕೊಂಡು ಸರ್ವೆ ಕಾರ್ಯ ಮಾಡಲಾಗಿದೆಯೇ ; (ವಿವರ ನೀಡುವುದು)

(ಈ) ಆಧುನಿಕ ತಂತ್ರಜ್ಞಾನ ಆಧಾರಿತ ರೋವರ್ ಸರ್ವೆ ಕಾರ್ಯವನ್ನು ರಾಜ್ಯದಲ್ಲಿ ಎಂದಿನಿಂದ ಜಾರಿಗೆ ತರಲಾಗಿದೆ ; (ಸ್ಪಷ್ಟಪಡಿಸುವುದು)

(ಉ) ಇದೇ ರೀತಿಯಾಗಿ ಸರ್ವೆ ಇಲಾಖೆಯಲ್ಲಿ ಈಗಿನ ಆಧುನಿಕ ಕಂಪ್ಯೂಟರ್ ಯುಗದಲ್ಲಿ ಹೊಸದಾಗಿ ನವೀನ ಮಾದರಿಯ ಯಾವ ಯಾವ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲಾಗಿದೆ ? (ವಿವರವಾದ ಮಾಹಿತಿ ನೀಡುವುದು)

## ಪಶುಸಂಗೋಪನೆ ಇಲಾಖೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗಾಗಿ ಇರುವ ಯೋಜನೆ ಕುರಿತು

**ಡಾ॥ ಎಂ.ಜಿ.ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೭೩ (೧೦೮೭) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪಶುಸಂಗೋಪನೆ ಇಲಾಖೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದವರಿಗಾಗಿ ಇರುವ ಯೋಜನೆಗಳು ಯಾವುವು ; (ವಿವರ ನೀಡುವುದು)

(ಆ) ಪಶುಸಂಗೋಪನೆ ಇಲಾಖೆಯಲ್ಲಿ ಇರುವ ಸಾಲದ ಯೋಜನೆಗಳಾವುವು ಮತ್ತು ಫಲಾನುಭವಿಗಳಾಗಲು ಇರುವ ಮಾನದಂಡಗಳಾವುವು ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಪಶುಪಾಲಕ ಸಮಾಜದವರಿಗಾಗಿ ಬೇಸಿಗೆಯಲ್ಲಿ ಉಂಟಾಗುವ ಮೇವಿನ ಕೊರತೆಯನ್ನು ನೀಗಿಸಲು ಸರ್ಕಾರ ತೆಗೆದುಕೊಳ್ಳುವ ಮುನ್ನೆಚ್ಚರಿಕೆ ಕ್ರಮಗಳಾವುವು ; (ವಿವರ ನೀಡುವುದು)

## ಗೋಹತ್ಯೆ, ಗೋಹಿಂಸೆ ಮತ್ತು ಅಕ್ರಮ ಗೋಸಾಗಾಣಿಕೆ ವಿರುದ್ಧ ಕೈಗೊಂಡ ಕ್ರಮದ ಕುರಿತು

**ಡಾ॥ ಎಂ.ಜಿ.ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೭೪ (೧೦೮೮) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗೋಹತ್ಯೆ, ಗೋಹಿಂಸೆ ಮತ್ತು ಅಕ್ರಮ ಗೋಸಾಗಾಣಿಕೆ ಪ್ರಕರಣಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಕಳೆದ ೨ ವರ್ಷದಿಂದ ಎಷ್ಟು ಗೋಹತ್ಯೆ, ಗೋಹಿಂಸೆ ಮತ್ತು ಅಕ್ರಮ ಗೋಸಾಗಾಣಿಕೆ ಪ್ರಕರಣಗಳು ದಾಖಲಾಗಿವೆ ;

(ಆ) ಈ ಪ್ರಕರಣಗಳಲ್ಲಿ ಎಷ್ಟು ಜನರನ್ನು ಬಂಧಿಸಲಾಗಿದೆ ; ಎಷ್ಟು ಜನರು ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿವೆ ; (ಪ್ರಕರಣವಾರು ವಿವರ ನೀಡುವುದು)

(ಇ) ಕಳೆದ ೨ ವರ್ಷದಿಂದ ಗೋಹತ್ಯೆ, ಗೋಹಿಂಸೆ ಮತ್ತು ಗೋಸಾಗಾಣಿಕೆ ಪ್ರಕರಣಗಳನ್ನು ತಡೆಯಲು ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ ? (ವಿವರ ಒದಗಿಸುವುದು)

## ಬೀದರ್ ಜಿಲ್ಲೆಯಲ್ಲಿ ಕೈಗೊಂಡಿರುವ ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳ ಬಗ್ಗೆ

**ಡಾ॥ ಎಂ.ಜಿ.ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೭೫ (೧೦೮೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ ಸರ್ಕಾರ ಬಂದಾಗಿನಿಂದ ಲೋಕೋಪಯೋಗಿ ಇಲಾಖೆಯಿಂದ ಕೈಗೊಳ್ಳಲಾಗಿರುವ ಒಟ್ಟು ಕಾಮಗಾರಿಗಳೆಷ್ಟು ; ಸದರಿ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಕಳೆದ ಒಂದು ವರ್ಷದಿಂದ ಪ್ರಗತಿಯಲ್ಲಿರುವ ಕಾಮಗಾರಿಗಳು ಎಷ್ಟು ಹಾಗೂ ಪ್ರಸ್ತುತ ಸರ್ಕಾರ ರಚನೆಯಾದ ನಂತರ ಎಷ್ಟು ಹೊಸ ರಸ್ತೆ ಹಾಗೂ ಸೇತುವೆಗಳನ್ನು ನಿರ್ಮಾಣ ಮಾಡಲಾಗಿದೆ ; (ವಿವರ ನೀಡುವುದು)

(ಇ) ಲೋಕೋಪಯೋಗಿ ಇಲಾಖೆಯಿಂದ ಸದರಿ ಕಾಮಗಾರಿಗಳಿಗೆ ಯಾವ ಯಾವ ಲೆಕ್ಕ ಶೀರ್ಷಿಕೆಗಳಡಿ ಅನುದಾನ ಬಿಡುಗಡೆ ಮಾಡಲಾಗಿದೆ ? (ವಿವರ ಒದಗಿಸುವುದು)

## ಕಲಬುರಗಿ–ಯಾದಗಿರಿ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ಕುರಿಗಾಯಿಗಳ ಯೋಜನೆ ಕುರಿತು

**ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೭೬ (೯೭೭) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ–ಯಾದಗಿರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಅಮೃತ್ ಸ್ವಾಭಿಮಾನ ಕುರಿಗಾಯಿ ಯೋಜನೆಯಡಿ ಘಟಕ ಸ್ಥಾಪನೆಗೆ ಕಳೆದ ೨ ವರ್ಷಗಳಲ್ಲಿ ಆಯ್ಕೆಯಾಗಿರುವ ಕುರಿಗಾಯಿಗಳ ಸಂಖ್ಯೆ ಎಷ್ಟು ;

(ಆ) ಆಯ್ಕೆಯಾದ ಕುರಿಗಾಯಿ ಸದಸ್ಯರಿಗೆ ಸಹಾಯಧನ ನೀಡಲಾಗುವುದೇ ನೀಡುವುದಿದ್ದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ನೀಡಲಾಗುವ ಸಹಾಯಧನ ಎಷ್ಟು ; (ವಿವರ ಒದಗಿಸುವುದು)

(ಇ) ಇದುವರೆಗೂ ಅಮೃತ ಸ್ವಾಭಿಮಾನ ಕುರಿಗಾಯಿ ಯೋಜನೆ ಅಡಿಯಲ್ಲಿ ಸಲ್ಲಿಕೆ ಆಗಿರುವ ಅರ್ಜಿಗಳ ಸಂಖ್ಯೆ ಎಷ್ಟು ; ಫಲಾನುಭವಿಗಳ ಆಯ್ಕೆಗೆ ಸರ್ಕಾರ ನಿಗದಿ ಮಾಡಿರುವ ಮಾನದಂಡಗಳೇನು ? (ವಿವರ ನೀಡುವುದು)

## ಕಲಬುರಗಿ–ಯಾದಗಿರಿ ಜಿಲ್ಲೆಗಳಲ್ಲಿ ಅಕ್ರಮ–ಸಕ್ರಮ ಯೋಜನೆಯಡಿ ಹಕ್ಕು ಪತ್ರ ವಿತರಣೆ ಮಾಡಿರುವ ಬಗ್ಗೆ

**ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೭೭ (೯೭೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ–ಯಾದಗಿರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕಂದಾಯ ಭೂಮಿ ಒತ್ತುವರಿ ಮಾಡಿ ಮನೆ ಕಟ್ಟಿದ ಬಡವರಿಗೆ ಅಕ್ರಮ–ಸಕ್ರಮ ಯೋಜನೆ ಅಡಿಯಲ್ಲಿ ಒಟ್ಟು ಎಷ್ಟು ಹಕ್ಕು ಪತ್ರಗಳನ್ನು ವಿತರಿಸಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಅವುಗಳಲ್ಲಿ ಎಷ್ಟು ಹಕ್ಕು ಪತ್ರಗಳು ನೋಂದಣಿಯಾಗಿವೆ ; ಇನ್ನು ನೋಂದಣಿಯಾಗದ ಹಕ್ಕು ಪತ್ರಗಳ ಸಂಖ್ಯೆ ಎಷ್ಟು ;

(ಇ) ಕೆಲವು ಫಲಾನುಭವಿಗಳು ಕಂದಾಯ ಭೂಮಿಯಲ್ಲಿ ಒತ್ತುವರಿ ಮಾಡಿ ಮನೆ ಕಟ್ಟಿಕೊಂಡಿದ್ದರೂ ಸಹ ಹಕ್ಕು ಪತ್ರ ನೀಡದಿರಲು ಕಾರಣವೇನು ; ಈ ಸಮಸ್ಯೆಯನ್ನು ಪರಿಹಾರ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ? (ಮಾಹಿತಿ ನೀಡುವುದು)

## ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿರುವ ದೇವಾಲಯಗಳ ಬಗ್ಗೆ

**ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೭೮ (೯೭೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ಒಟ್ಟು ದೇವಾಲಯಗಳ ಸಂಖ್ಯೆ ಎಷ್ಟು ;

(ಆ) ಇವುಗಳಲ್ಲಿ ಮುಜರಾಯಿ ದೇವಾಲಯಗಳು ಎಷ್ಟು ಹಾಗೂ ಮುಜರಾಯಿ ಇಲಾಖೆ ವ್ಯಾಪ್ತಿಗೊಳಪಡೆದ ದೇವಾಲಯಗಳು ಎಷ್ಟು ;

(ಇ) ಕಲಬುರಗಿ–ಯಾದಗಿರಿ ಜಿಲ್ಲೆಗಳಿಗೆ ಕಳೆದ ೨ ವರ್ಷಗಳಲ್ಲಿ ಮುಜರಾಯಿ ದೇವಾಲಯಗಳ ಅಭಿವೃದ್ಧಿಗಾಗಿ ಸರ್ಕಾರ ನೀಡಿರುವ ಅನುದಾನದ ಮೊತ್ತ ಎಷ್ಟು ;

(ಈ) ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ಮುಜರಾಯಿ ದೇವಾಲಯಗಳಿಂದ ಸಂಗ್ರಹಿಸಲಾದ ಹುಂಡಿಯ ಹಣ ಎಷ್ಟು; ಸದರಿ ಹಣವನ್ನು ಸರ್ಕಾರ ಯಾವ ಉದ್ದೇಶಕ್ಕೆ ಬಳಕೆ ಮಾಡಿದೆ ? (ಮಾಹಿತಿ ನೀಡುವುದು)

# ಬಾಗಲಕೋಟೆ ಜಿಲ್ಲೆಯಿಂದ ಬೆಂಗಳೂರಿಗೆ ಬರಲು ವೋಲ್ವೋ ಹವಾ ನಿಯಂತ್ರಿತ ಸರ್ಕಾರಿ ಬಸ್ ಕಲ್ಪಿಸುವ ಬಗ್ಗೆ

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೭೯ (೧೦೪೨) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಹಲವು ಜಿಲ್ಲೆಗಳು ಸೇರಿದಂತೆ ಬಾಗಲಕೋಟೆ ಜಿಲ್ಲೆಯಿಂದಲೂ ದಿನನಿತ್ಯ ೩೦೦೦ಕ್ಕಿಂತ ಹೆಚ್ಚು ಜನರು ರಾಜಧಾನಿ ಬೆಂಗಳೂರಿಗೆ ಕೆಲಸದ ನಿಮಿತ್ತವಾಗಿ ಬಂದು ಹೋಗುತ್ತಿದ್ದು, ಸರ್ಕಾರ ಅವರ ಅನುಕೂಲಕ್ಕಾಗಿ ಈವರೆಗೂ ಒಂದೇ ಒಂದು ವೋಲ್ವೋ, ಹವಾ ನಿಯಂತ್ರಿತ ಸರ್ಕಾರಿ ಬಸ್‌ಗಳನ್ನು ಓಡಿಸದಿರಲು ಕಾರಣವೇನು ;

(ಆ) ಇದನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ಖಾಸಗಿ ಬಸ್ ಮಾಲೀಕರು ಅನಿಯಂತ್ರಿತ ದರಗಳನ್ನು ಪ್ರಯಾಣಿಕರ ಮೇಲೆ ಹೇರುತ್ತಿದ್ದು, ಪ್ರಯಾಣಿಕರು ಶೋಷಣೆಗೆ ಒಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಪ್ರಯಾಣಿಕರ ಶೋಷಣೆ ತಪ್ಪಿಸಲು ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ ಬೆಂಗಳೂರಿಗೆ ಬರಲು ವೋಲ್ವೋ ಮತ್ತು ಹವಾನಿಯಂತ್ರಿತ ಬಸ್‌ಗಳನ್ನು ಯಾವ ಕಾಲಮಿತಿಯಲ್ಲಿ ಒದಗಿಸಲಾಗುವುದು ?

# ಮೈಸೂರು, ಹಾಸನ, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ರಸ್ತೆ ಅಭಿವೃದ್ಧಿ ಕುರಿತು

**ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) :–**

೯೮೦ (೯೭೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು, ಹಾಸನ, ಮಂಡ್ಯ, ಚಾಮರಾಜನಗರ ಈ ಜಿಲ್ಲೆಗಳಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ಅಭಿವೃದ್ಧಿಪಡಿಸಲು ೨೦೨೩ರಿಂದ ೨೦೨೫ನೇ ಸಾಲಿನವರೆಗೆ ಎಷ್ಟು ಕಾಮಗಾರಿಗಳಿಗೆ ಸರ್ಕಾರದಿಂದ ಅನುದಾನವನ್ನು ಮಂಜೂರು ಮಾಡಲಾಗಿದೆ ; (ತಾಲ್ಲೂಕುವಾರು ಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಜಿಲ್ಲೆಗಳ ರಸ್ತೆಗಳು ತುಂಬಾ ದುರಸ್ತಿಯಲ್ಲಿ ಇರುವುದರಿಂದ ಈ ಪ್ರದೇಶದ ರಸ್ತೆಗಳಲ್ಲಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ದಿನನಿತ್ಯ ಸಂಚಾರ ಮಾಡಲು ಬಹಳ ತೊಂದರೆ ಆಗುತ್ತಿರುವುದರಿಂದ ಸರ್ಕಾರವು ಹೆಚ್ಚಿನ ಅನುದಾನವನ್ನು ನೀಡಲು ಯಾವ ಕ್ರಮವನ್ನು ಕೈಗೊಂಡಿದೆ ?

**ಕೆ. ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. O63/350 ಪ್ರತಿಗಳು/06–08–2025